ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 12 ಶುಕ್ರವಾರ 2023

₹4

ಸಂಪುಟ: 44 | ಸಂಚಿಕೆ: 26 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಮಲ್ಲಿಕಾರ್ಜುನ ಖರ್ಗೆ ಕುಟುಂಬಕ್ಕೆ ಕೊಲೆ ಬೆದರಿಕೆ ಖಂಡನೀಯ



ಮೈಸೂರು, ಮೇ 11– ಚಿತ್ತಾಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮಣಿಕಂಠ ರಾಠೋಡ ಅವರು ಪ್ರಿಯಾಂಕ ಖರ್ಗೆ ಮತ್ತು ಕುಟುಂಬವರಿಗೆ ಕೊಲೆ ಬೆದರಿಕೆ ಹಾಕಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಖಂಡನೀಯ ಎಂದು ಮೈಸೂರು ಅಶೋಕಪುರಂ ಆದಿ ಕರ್ನಾಟಕ ಮಹಾ ಸಂಸ್ಥೆಯ ಅಧ್ಯಕ್ಷ ಸಿದ್ದರಾಜು ಪಿ (ಸುನೀಲ್) ಹಾಗೂ ಉಪಾಧ್ಯಕ್ಷ ಶಿವ ಸ್ವಾಮಿ ತೀವ್ರವಾಗಿ ಖಂಡಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಧರ್ಮ ಮತ್ತು ಜಾತಿಯ ಹೆಸರಿನಲ್ಲಿ ದ್ವೇಷವನ್ನು ಬಿತ್ತಿ ವಿಭಜನೆಗೆ ಕಾರಣವಾಗುತ್ತಿರುವ ಕೋಮುವಾದಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಸಂವಿಧಾನವೇ ಪವಿತ್ರ ಎಂದು ನಂಬಿರುವ ನಾವು ಯಾವುದೇ ವ್ಯಕ್ತಿಗಳಾಗಲೀ ಸಮಾಜದಲ್ಲಿ ಸಮಾನತೆಯಿಂದ ಬದುಕುವ ಹಕ್ಕನ್ನು ಉಳ್ಳವರಾಗಿರುತ್ತೇವೆ. ಯಾವುದೇ ವ್ಯಕ್ತಿ ಚುನಾವಣೆಯಲ್ಲಿ ನಿಂತು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಜೆಗಳ ಮತವನ್ನು ಪಡೆದು ಗೆದ್ದು ತೋರಿಸಬೇಕೇ ವಿನಃ ಈ ರೀತಿ ಸಂವಿಧಾನ ವ್ಯವಸ್ಥೆಯಲ್ಲಿ ಕಾನೂನುಬಾಹಿರ ಕೊಲೆ ಸುಲಿಗೆ ಬೆದರಿಕೆಗಳನ್ನೊಡ್ಡುವುದಲ್ಲ. ಒಂದು ಕುಟುಂಬವನ್ನು ಕೊಲೆ ಮಾಡುತ್ತೇವೆಂದು ಬೆದರಿಕೆ ಹಾಕಿರುವುದು ತೀವ್ರ ಖಂಡನೀಯ ಎಂದು ತಿಳಿಸಿದ್ದಾರೆ.

ಸರ್ಕಾರ ಹಾಗೂ ಕಾನೂನು ವ್ಯವಸ್ಥೆ ಇವರ ಬಗ್ಗೆ ತೀವ್ರವಾದ ಕ್ರಮ ಜರುಗಿಸಿ ಬಂಧಿಸಬೇಕೆಂದು ಆಗ್ರಹಿಸಿದ್ದಾರೆ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಉಗ್ರ ಹೋರಾಟ ಹಾಗೂ ಪ್ರತಿಭಟನೆಯನ್ನು ಹಮ್ಮಿಕೊಳ್ಳುವುದಾಗಿ ಎಚ್ಚರಿಸಿದ್ದಾರೆ. ತುರ್ತಾಗಿ ಕಾನೂನುಬಾಹಿರವಾಗಿ ಮಾತನಾಡಿರುವ ಮಣಿಕಂಠ ರಾಠೋಡರವರನ್ನು ಬಂಧಿಸಿ ನ್ಯಾಯ ಒದಗಿಸಿಕೊಡಬೇಕೆಂದು ಆದಿ ಕರ್ನಾಟಕ ಮಹಾಸಂಸ್ಥೆ ಅಧ್ಯಕ್ಷ ಪಿ.ಸಿದ್ಧರಾಜು (ಸುನೀಲ್), ಉಪಾಧ್ಯಕ್ಷ ಶಿವಸ್ವಾಮಿ, ಕಾರ್ಯದರ್ಶಿ ರಾಜಮುಗ, ಕೃಷ್ಣಮೂರ್ತಿ, ಮಹಾಲಿಂಗಯ್ಯ ಆಗ್ರಹಿಸಿದ್ದಾರೆ.

ಈ ಜನ್ಮದಲ್ಲಿ ಚಾ.ನಗರದಿಂದ ಚುನಾವಣೆಗೆ ಸ್ಪರ್ಧಿಸುವುದಿಲ್ಲ

ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ವ್ಯಾಪಕವಾಗಿ ಮತದಾರರಿಗೆ ಹಣ ಹಂಚಿದ್ದರಿಂದ ಬೇಸತ್ತು ಈ ನಿರ್ಧಾರ: ವಾಟಾಳ್ ನಾಗರಾಜ್ ನೋವಿನ ನುಡಿ



ಮೈಸೂರು, ಮೇ 11(ಜಿಎ)– ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಚಾಮರಾಜನಗರದಲ್ಲಿ ಭಾರೀ ಅಕ್ರಮಗಳು ನಡೆದಿರುವ ಹಿನ್ನೆಲೆಯಲ್ಲಿ ಚುನಾವಣಾ ಆಯೋಗವು ಈ ಚುನಾವಣೆ ಪ್ರಕ್ರಿಯೆಯನ್ನು ಅಸಿಂಧುಗೊಳಿಸಿ, ಮರು ಚುನಾವಣೆ ನಡೆಸಬೇಕು ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಹಾಗೂ ಕನ್ನಡ ಹೋರಾಟಗಾರರೂ ಆದ ವಾಟಾಳ್ ನಾಗರಾಜ್ ಆಗ್ರಹಿಸಿದರು.

ನಗರದ ಜಯಚಾಮರಾಜೇಂದ್ರ ವೃತ್ತದ ಬಳಿ ಗುರುವಾರ ಚಾಮರಾಜನಗರದಲ್ಲಿ ಕಾಂಗ್ರೆಸ್, ಜೆಡಿಎಸ್ ಮತ್ತು ಬಿಜೆಪಿ ಪಕ್ಷದ ಅಭ್ಯರ್ಥಿಗಳು ಹಣದ ಹೊಳೆಯನ್ನೇ ಹರಿಸಿದ್ದಾರೆ ಎಂದು ಆರೋಪಿಸಿ, ಪ್ರತಿಭಟನೆ ಮಾಡಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಎಲ್ಲಾ ಕ್ಷೇತ್ರದಲ್ಲೂ ಹಣ ನೀಡಿ ಮತವನ್ನು ಖರೀದಿ ಮಾಡಿದ್ದಾರೆ. ಚುನಾವಣಾ ಆಯೋಗವು ರಾಜ್ಯದ ಇಡೀ ಚುನಾವಣೆ ಪ್ರಕ್ರಿಯೆಯನ್ನು ರದ್ದು ಮಾಡಬೇಕು. ಇದು ಭ್ರಷ್ಟಾಚಾರದ ಪರಮಾವಧಿಯಾಗಿದ್ದು, ಮತ್ತೆ ಪ್ರಾಮಾಣಿಕವಾಗಿ ಚುನಾವಣೆ ನಡೆಸಬೇಕು. ನಾನು ಒಬ್ಬ ಅಭ್ಯರ್ಥಿಯಾಗಿ ಮಾತ್ರ ಹೇಳುತ್ತಿಲ್ಲ. ಪ್ರಾಮಾಣಿಕತೆಗೆ ಅತ್ಯಂತ ಗೌರವ ನೀಡುವ ವ್ಯಕ್ತಿಯಾಗಿರುವ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ. ಸೋಮಣ್ಣ ಸೇರಿದಂತೆ ಎಲ್ಲರನ್ನು ಅಸಿಂಧುಗೊಳಿಸಿ ಮರು ಚುನಾವಣೆ ಮಾಡಿ ಎಂದು ವಾಟಾಳ್ ನಾಗರಾಜ್ ಒತ್ತಾಯಿಸಿದರು.

ಚಾಮರಾಜನಗರದಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಮತದಾರರಿಗೆ ಹಣ ಹಂಚಿದ್ದಾರೆ. ಆಯೋಗವು ಒಬ್ಬ ಅಭ್ಯರ್ಥಿಯು 40 ಲಕ್ಷ ರೂ. ಮಾತ್ರ ಖರ್ಚು ಮಾಡಬೇಕೆಂದು ನಿಬಂಧನೆ ಹೇರಿದರೂ, ಕೋಟ್ಯಾಂತರ ರೂ ಖರ್ಚು ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ನಾನು ಅಭ್ಯರ್ಥಿಯಾದರು ಚಾಮರಾಜನಗರದಲ್ಲಿ ಚುನಾವಣೆ ಬಹಿಷ್ಕರಿಸಿ, ಅಲ್ಲಿ ಮತಯಾಚನೆ ಮಾಡಲಿಲ್ಲ. ಚುನಾವಣೆಗೆ ಏಜೆಂಟ್‌ಗಳನ್ನು ಕಳಿಸಲಿಲ್ಲ ಎಂದು ವಿಷಾದಿಸಿದರು.

ಸದನದಲ್ಲಿ ರೌಡಿಗಳು!

ಚಾಮರಾಜನಗರದಲ್ಲಿ ಚುನಾವಣೆಗೆ ನಾನು ಸ್ಪರ್ಧಿಸಬಾರದಿತ್ತು. ಪ್ರಾಮಾಣಿಕವಾಗಿ ಈ ಹಿಂದೆ ಅಭಿವೃದ್ಧಿ ಮಾಡಿದ್ದೇನೆ. ಜಾತಿ, ಹಣ ಬಲದ ಮುಂದೆ ನನ್ನ ಕೆಲಸಗಳಿಗೆ ಬೆಲೆ ಸಿಗಲಿಲ್ಲ. ಕಳೆದ 8 ತಿಂಗಳಿನಿಂದ ಪ್ರಚಾರ ಮಾಡಿದೆ. ಅಲ್ಲಿನ ಜನತೆ ನಿಜವಾಗಿ ಮತ ನೀಡುತ್ತಾರೆಂದು ಭರವಸೆ ನೀಡಿದರು. ಆದರೆ ಮಾಡಲಿಲ್ಲ. ಇದೇ ರೀತಿ ಹಣ, ಜಾತಿ ಬಲದಿಂದ ಚುನಾವಣೆಗಳು ನಡೆದರೆ, ಮುಂದಿನ ದಿನಗಳಲ್ಲಿ ರೌಡಿಗಳು ವಿಧಾನಸೌಧಕ್ಕೆ ಬರುತ್ತಾರೆ. ಶಾಸಕರು ಮಂತ್ರಿಗಳಾಗುತ್ತಾರೆ. ರೌಡಿಗಳೇ ಗೃಹಮಂತ್ರಿಗೆ ಲಾಂಗ್ ಹಿಡಿದು ಹೊಡೆಯುವ ಕಾಲ ಬರುತ್ತದೆ. ಇದು ಬದಲಾವಣೆಯಾಗಬೇಕು. ನಾನು ಈ ಜನ್ಮದಲ್ಲಿ ಚಾಮರಾಜನಗರದಿಂದ ಚುನಾವಣೆಗೆ ಸ್ಪರ್ಧಿಸುವುದಿಲ್ಲ. **–ವಾಟಾಳ್ ನಾಗರಾಜ್, ಚಾ.ನಗರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ**

ಪ್ರಶ್ನಿಸಲಿಲ್ಲ: ಕ್ಷೇತ್ರದಲ್ಲಿ ರಾತ್ರಿ ಪೂರ್ತಿ 50 ಜನರು ಒಂದು ಕಡೆಯಿಂದ ವ್ಯವಸ್ಥಿತವಾಗಿ ಹಣವನ್ನು ಹಂಚಿದ್ದಾರೆ. ಇದನ್ನು ಪೊಲೀಸರು, ಚುನಾವಣಾಧಿಕಾರಿಗಳು ಪ್ರಶ್ನಿಸಲಿಲ್ಲ. ಇದು ಚಾಮರಾಜನಗರದಲ್ಲಿ ಮಾತ್ರ ನಡೆದಿಲ್ಲ. ಇಡೀ ರಾಜ್ಯದಲ್ಲಿ ಇದೇ ರೀತಿ ಹಣ ಹಂಚಿಕೆ ಮಾಡಿದ್ದಾರೆ. ಆದರೆ, ಈವರೆಗೂ ಹಣ ಹಂಚಿದವರು ಅಥವಾ ಪಡೆದವರನ್ನು ಬಂಧಿಸಿಲ್ಲ. ರಾಜ್ಯದ ಹಿರಿಯ ಸಾಹಿತಿಗಳು, ಪತ್ರಕರ್ತರು ಹಿರಿಯ ನಾಗರಿಕರು, ಐಎಎಸ್, ಐಪಿಎಸ್ ಅಧಿಕಾರಿಗಳು ಪ್ರಶ್ನಿಸಲಿಲ್ಲ ಇದು ಬೇಸರದ ವಿಚಾರವಾಗಿದೆ ಎಂದರು.

ದಕ್ಷ ಅಧಿಕಾರಿಗಳು ಬೇಕು: ರಾಜ್ಯದಲ್ಲಿ ಚುನಾವಣಾ ಆಯೋಗ ಸತ್ತು ಹೋಗಿದೆ. ಈ ಹಿಂದೆ ಚುನಾವಣಾಧಿಕಾರಿಗಳಾಗಿದ್ದ ಪೀಟರ್, ಟಿ.ಎನ್. ಶೇಷನ್ ಸೇರಿದಂತೆ ಇನ್ನಿತರ ದಕ್ಷ ಅಧಿಕಾರಿಗಳು ಯಾವುದೇ ಅಕ್ರಮಗಳು ನಡೆಯದಂತೆ ಚುನಾವಣೆಯನ್ನು ನಡೆಸುತ್ತಿದ್ದರು. ಆದರೆ, ಇಂದು ಅಕ್ರಮಗಳ ಬಗ್ಗೆ ಯಾರೂ ಧ್ವನಿ ಎತ್ತುತ್ತಿಲ್ಲ ಎಂದು ವಾಟಾಳ್ ನಾಗರಾಜ್ ಕಿಡಿಕಾರಿದರು.

ಪ್ರಧಾನಿ ರಾಜೀನಾಮೆ ನೀಡಿ: ದೇಶದ ಪ್ರಧಾನ ಮಂತ್ರಿ, ಗೃಹಮಂತ್ರಿಗಳು ಕಳೆದ 15 ದಿನಗಳಿಂದ ರಾಜ್ಯದಲ್ಲಿ ರೋಡ್ ಶೋ, ರ್‍ಯಾಲಿಗಳನ್ನು ಮಾಡಿ ಜನರ ಜೀವನವನ್ನು ಹಾಳು ಮಾಡಿದ್ದಾರೆ. ಜೊತೆಗೆ 300 ಹೆಲಿಕಾಪ್ಟರ್‌ಗಳನ್ನು ಅದಕ್ಕೆ ಬಳಸಿಕೊಂಡಿದ್ದಾರೆ. ಅದಕ್ಕೆ ಒಮ್ಮೆಗೆ 25 ಲಕ್ಷ ರೂ. ವೆಚ್ಚ ತಗಲುತ್ತದೆ. ಅದು ಜನರ ಹಣವಾಗಿದ್ದು, ಪ್ರಧಾನಮಂತ್ರಿ, ಗೃಹಮಂತ್ರಿ ಈ ರೀತಿ ರ್‍ಯಾಲಿ, ರೋಡ್ ಶೋಗಳನ್ನು ಮಾಡಬೇಕು ಎಂದರೆ, ಮೊದಲು ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಬೇಕು ಎಂದು ಕಿಡಿಕಾರಿದರು.

ಸಾಕುನಾಯಿಗಳೊಂದಿಗೆ ಚಾಮುಂಡಿ ಬೆಟ್ಟ ಹತ್ತುವುದಕ್ಕೆ ಸಾರ್ವಜನಿಕರ ಆಕ್ಷೇಪ



ಮೈಸೂರು, ಮೇ 11(ಎಸ್‌ಪಿಎನ್)– ವಾಯುವಿಹಾರಿಗಳು, ತಮ್ಮ ಸಾಕು ನಾಯಿಗಳ ಜೊತೆ ದಿನನಿತ್ಯ ಚಾಮುಂಡಿ ಬೆಟ್ಟ ಹತ್ತುವುದಕ್ಕೆ ಕಡಿವಾಣ ಹಾಕಬೇಕು ಎಂದು ಸಾರ್ವಜನಿಕರು ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ.

ವಾಯುವಿಹಾರಿಗಳು, ತಮ್ಮ ಸಾಕು ನಾಯಿಗಳ ಜೊತೆ ಬೆಟ್ಟ ಹತ್ತುವುದರಿಂದ ಹರಕೆ ಹೊತ್ತವರು, ಕುಟುಂಬ ಸಮೇತ ಬರುವ ಪ್ರವಾಸಿಗರಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ಜೊತೆಗೆ ಭಯದ ವಾತಾವರಣ ನಿರ್ಮಾಣವಾಗುತ್ತಿದೆ. ಈ ನಾಯಿಗಳು ಕಚ್ಚುವ ಭೀತಿ ಎದುರಾಗುತ್ತಿದ್ದು, ಈ ಆತಂಕ ಕುರಿತು ಚಾಮುಂಡಿಬೆಟ್ಟದ ಆಡಳಿತ ಮಂಡಳಿಗೆ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ದೂರಿದರು. ಇದಕ್ಕೆ ಕಡಿವಾಣ ಹಾಕುವಂತೆ ಅಂತರರಾಷ್ಟ್ರೀಯ ಕ್ರೀಡಾಪಟು ಬಸವರಾಜು 'ಮೈಸೂರು ಮಿತ್ರ'ನ ಮೂಲಕ ಮನವಿ ಮಾಡಿದ್ದಾರೆ. ಸಾಕುನಾಯಿಗಳ ಜೊತೆ ವಾಕಿಂಗ್‌ಗೆ ನಿಷೇಧ ಇದ್ದರೂ ಈ ನಿಯಮ ಯಾರೂ ಅನುಸರಿಸುತ್ತಿಲ್ಲ. ಹಾಗಾಗಿ ಸಾಕುನಾಯಿಗಳ ಜೊತೆ ಮೆಟ್ಟಿಲು ಹತ್ತುವುದನ್ನು ನಿಷೇಧಿಸಿರುವ ಬಗ್ಗೆ ಬೆಟ್ಟದ ಪಾದದಲ್ಲೇ ಬೋರ್ಡ್ ಹಾಕುವಂತೆ ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ.

ಸೃಜನಶೀಲತೆ ಅಳವಡಿಸಿಕೊಳ್ಳಲು ರಂಗಶಿಬಿರಗಳು ಉತ್ತಮ ವೇದಿಕೆ



ಮೈಸೂರು, ಮೇ 11(ಎಸ್‌ಪಿಎನ್)– ಮಕ್ಕಳಲ್ಲಿ ಸೃಜನಶೀಲತೆ, ಕ್ರಿಯಾಶೀಲತೆ ಅಳವಡಿಸಿಕೊಳ್ಳಲು ರಂಗ ಶಿಬಿರಗಳು ಉತ್ತಮ ವೇದಿಕೆ ಎಂದು ಹಿರಿಯ ರಂಗಕರ್ಮಿ ಬಿ.ಸುರೇಶ್ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರದಲ್ಲಿ ನೆಲೆ ಹಿನ್ನೆಲೆ, ಜನಮನ ಸಾಂಸ್ಕೃತಿಕ ಸಂಘಟನೆ ಹಾಗೂ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆ ಸಹಯೋಗದೊಂದಿಗೆ ಆಯೋಜಿಸಿದ್ದ ಸರ್ವ ಜನಾಂಗದ ಶಾಂತಿಯ ತೋಟದಲ್ಲಿ ರಂಗಭೀಷ್ಮ ಬಿ.ವಿ.ಕಾರಂತ ರಂಗ ಶೀರ್ಷಿಕೆಯಡಿ ಆಯೋಜಿಸಿದ್ದ ರಂಗಶಿಬಿರದ ಸಮಾರೋಪದಲ್ಲಿ ಅವರು ಮಾತನಾಡಿದರು. ಮಕ್ಕಳ ರಂಗಭೂಮಿ ಮೂಲಕವೇ ರಂಗಕರ್ಮಿ ಹೆಚ್.ಜನಾರ್ಧನ್, ಪ್ರಕಾಶ್ ರೈ ಸೇರಿದಂತೆ ಇತರೆ ಕಲಾವಿದರು ಕರ್ನಾಟಕದಲ್ಲಿ ಹೆಸರುವಾಸಿಯಾಗಿದ್ದಾರೆ. ಅಲ್ಲದೆ, ಮಕ್ಕಳ ರಂಗಭೂಮಿ ಬೆಳವಣಿಗೆಯಲ್ಲಿ ಪ್ರೇಮ ಕಾರಂತ, ಬಿ.ವಿ.ಕಾರಂತ ಅವರು ತೊಡಗಿಸಿಕೊಂಡಿದ್ದರಿಂದ ಮಕ್ಕಳ ರಂಗಭೂಮಿ ದೇಶದಲ್ಲಿ ಹೆಸರುವಾಸಿ ಆಗಿತ್ತು ಎಂದು ಅಭಿಪ್ರಾಯಪಟ್ಟರು.

> ಚಿಕ್ಕ ವಯಸ್ಸಿನಿಂದಲೇ ಮಕ್ಕಳನ್ನು ರಂಗಭೂಮಿಯಲ್ಲಿ ತೊಡಗಿಸುವುದರಿಂದ ಮಕ್ಕಳಲ್ಲಿರುವ, ಕ್ರಿಯಾಶೀಲತೆ, ಪ್ರತಿಭೆ ಅನಾವರಣಗೊಳ್ಳಲು ಸಹಕಾರಿಯಾಗುತ್ತದೆ. ಹಾಗಾಗಿ ಸಾಮಾಜಿಕ, ಶೈಕ್ಷಣಿಕ ಹಾಗೂ ಸಮಾನತೆ ತಳಹದಿಯ ಮೇಲೆ ನಿಂತಿರುವ ಪ್ರಜಾಪ್ರಭುತ್ವದ ಪೀಠಿಕೆಯನ್ನು ನಾವೆಲ್ಲರೂ ಅರ್ಥ ಮಾಡಿಕೊಂಡು ಬದುಕು ರೂಪಿಸಿಕೊಳ್ಳಬೇಕು. **–ಬಿ.ಸುರೇಶ್, ರಂಗಕರ್ಮಿ**

ಇಂದು ಪ್ರದರ್ಶಿಸಿದ ಮಕ್ಕಳ ನಾಟಕದಲ್ಲಿ ಸಂವಿಧಾನ ಪೀಠಿಕೆಯನ್ನು ಸುಂದರವಾಗಿ ಅಭಿನಯಿಸಿ, ತಮ್ಮ ಕ್ರಿಯಾಶೀಲತೆಯನ್ನು ಪ್ರದರ್ಶಿಸಿದರು. 'ಕಲಿಸು ಗುರುವೇ ಕಲಿಸು' ಮಕ್ಕಳ ನಾಟಕ ಅಮೋಘವಾಗಿ ಮೂಡಿ ಬಂದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಈ ವೇಳೆ ಹಿರಿಯ ರಂಗಕರ್ಮಿ ಹೆಚ್.ಜನಾರ್ಧನ್, ಅಹಿಂದ ಜವರಪ್ಪ, ಶಿಬಿರ ಸಂಚಾಲಕಿ ಸುಮತಿ, ನೆಲೆ ಹಿನ್ನೆಲೆ ಗೋಪಾಲಕೃಷ್ಣ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೇ 16, ಉಚಿತ ವೈದ್ಯಕೀಯ ತಪಾಸಣಾ ಶಿಬಿರ

ಮೈಸೂರು, ಮೇ 11– ಎನ್‌ಜೆಎಸ್ ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ವತಿಯಿಂದ ಮೇ 16ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 2ರವರೆಗೆ ಜೆಎಸ್‌ಎಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಜೆಎಸ್‌ಎಸ್ ಡೆಂಟಲ್ ಆಸ್ಪತ್ರೆ, ಭಾರತ್ ಕ್ಯಾನ್ಸರ್ ಆಸ್ಪತ್ರೆ, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ಮಿಯರ್ ಆರ್ಗ್ಯಾನಿಕ್ಸ್ ಲಿಮಿಟೆಡ್, ಬ್ರಿಟಿಷ್ ಬಯಲಾಜಿಕಲ್, ಯೋಗ ಪ್ರಾಣ ವಿದ್ಯಾಕೇಂದ್ರದ ಸಹಯೋಗದಲ್ಲಿ ಮಂಡಿ ಮೊಹಲ್ಲಾದ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ವೈದ್ಯಕೀಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 99161 55453 ಸಂಪರ್ಕಿಸಬಹುದು.

ನಿವೃತ್ತ ಇಂಜಿನಿಯರ್ ಹೆಚ್.ಎಲ್.ಪ್ರಸನ್ನ ನಿಧನ



ಮೈಸೂರು, ಮೇ 11–ಮೈಸೂರಿನ ಟಿಕೆ ಬಡಾವಣೆಯ ಪಡುವಣ ರಸ್ತೆ ನಿವಾಸಿ ಹಾಗೂ ರಾಗಿಬ್ರಹ್ಮ ಎಂದು ಖ್ಯಾತರಾಗಿರುವ ಡಾ.ಸಿ.ಹೆಚ್.ಲಕ್ಷ್ಮಣಯ್ಯ ಅವರ ಪುತ್ರ ನಿವೃತ್ತ ಇಂಜಿನಿಯರ್ ಹೆಚ್.ಎಲ್. ಪ್ರಸನ್ನ (61) ಗುರುವಾರ ಬೆಳಗ್ಗೆ ಮಾತಾ ಅಮೃತಾನಂದಮಯಿ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರು ಪತ್ನಿ ಇಂದಿರಾ ಪ್ರಸನ್ನ, ಪುತ್ರ ಉತ್ತಮ್ ಪ್ರಸನ್ನ, ಪುತ್ರಿ ರೂಪಿಣಿ ಪ್ರಸನ್ನ, ಸಹೋದರರಾದ ಹೆಚ್.ಎಲ್.ಸತ್ಯಮೂರ್ತಿ, ಹೆಚ್.ಎಲ್.ವಸಂತಕುಮಾರ್, ಹೆಚ್.ಎಲ್. ರವಿ ಮತ್ತು ಹೆಚ್.ಎಲ್.ಸತ್ಯಮೂರ್ತಿ ಹಾಗೂ ಸಹೋದರಿಯರಾದ ಶ್ರೀಮತಿ ಹೆಚ್.ಎಲ್ ಸುಧಾ, ಶ್ರೀಮತಿ ಹೆಚ್.ಎಲ್ ಕಲಾ ಸೇರಿದಂತೆ ಅಪಾರ ಬಂಧು ಬಳಗ, ಮಿತ್ರರನ್ನು ಅಗಲಿದ್ದಾರೆ.

ಪಾರ್ಥಿವ ಶರೀರವನ್ನು ಬಡಾವಣೆಯ ಅವರ ಸ್ವಗೃಹದಲ್ಲಿ ಶುಕ್ರವಾರ ಬೆಳಗ್ಗೆ 9 ಗಂಟೆವರೆಗೆ ಸಾರ್ವಜನಿಕರ ದರ್ಶನಕ್ಕೆ ಇಡಲಾಗುವುದು. ನಾಳೆ (ಮೇ 12) ಬೆಳಗ್ಗೆ 11 ಗಂಟೆಗೆ ಜಯಪುರ ಹೋಬಳಿ, ಹಾರೋಹಳ್ಳಿಯ ಅವರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್.ಎಲ್. ಪ್ರಸನ್ನ ಅವರು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರವಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಆಯ್ಕೆಗೊಂಡಿದ್ದರು. ಮಂಡ್ಯದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಸೂಪರಿಂಟೆಂಡೆಂಟ್ ಇಂಜಿನಿಯರ್ ಆಗಿ ನಂತರ ಕಾವೇರಿ ನೀರಾವರಿ ನಿಗಮದಲ್ಲಿ ಮುಖ್ಯ ಇಂಜಿನಿಯರ್ ಆಗಿ ನಂತರ ಅದರ ವ್ಯವಸ್ಥಾಪಕ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು. ಸಣ್ಣ ನೀರಾವರಿ ಇಲಾಖೆಯಲ್ಲಿ ಪದೋನ್ನತಿ ಪಡೆದು ಕಾರ್ಯದರ್ಶಿ ಶ್ರೇಣಿಯಲ್ಲಿ ಕಾರ್ಯನಿರ್ವಹಿಸಿ ನಿವೃತ್ತಿ ಹೊಂದಿದ್ದರು.

ಕ್ವೆರ್ಸೆಟಿನ್ ಅಣುವಿನ ಕಾರ್ಯ ಪತ್ತೆ ಮಾಡಿದ ಜೆಎಸ್‌ಎಸ್ ಉನ್ನತ ಶಿಕ್ಷಣ, ಸಂಶೋಧನಾ ಅಕಾಡೆಮಿಯ ವಿಜ್ಞಾನಿಗಳು



ಡಾ. ಪ್ರಸನ್ನ ಸಂತೇಕಡೂರು | ಡಾ. ಶಶಾಂಕ ಪ್ರಸಾದ್ | ಡಾ.ಎಂ.ವಿ.ಎಸ್. ಎಸ್.ಟಿ. ಸುಬ್ಬರಾವ್ | ಡಾ. ಅಶ್ವಿನಿ ಟಿ.ಎಸ್.

ಮೈಸೂರು, ಮೇ 11–ಹಣ್ಣು ತರಕಾರಿಗಳಲ್ಲಿ ಹೆಚ್ಚಾಗಿ ಇರುವ 'ಕ್ವೆರ್ಸೆಟಿನ್' ಎಂಬ ಅಣುವು ವಿಟಮಿನ್ ಡಿಯನ್ನು ಅನುಕರಣೆ ಮಾಡುವುದಲ್ಲದೆ ಅದರಂತೆ ದೇಹದ ಕೆಲವು ಕಾರ್ಯವನ್ನು ನಿರ್ವಹಿಸಿ ಸ್ತನದ ಕ್ಯಾನ್ಸರ್ ಜೀವಕೋಶಗಳ ಬೆಳವಣಿಗೆಯನ್ನು ತಡೆದು ಲಿವರ್ ಮೇಲೆ ಆಗುವ ದುಷ್ಪರಿಣಾಮವನ್ನು ವಾಸಿ ಮಾಡುವ ಪ್ರಕ್ರಿಯೆಯನ್ನು ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ವಿಜ್ಞಾನಿಗಳು ಪತ್ತೆ ಮಾಡಿದ್ದಾರೆ.

ಈ ಸಂಶೋಧನೆಯನ್ನು ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಡಾ.ಪ್ರಸನ್ನ ಸಂತೇಕಡೂರು ಅವರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿನಿಯರಾದ ಕುಮಾರಿ ನಿರ್ಮಲ, ಕುಮಾರಿ ವರ್ಷಾ, ಕುಮಾರಿ ಲಕ್ಷಣ ಅವರು ಕಾರ್ಯನಿರ್ವಹಿಸಿರುತ್ತಾರೆ. ಜೊತೆಗೆ ಅದೇ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿರುವ ಡಾ.ಎಂ.ವಿ.ಎಸ್.ಎಸ್.ಟಿ. ಸುಬ್ಬರಾವ್, ಸಹಾಯಕ ಪ್ರಾಧ್ಯಾಪಕರಾಗಿರುವ ಡಾ. ರವಿಶಂಕರ್ ಎಂ.ವಿ. ಮತ್ತು ಜೆಎಸ್‌ಎಸ್ ಜೀವ ವಿಜ್ಞಾನ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿರುವ ಡಾ. ಶಶಾಂಕ ಪ್ರಸಾದ್, ಜೆಎಸ್‌ಎಸ್ ದಂತ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಧ್ಯಾಪಕಿ ಡಾ. ಅಶ್ವಿನಿ ಟಿ.ಎಸ್. ಮತ್ತು ಸಂಶೋಧನ ವಿದ್ಯಾರ್ಥಿಗಳಾದ ಶಿವ ಡಿ., ಶ್ರೀಮತಿ ಚೈತನ್ಯ ಜಿ.ಬಿ., ಶ್ರೀಮತಿ ಸ್ಮಿತಾ ಎಸ್.ಭಟ್ ಅವರು ಈ ಸಂಶೋಧನೆಗೆ ಸಹಕಾರ ನೀಡಿದ್ದಾರೆ. ತಮ್ಮ ಸಂಶೋಧನೆಯನ್ನು ಹೆಸರಾಂತ 'ಫ್ರಾಂಟಿಯರ್ಸ್ ಇನ್ ನ್ಯೂಟ್ರಿಷನ್' ಎಂಬ ವಿಜ್ಞಾನ ನಿಯತಕಾಲಿಕೆಯಲ್ಲಿ ಪ್ರಕಟಿಸಿದ್ದಾರೆ.

ಈ ಸಂಶೋಧನೆಗೆ ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಪರ್ಸ್ ಕಾರ್ಯಕ್ರಮ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಮತ್ತು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಅನುದಾನ ನೀಡಿವೆ. ಆಧುನಿಕ ಮತ್ತು ಯಾಂತ್ರಿಕ ಜೀವನ ಶೈಲಿಯಿಂದ ಇತ್ತೀಚೆಗೆ ಕ್ಯಾನ್ಸರ್ ರೋಗಿಗಳ ಪ್ರಮಾಣ ಕರ್ನಾಟಕ ಮತ್ತು ಭಾರತವನ್ನು ಒಳಗೊಂಡಂತೆ ವಿಶ್ವದಾದ್ಯಂತ ಹೆಚ್ಚಾಗುತ್ತಿದೆ. ಅದರಲ್ಲೂ ಮಹಿಳೆಯರಲ್ಲಿ ಸ್ತನದ ಕ್ಯಾನ್ಸರ್ ನಾಗಾಲೋಟದಲ್ಲಿ ಹೆಚ್ಚಾಗುತ್ತಿರುವುದು ಉನ್ನತ ಅಧ್ಯಯನಗಳಿಂದ ತಿಳಿದುಬಂದಿದೆ.

ಲಿವರ್ ಮಾನವ ದೇಹದ ಅತ್ಯಮೂಲ್ಯ ಅಂಗಗಳಲ್ಲಿ ಒಂದು. ಸ್ತನದ ಕ್ಯಾನ್ಸರ್ ಬಂದ ಮಹಿಳೆಯರ ಲಿವರಿನಲ್ಲಿ ಉರಿಯೂತದ ಲಕ್ಷಣಗಳು ಹೆಚ್ಚಾಗಿ ಕಂಡುಬರುತ್ತಿವೆ. ಈ ರೀತಿಯ ಉರಿಯೂತ ಕೆಲವು ವರ್ಷಗಳ ನಂತರವೂ ಗುಣವಾಗದೆ ಇದ್ದರೆ ಆ ರೋಗಿಗಳ ಲಿವರ್ ತನ್ನ ಕಾರ್ಯ ನಿಲ್ಲಿಸಬಹುದು ಅಥವಾ ಸಿರೊಸಿಸ್ ಹೆಚ್ಚಾಗಿ ಲಿವರ್ ಕ್ಯಾನ್ಸರ್ ಕೂಡ ಕಾಣಿಸಿಕೊಳ್ಳಬಹುದು. ಇಂತಹ ರೋಗಿಗಳಿಗೆ ಸ್ಥೂಲಕಾಯತೆ, ಮಧುಮೇಹ, ಹೃದಯ ಸಂಬಂಧಿ ಕಾಯಿಲೆಗಳಿದ್ದರೆ ಇನ್ನು ಕಷ್ಟವಾಗುತ್ತದೆ.

ಮೇ 19, ರಾಷ್ಟ್ರೀಯ ತಂತ್ರಜ್ಞಾನ ದಿನ ಆಚರಣೆ

ಮೈಸೂರು, ಮೇ 11–ಮೈಸೂರಿನ ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾ ವಿದ್ಯಾಲಯದ ಕಂಪ್ಯೂಟರ್ ಸೈನ್ಸ್ ವಿಭಾಗದ ವತಿಯಿಂದ ಇಂಟರ್‌ನೆಟ್ ಕ್ವಾಲಿಟಿ ಅಶ್ಯೂರೆನ್ಸ್ ಸೆಲ್ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆ ಅಂಗವಾಗಿ 'ಐಟೆಕ್ನರಿ–2023' ರಾಷ್ಟ್ರ ಮಟ್ಟದ ಸ್ಪರ್ಧೆಗಳನ್ನು ಮೇ 19ರಂದು ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಪಿಯುಸಿ, ಉನ್ನತ ಶಿಕ್ಷಣ ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ತಮ್ಮ ಜ್ಞಾನ ಮತ್ತು ಪ್ರತಿಭೆಯನ್ನು ಪ್ರದರ್ಶಿಸುವ ಅವಕಾಶ ನೀಡಲು ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ನಾಗರಿಕತೆಯ ಅಭಿವೃದ್ಧಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಭಾವವನ್ನು ಪೂರೈಸುವುದು ಮತ್ತು ಜೀವನಮಟ್ಟದ ವಿವಿಧ ಕ್ಷೇತ್ರಗಳಿಗೆ ಪ್ರಸ್ತುತ ಸವಾಲುಗಳನ್ನು ಎದುರಿಸುವ ವ್ಯಾಪ್ತಿಯನ್ನು ಪೂರೈಸುವುದು ಕಾರ್ಯಕ್ರಮದ ಉದ್ದೇಶ. ಈ ಸ್ಪರ್ಧೆಗಳಲ್ಲಿ ಎಲ್ಲಾ ವಿಭಾಗದ ವಿದ್ಯಾರ್ಥಿಗಳು ಭಾಗವಹಿಸಬಹುದು. ಕಾರ್ಯಕ್ರಮವನ್ನು ಅಂದು ಬೆಳಗ್ಗೆ 10.30ಕ್ಕೆ ಭಾರತೀಯ ವಿಜ್ಞಾನ ಕಾಂಗ್ರೆಸ್ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಮೈಸೂರು ವಿಶ್ವವಿದ್ಯಾನಿಲಯ ನಿವೃತ್ತ ಕುಲಪತಿ ಪ್ರೊ ಕೆ.ಎಸ್.ರಂಗಪ್ಪ ಉದ್ಘಾಟಿಸುವರು. ಕಾಲೇಜು ಪ್ರಾಂಶುಪಾಲ ಪ್ರೊ.ಸಾಯಿನಾಥ್ ಮಲ್ಲಿಗೆಮಾಡು ಅಧ್ಯಕ್ಷತೆ ವಹಿಸುವರು. ಮಾಹಿತಿಗೆ ಮೊ. 9900192418, 9986540070 ಮೂಲಕ ಸಂಪರ್ಕಿಸಬಹುದು.



ಮೈಸೂರಿನ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಆಡಳಿತಾಧಿಕಾರಿ ಸತೀಶ್ ಚಂದ್ರ ಅವರು ಬುಧವಾರ ತಮ್ಮ ಕುಟುಂಬ ಸದಸ್ಯರೊಂದಿಗೆ ಮತಗಟ್ಟೆಯೊಂದರಲ್ಲಿ ಮತದಾನ ಮಾಡಿದರು.

ಇಂದು ಪ್ರೇರಣಾ ಪ್ರಶಸ್ತಿ ಪ್ರದಾನ ಸಮಾರಂಭ

ಮೈಸೂರು, ಮೇ 11– ಮೈಸೂರಿನ ಚಿಗುರು ಮಕ್ಕಳ ಕಲಾ ಸಂಸ್ಥೆ ಮತ್ತು ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ಸಹಯೋಗದಲ್ಲಿ ನಾಳೆ(ಮೇ 12) ಸಂಜೆ 5 ಗಂಟೆಗೆ ಪ್ರೇರಣಾ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಲಾಗಿದೆ. ಜೆಎಲ್‌ಬಿ ರಸ್ತೆಯಲ್ಲಿರುವ ಶಾರದಾನಿಕೇತನ ವಿದ್ಯಾರ್ಥಿನಿಲಯದಲ್ಲಿ ನಡೆಯಲಿರುವ ಸಮಾ ರಂಭದ ಅಧ್ಯಕ್ಷತೆಯನ್ನು ವಿ.ವಿ.ಸತ್ಯನಾರಾಯಣ ವಹಿಸಲಿದ್ದು, ಶ್ರೀಮತಿ ನಂ.ನಾಗಲಕ್ಷ್ಮಿ ಅವರನ್ನು ಸನ್ಮಾನಿಸಲಾಗುವುದು. ಚಿಗುರು ಮಕ್ಕಳ ಕಲಾ ಸಂಘದ ಅಧ್ಯಕ್ಷೆ ಡಾ.ಶ್ರೀಮತಿ ಶ್ರೀವಳ್ಳಿ ಟಿ.ಎಸ್., ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ಅಧ್ಯಕ್ಷ ಎಂ.ವಿಶ್ವನಾಥಯ್ಯ ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

ಮೇ 15ರಿಂದ 19ರವರೆಗೆ ಅಧ್ಯಯನ ಶಿಬಿರ

ಮೈಸೂರು, ಮೇ 11–ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ಸಂಯುಕ್ತಾಶ್ರಯದಲ್ಲಿ ಮೇ 15ರಿಂದ 19ರವರೆಗೆ ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮಠಾಧಿಪತಿಗಳು, ಸಾಧಕರು ಮತ್ತು ಆಧ್ಯಾತ್ಮಿಕ ಜಿಜ್ಞಾಸುಗಳಿಗೆ ಅಧ್ಯಯನ ಶಿಬಿರವನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಲಾಗಿದೆ.

ಶಿಬಿರ ಮೇ 15ರಂದು ಬೆಳಗ್ಗೆ 10 ಗಂಟೆಗೆ ಉದ್ಘಾಟನೆಯಾಗಲಿದೆ. ಕವಿ ಕೃತಿ ಇತಿವೃತ್ತ, ವ್ಯಾಖ್ಯಾನ ಕೃತಿ, ನಿಷ್ಕಲಲಿಂಗಸ್ಥಲ–ಮಹಾಲಿಂಗಸ್ಥಲ, ಲಿಂಗಮೂರ್ತಿಸ್ಥಲ–ಅಂಗಸ್ಥಲ, ಸಂಸಾರಸಂಬಂಧಸ್ಥಲ–ಪಿಂಡಸ್ಥಲ, ಪಿಂಡಜ್ಞಾನಸ್ಥಲ–ಸಂಸಾರಹೇಯಸ್ಥಲ, ಗುರುಕರಣಸ್ಥಲ–ಭಕ್ತಿಸ್ಥಲ, ಮಾಹೇಶ್ವರಸ್ಥಲ–ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ–ಶರಣಸ್ಥಲ, ಐಕ್ಯಸ್ಥಲ–ಸ್ವಲೀಲಾನಂದ ಭಕ್ತಿಸ್ಥಲ, ಕೃತಿ ಸೃಷ್ಟಿ ಸಂದರ್ಭ, ಸಾಹಿತ್ಯ ಸಂದರ್ಭ ಹಾಗೂ ಯುಗಧರ್ಮ, ಸಮಕಾಲೀನ ಅಗತ್ಯ ಈ ವಿಷಯಗಳನ್ನು ಕುರಿತು ಅನುಕ್ರಮವಾಗಿ ಡಾ.ಎನ್.ಎಸ್.ತಾರಾನಾಥ್, ಡಾ.ಎಂ.ಎನ್.ನಂದೀಶ್ ಹಂಚೆ, ಶ್ರೀ ಬಸವ ಮರುಳಸಿದ್ಧ ಸ್ವಾಮಿಗಳು, ಡಾ.ಶೀಲಾದೇವಿ ಮಳಿಮಠ, ಡಾ.ಪ್ರೇಮ ಸಿದ್ದರಾಜು, ಡಾ.ಸಿ.ಶಿವಕುಮಾರಸ್ವಾಮಿ, ಡಾ.ಜ್ಯೋತಿ ಶಂಕರ್, ಪ್ರೊ.ಚಂದ್ರಶೇಖ ರಯ್ಯ, ಡಾ.ಬಿ.ವಿ. ವಸಂತಕುಮಾರ್, ಪ್ರೊ.ಮೊರಬದ ಮಲ್ಲಿಕಾರ್ಜುನ ಹಾಗೂ ಡಾ.ಮೃತ್ಯುಂಜಯ ರುಮಾಲೆಯವರು ಉಪನ್ಯಾಸಗಳನ್ನು ನೀಡಲಿದ್ದಾರೆ. ನಂತರ ಮೇ 19ರಂದು ಅಪರಾಹ್ನ 12 ಗಂಟೆಗೆ ಸಮಾರೋಪ ಕಾರ್ಯಕ್ರಮ. ಆಸಕ್ತರು ರಾಜೇಶ್ ಅವರನ್ನು 9964141560 ಮೊಬೈಲ್‌ನಲ್ಲಿ ಸಂಪರ್ಕಿಸಿ ಹೆಸರು ನೋಂದಾಯಿಸಿಕೊಳ್ಳಲು ಕೋರಿದೆ.



ಮೈಸೂರಿನ ಸಿಗ್ಮಾ ಆಸ್ಪತ್ರೆ ನಿರ್ದೇಶಕ ಎಸ್.ಜ್ಞಾನಶಂಕರ್ ಅವರ ತಾಯಿ ಶತಾಯುಷಿ ಎಸ್.ದಾಕ್ಷಾಯಣಮ್ಮ (104) ಅವರು ಹಾರ್ಡ್ವಿಕ್ ಪ್ರೌಢಶಾಲೆಯಲ್ಲಿ ಮತದಾನ ಮಾಡಿದರು.

ವಿಪ್ರ ವಟುಗಳಿಗೆ ಉಚಿತ ಉಪನಯನ

ಮೈಸೂರು, ಮೇ 11– ಮೈಸೂರಿನ ಶ್ರೀ ಚಿತ್ಕಲ ಟ್ರಸ್ಟ್ ವತಿಯಿಂದ ವಿಪ್ರ ವಟುಗಳಿಗೆ ಸಾಮೂಹಿಕ ಉಚಿತ ಉಪನಯನ (ಬ್ರಹ್ಮೋಪದೇಶ) ಕಾರ್ಯಕ್ರಮವನ್ನು ಕೃಷ್ಣಮೂರ್ತಿಪುರಂನ ಶ್ರೀರಾಮ ಮಂದಿರದಲ್ಲಿ ಜೂನ್ 8 ರಂದು ಆಯೋಜಿಸಲಾಗಿದೆ. ಆಸಕ್ತ ಪೋಷಕರು (ತಂದೆ ತಾಯಿಗಳು) ಮೇ 30 ರೊಳಗೆ ಸಂಪರ್ಕಿಸಿ ಹೆಚ್ಚಿನ ವಿವರಗಳನ್ನು ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಮೊ. 9449047608, 9481529770 ಸಂಪರ್ಕಿಸಬಹುದು.

ಜೀವನ ಕಲೆ ಆನಂದ ಅನುಭೂತಿ ಶಿಬಿರ

ಮೈಸೂರು, ಮೇ 11–ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಮೇ 16ರಿಂದ 21ರವರೆಗೆ ಜೀವನ ಕಲೆ ಆನಂದ ಅನುಭೂತಿ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಗ್ಗೆ 6ರಿಂದ 8.15, ಮಧ್ಯಾಹ್ನ 11ರಿಂದ 1.15, ಸಂಜೆ 6ರಿಂದ 8ರವರೆಗೆ ನಡೆಯಲಿದೆ.

ಆ್ಯಪ್ ಮೂಲಕ ಬೆಟ್ಟಿಂಗ್: ಸಿಸಿಬಿ ವಿಶೇಷ ತಂಡ ನಿಗಾ

ಮೈಸೂರು, ಮೇ 11– ಪೊಲೀಸರ ಕಣ್ತಪ್ಪಿಸಿ ಆ್ಯಪ್ ಮೂಲಕ ಚುನಾವಣಾ ಬೆಟ್ಟಿಂಗ್ ನಡೆಸುತ್ತಿರುವ ಬಗ್ಗೆ ಮಾಹಿತಿ ಲಭ್ಯವಾಗಿರುವ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯಲ್ಲೂ ಸಿಸಿಬಿ ವಿಶೇಷ ತಂಡ ಕಾರ್ಯಾಚರಣೆಗಿಳಿದಿದೆ.

ಮೈಸೂರು ಜಿಲ್ಲೆಯ ವರುಣ, ಚಾಮುಂಡೇಶ್ವರಿ ಸೇರಿದಂತೆ ಬಹುತೇಕ ಕ್ಷೇತ್ರಗಳು ಜಿದ್ದಾಜಿದ್ದಿನ ಕಣಗಳಾಗಿವೆ. ಅಖಾಡದಲ್ಲಿರುವ ಸ್ಪರ್ಧಿಗಳು ಯಾರು ಯಾರಿಗೂ ಕಮ್ಮಿಯಿಲ್ಲ ಎನ್ನುವಂತೆ ಸೆಣಸಾಟ ನಡೆಸಿದ್ದಾರೆ. ಯಾರೇ ಆದರೂ ಅತ್ಯಲ್ಪ ಮತಗಳಿಂದ ಗೆಲ್ಲುವಂತಹ ಪರಿಸ್ಥಿತಿ ಹಲವು ಕ್ಷೇತ್ರಗಳಲ್ಲಿ ನಿರ್ಮಾಣವಾಗಿದೆ. ಈ ಬಾರಿ ಎಲ್ಲಾ ಪಕ್ಷಗಳ ಕಾರ್ಯಕರ್ತರು, ಅಭ್ಯರ್ಥಿಗಳ ಬೆಂಬಲಿಗರೂ ಕೂಡ ಪ್ರತಿಷ್ಠೆಯಾಗಿ ಚುನಾವಣೆ ನಡೆಸಿದ್ದಾರೆ. ಮೇ 13ಕ್ಕೆ ಫಲಿತಾಂಶ ಹೊರಬೀಳಲಿದೆ.

ಈ ನಡುವೆ ಭಾರೀ ಪೈಪೋಟಿ ಸೃಷ್ಟಿಯಾಗಿರುವ ಕ್ಷೇತ್ರಗಳಲ್ಲಿ ಕೆಲವು ಆ್ಯಪ್ ಮೂಲಕ ಚುನಾವಣೆ ಬೆಟ್ಟಿಂಗ್ ನಡೆಯುತ್ತಿರುವ ಬಗ್ಗೆ ಸಿಸಿಬಿಗೆ ಮಾಹಿತಿ ಲಭ್ಯವಾಗಿದೆ. ಈ ಹಿನ್ನೆಲೆಯಲ್ಲಿ ಆ್ಯಪ್‌ಗಳ ಮೇಲೆ ನಿಗಾ ಇರಿಸುವುದರ ಜೊತೆಗೆ ಅನುಮಾನಾಸ್ಪದ ವ್ಯಕ್ತಿಗಳ ಚಟುವಟಿಕೆ ಬಗ್ಗೆ ಕಣ್ಣಿಟ್ಟಿದ್ದಾರೆ.

ಪೊಲೀಸರಿಗೆ ಕಣ್ತಪ್ಪಿಸಿ ತಂತ್ರಜ್ಞಾನ ಬಳಸಿಕೊಂಡು ಬೆಟ್ಟಿಂಗ್ ನಡೆಸುವುವರನ್ನು ಪತ್ತೆ ಹಚ್ಚಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಸಿಸಿಬಿ ಪೊಲೀಸರಿಗೆ ಹಿರಿಯ ಪೊಲೀಸ್ ಅಧಿಕಾರಿಗಳು ಸೂಚಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.5.2023 ಶುಕ್ರವಾರ, ಮಳೆ ನಕ್ಷತ್ರ: ಕೃತ್ತಿಕ, 11.05.2023ರಿಂದ 24.05.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ,
ಕೃಷ್ಣ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಶ್ರವಣ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಸುಯೋಗ್ ಆಸ್ಪತ್ರೆ, ಸುಯೋಗ್ ಕಾಲೇಜ್ ಆಫ್ ನರ್ಸಿಂಗ್:** ವಿಶ್ವ ನರ್ಸಿಂಗ್ ದಿನಾಚರಣೆ, ಉದ್ಘಾಟನೆ: ಹಿರಿಯ ಪತ್ರಕರ್ತ ಎಂ.ಆರ್.ಸತ್ಯನಾರಾಯಣ, ಅಧ್ಯಕ್ಷತೆ: ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ.ಯೋಗಣ್ಣ, ಮುಖ್ಯ ಅತಿಥಿಗಳು: ಮೈಸೂರು ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ವಕೀಲ ಉಮೇಶ್, ಸ್ಥಳ: ಸುಯೋಗ್ ಆಸ್ಪತ್ರೆ ಸಭಾಂಗಣ, ರಾಮಕೃಷ್ಣನಗರ, ಸಂಜೆ 4ಕ್ಕೆ.

■ **ಸುರಭಿ ಗಾನಕಲಾಮಂದಿರ ಚಾರಿಟೆಬಲ್ ಟ್ರಸ್ಟ್:** ಸಂಗೀತಾಮೃತ ವರ್ಷಿಣಿ ರಾಗಾಧಾರಿತ–ಮನೋಧರ್ಮ ಸಂಗೀತ ಶಿಬಿರ, ಸ್ಥಳ: ಸುರಭಿ ಗಾನಕಲಾಮಂದಿರ, ಗೋಕುಲಂ 3ನೇ ಹಂತ, ಸಂಜೆ 4.30ಕ್ಕೆ.

■ **ಜನಚೈತನ್ಯ ಫೌಂಡೇಶನ್ :** ಮಕ್ಕಳ ಚೈತನ್ಯ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ, ಉದ್ಘಾಟನೆ : ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರು ನಿಕಟಪೂರ್ವ ನಿರ್ದೇಶಕ ಸಿ. ಬಸವಲಿಂಗಯ್ಯ, ಅಧ್ಯಕ್ಷತೆ : ಮಾಜಿ ಮೇಯರ್ ನಾರಾಯಣ, ಮುಖ್ಯ ಅತಿಥಿಗಳು : ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಡಾ. ರೇಖಾ ಅರುಣ್, ಹಿರಿಯ ವಕೀಲ ಡಿ.ಬಿ. ರಾಜಶೇಖರಮೂರ್ತಿ, ಕೃಷಿ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಶ್ರೀರಂಗ, ಮಧು ರಾಜ್‌ಕುಮಾರ್, ಎಪಿಎಂಸಿ ಮಾಜಿ ಉಪಾಧ್ಯಕ್ಷ ಚಿಕ್ಕಜವಯ್ಯ, ಪ್ರಾಸ್ತಾವಿಕ ನುಡಿ : ಜನಚೈತನ್ಯ ಫೌಂಡೇಶನ್ ಅಧ್ಯಕ್ಷ ಆರ್. ಲಕ್ಷ್ಮಣ್, ಸ್ಥಳ: ನೂತನ ಸಮುದಾಯ ಭವನ, ಟಿ. ಸುಬ್ಬಣ್ಣ ಸಾರ್ವಜನಿಕ ಹಾಸ್ಟೆಲ್ ಹಿಂಭಾಗ, ವಿದ್ಯಾರಣ್ಯಪುರಂ, ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಇಂಜಿನಿಯರಿಂಗ್ ವಿದ್ಯಾವಿಕಾಸ, ಪ್ರಾಯೋಜಕರು– ವಿದ್ಯಾವಿಕಾಸ ಇಂಜಿನಿಯರಿಂಗ್ ಕಾಲೇಜ್, ಮೈಸೂರು, 6.40 ಪದ ಸಂಸ್ಕೃತಿ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, ವಿಷಯ– ಅಧಿಕ ರಕ್ತದೊತ್ತಡ, ಸಮಸ್ಯೆ, ಪರಿಹಾರ ಮತ್ತು ಲಭ್ಯವಿರುವ ಚಿಕಿತ್ಸೆ, ಭಾಗವಹಿಸುವವರು– ಡಾ.ವಿ. ಕೇಶವಮೂರ್ತಿ, 10.00 ಓ.ಎಸ್. ಅರುಣ್–ಹಾಡುಗಾರಿಕೆ, 11.30 ಮಿತ್ರ ಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ–ವಿನಾಯಕ ತೊರವಿ, 12.45 ಕಾದಂಬರಿ ವಿಹಾರ–ಡಾ. ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ– ಉಮೇಶ್ ಎಸ್.ಎಸ್., 1.00 ರಂಗಗೀತೆಗಳು–ವಿರಾಟ ಪರ್ವ ನಾಟಕದ ಹಾಡುಗಳು, 1.20 ಭಾವಗೀತೆ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 3.00 ಮೌನದಾಚೆಯ ಬೆಳಕು–ಸದಾಶಿವ ಬ್ರಹ್ಮೇಂದ್ರರ ಜೀವನ ಹಾಗೂ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ, 4.00 ಮಹಿಳಾರಂಗ– "ಆಕಾಶವಾಣಿ ಅಡುಗೆ ಮನೆ", ಪ್ರಸ್ತುತಿ– ಕೆ.ಬಿ.ಮೀನಾ, 4.30 ವೃತ್ತಿ ಮಾರ್ಗದರ್ಶನ–ಗ್ರಾಮೀಣ ಅಭಿವೃದ್ಧಿ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಪ್ರಶಾಂತ್ ಚಿನ್ನಪ್ಪನವರ್ ಅವರೊಂದಿಗೆ ಮಾತುಕತೆ, 6.55 ಕೃಷಿರಂಗ–ಕಿಸಾನ್‌ವಾಣಿ–ಕೃಷಿಯಲ್ಲಿನ ಅನುಭವ ಕುರಿತು ಮಹಾಲಿಂಗನಾಯಕ ಮತ್ತು ಮಣಿ ಅವರೊಂದಿಗೆ ಸಂದರ್ಶನ. ಸಂದರ್ಶಕರು– ಎಸ್. ಸುಬ್ರಹ್ಮಣ್ಯ, 8.00 ಕನ್ನಡ ಭಾರತಿ 'ರೂಪ ರೂಪಗಳನು ದಾಟಿ' ನುಡಿ ಚಿತ್ರ, ರಚನೆ– ಅನುರಾಧಾ ಸಾಮಗ, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ, 9.15 ಜನಪದ ಸಂಗೀತ–ಭಾಗ್ಯಮ್ಮ ಮತ್ತು ಸಂಗಡಿಗರು, 10.30 ವಾದ್ಯವೃಂದ–ಕೆ.ಪಿ. ಉಪಾಧ್ಯಾಯ – ವೇಣುವಾದನ, 10.30 ಸವಿನೆನಪು



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಮೇ 12 ಶುಕ್ರವಾರ 2023
ಸಂಪುಟ: 44 | ಸಂಚಿಕೆ: 26 | ಪುಟಗಳು: 12
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



ಮೊಬೈಲ್‌ನಲ್ಲಿ ಮಾತನಾಡುತ್ತಿದ್ದ ವ್ಯಕ್ತಿಗೆ ಸಿಡಿಲು ಬಡಿದು ಸಾವು

ಸಿಡಿಲ ಸದ್ದಿನ ಆಘಾತಕ್ಕೆ ಹೃದಯಾಘಾತದಿಂದ ವೃದ್ಧೆ ನಿಧನ



ಮದ್ದೂರು, ಮೇ 11–ಭಾರೀ ಮಳೆ, ಸಿಡಿಲು–ಗುಡುಗು ಮದ್ದೂರಿನಲ್ಲಿ ಎರಡು ಬಲಿ ಪಡೆದಿದೆ ಒಬ್ಬರು ಸಿಡಿಲಿಗೆ ಬಲಿಯಾದರೆ ಮತ್ತೊಬ್ಬರು ಅದರ ಸದ್ದಿನ ಆಘಾತದಿಂದ ಹೃದಯಾಘಾತ ಕ್ಕೊಳಗಾಗಿ ಸಾವನ್ನಪ್ಪಿದ್ದಾರೆ.

ಘಟನೆ ವಿವರ: ಮಳೆ ಬರುವ ಸಂದರ್ಭದಲ್ಲಿ ಹೆಲ್ಮೆಟ್ ಹಾಕಿಕೊಂಡು ಮರದ ಕೆಳಗೆ ನಿಂತಿದ್ದ ವ್ಯಕ್ತಿಗೆ ಸಿಡಿಲು ಬಡಿದು ಆತ ● 9ನೇ ಪುಟಕ್ಕೆ

ರಾಜ್ಯದಲ್ಲಿ ಅತಂತ್ರ ಪರಿಸ್ಥಿತಿ ಮಾಹಿತಿ: ಜೆಡಿಎಸ್ ದೋಸ್ತಿಗೆ ಬಿಜೆಪಿ ತರಾತುರಿ

● ಸಿಂಗಾಪುರಕ್ಕೆ ತೆರಳಿದ ಮಾಜಿ ಸಿಎಂ ಕುಮಾರಸ್ವಾಮಿ ಹಿಂಬಾಲಿಸಿದ ಕೇಂದ್ರ ಸಚಿವ
● ಇತ್ತ ಸಮೀಕ್ಷಾ ವರದಿ ಆಧರಿಸಿ ಕಾಂಗ್ರೆಸ್‌ನಿಂದ ಅಧಿಕಾರ ಹಿಡಿಯುವ ತಯಾರಿ!

ಬೆಂಗಳೂರು, ಮೇ 11(ಕೆಎಂಶಿ)–ಕರ್ನಾಟಕ ವಿಧಾನಸಭೆ ಅತಂತ್ರ ಪರಿಸ್ಥಿತಿ ನಿರ್ಮಾಣವಾಗಬಹುದೆಂಬ ಮಾಹಿತಿ ಅರಿತ ಬಿಜೆಪಿ ವರಿಷ್ಠರು, ಜೆಡಿಎಸ್ ಜೊತೆ ಹೊಂದಾಣಿಕೆ ಮಾಡಿಕೊಳ್ಳಲು ಕಸರತ್ತು ಆರಂಭಿಸಿದ್ದಾರೆ.

ಇದರ ಭಾಗವಾಗಿ ಜೆಡಿಎಸ್‌ನ ನಾಯಕ ಹಾಗೂ ಮಾಜಿ ಮುಖ್ಯ ಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ದಿಢೀರನೆ ಸಿಂಗಾಪೂರಕ್ಕೆ ತೆರಳಿದ್ದಾರೆ. ಅಲ್ಲಿಯೇ ಕುಮಾರಸ್ವಾಮಿ ಅವರನ್ನು ಕೇಂದ್ರದ ಹಿರಿಯ ಸಚಿವರೊಬ್ಬರು ಇಂದು ಭೇಟಿಯಾಗಿ ಮೈತ್ರಿ ಸರ್ಕಾರ ರಚನೆ ಕುರಿತಂತೆ ಸಮಾಲೋಚನೆ ನಡೆಸಿದ್ದಾರೆ ಎನ್ನಲಾಗಿದೆ. ಉಭಯ ನಾಯಕರು ನಾಳೆ ರಾತ್ರಿಯವರೆಗೂ ಅಲ್ಲಿಯೇ ತಂಗಲಿದ್ದು, ಮತ ಎಣಿಕೆ ದಿನವಾದ ಶನಿವಾರದಂದು ಸ್ವದೇಶಕ್ಕೆ ಹಿಂತಿರುಗಲಿದ್ದಾರೆ. ಚುನಾವಣಾ ಪೂರ್ವ ಸಮೀಕ್ಷೆ, ಮತಗಟ್ಟೆ ಸಮೀಕ್ಷೆ ಹಾಗೂ ಕೇಂದ್ರ ಗುಪ್ತಚರ ವರದಿ ಆಧಾರದ ಮೇಲೆ ರಾಜ್ಯದಲ್ಲಿ ಯಾವುದೇ ಪಕ್ಷ ಸ್ಪಷ್ಟ ಬಹುಮತ ಪಡೆಯುವುದಿಲ್ಲ ಎಂಬ ಅಭಿಪ್ರಾಯ ಬಿಜೆಪಿ ವರಿಷ್ಠರಿಗಿದೆ.

ಕಾಂಗ್ರೆಸ್ ಉಳಿದ ಪಕ್ಷಗಳಿಗಿಂತ ಅಧಿಕ ಸ್ಥಾನ ಗಳಿಸಲಿದೆ. ಆದರೆ ಅಧಿಕಾರ ಹಿಡಿಯುವಷ್ಟು ಬಹುಮತ ಬರುವುದಿಲ್ಲ ಎಂಬ ಮಾಹಿತಿಯು ದೆಹಲಿ ವರಿಷ್ಠರಲ್ಲಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಯಾವುದೇ ಕಾರಣಕ್ಕೂ ಅಧಿಕಾರ ಹಿಡಿಯಬಾರದು. ಅವರಿಗೆ ಅಧಿಕಾರ ನೀಡಿದರೆ, ಮುಂದಿನ ಲೋಕ ಸಭಾ ಚುನಾವಣೆಗೆ ಇದೇ ಅಸ್ತ್ರವನ್ನಾಗಿ ಬಳಕೆ ಮಾಡಿಕೊಳ್ಳುತ್ತಾರೆ ಎಂಬ ಭಯ ಬಿಜೆಪಿ ನಾಯಕರನ್ನು ಕಾಡಿದೆ. ಈ ಹಿನ್ನೆಲೆಯಲ್ಲಿ ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಂಡು ಸರ್ಕಾರ ರಚನೆಗೆ ಬಿಜೆಪಿ ಮುಂದಾಗಿದೆ.

ಚುನಾವಣಾ ಮತಗಟ್ಟೆ ಸಮೀಕ್ಷೆ ಪ್ರಕಟವಾಗುವುದಕ್ಕೂ ಮುನ್ನವೇ ಕೇಂದ್ರಕ್ಕೆ ಇಲ್ಲಿಯ ಪೂರ್ಣ ಮಾಹಿತಿ ಲಭ್ಯವಿದ್ದು, ಇದನ್ನರಿತ ನಾಯಕರು ಕುಮಾರಸ್ವಾಮಿಗೆ ಆಪ್ತರಿರುವ ಕೇಂದ್ರ ಸಚಿವರನ್ನು ಚರ್ಚೆಗೆ ಬಿಟ್ಟಿದ್ದಾರೆ. ಕೇಂದ್ರ ಸಚಿವರು ಕುಮಾರಸ್ವಾಮಿ ಅವರನ್ನು ಸಂಪರ್ಕಿಸಿ, ವಾಸ್ತವಾಂಶ ತಿಳಿಸಿ, ಪೂರ್ವ ಸಿದ್ಧತೆ ಮಾಡಿಕೊಳ್ಳಲು ಚರ್ಚೆಗೆ ಆಹ್ವಾನಿಸಿದ್ದಾರೆ. ದೆಹಲಿ ಸೇರಿದಂತೆ ರಾಷ್ಟ್ರದ ಯಾವುದೇ ಭಾಗದಲ್ಲಿ ಜೆಡಿಎಸ್ ಮತ್ತು ಬಿಜೆಪಿ ನಾಯಕರು ಮಾತುಕತೆ ನಡೆಸಿದರೆ, ತಪ್ಪು ಸಂದೇಶ ರವಾನೆಯಾಗುತ್ತದೆ ಎಂಬ ಹಿನ್ನೆಲೆಯಲ್ಲಿ ಸಿಂಗಾಪೂರವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ ಎನ್ನಲಾಗಿದೆ. ಕುಮಾರಸ್ವಾಮಿ ಅವರು ಇತ್ತಕಡೆಯಿಂದ ವಿದೇಶಕ್ಕೆ ತೆರಳುತ್ತಿದ್ದಂತೆ ದೆಹಲಿಯಿಂದ ಕೇಂದ್ರ ಸಚಿವರು ಕುಮಾರಸ್ವಾಮಿ ಅವರು ತಂಗಿರುವ ಸ್ಥಳಕ್ಕೆ ಭೇಟಿ ನೀಡಿ ಮಾತುಕತೆ ನಡೆಸಿದ್ದಾರೆ. ಕಳೆದ 2006ರಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಮಾಡಿಕೊಂಡು ಮೊದಲ ಬಾರಿಗೆ ಸರ್ಕಾರ ● 9ನೇ ಪುಟಕ್ಕೆ

ನಾಳೆ ಮೈಸೂರು ಮಹಾರಾಣಿ ವಾಣಿಜ್ಯ, ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ ಮತ ಎಣಿಕೆ; ವಾಹನ ಸಂಚಾರ ನಿರ್ಬಂಧ ■ ಪುಟ–7

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಕುಲಗೆಟ್ಟಿದ್ದರೆ ಅದಕ್ಕೆ ಮರೀಗೌಡ ಕಾರಣ!

ನಾನು ಬುಕ್ ಆಗಿಲ್ಲ, ಮೂಲ ಕಾಂಗ್ರೆಸ್‌ನ ಕೆಲವರ ಅಪಪ್ರಚಾರವಷ್ಟೇ; ಉಪ್ಪು ಮುಟ್ಟಿ ಪ್ರಮಾಣ

ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ ವಾಗ್ದಾಳಿ

ಮೈಸೂರು,ಮೇ 11(ಪಿಎಂ)–ಚಾಮುಂಡೇಶ್ವರಿ ಕ್ಷೇತ್ರದ ಶಾಸಕರೂ ಆದ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಟಿ.ದೇವೇಗೌಡರೊಂದಿಗೆ ಹೊಂದಾಣಿಕೆ ಮಾಡಿಕೊಂಡು ತಟಸ್ಥವಾಗಿದ್ದರು ಎಂದು ಮೂಲ ಕಾಂಗ್ರೆಸ್‌ನ ಕೆಲವರು ನನ್ನ ವಿರುದ್ಧ ಅಪಪ್ರಚಾರ ಮಾಡಿದ್ದಾರೆ. ನಾನು ಆ ರೀತಿಯಲ್ಲಿ ಬುಕ್ ಆಗಿಲ್ಲ ಎಂದು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ ಉಪ್ಪು ಮುಟ್ಟಿ ಪ್ರಮಾಣ ಮಾಡಿದರು.



ಮೈಸೂರಿನ ರಾಮಕೃಷ್ಣನಗರದಲ್ಲಿರುವ ತಮ್ಮ ನಿವಾಸದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾವು ಅಣ್ಣ ತಮ್ಮಂದಿರು ನಾಲ್ಕು ಮಂದಿಯೂ ಜಿ.ಟಿ.ದೇವೇಗೌಡರ ಬಳಿ ಬುಕ್ ಆಗಿದ್ದೇವೆ ಎಂದು ಅಪಪ್ರಚಾರ ಮಾಡಿದ್ದು, ಇದು ಸತ್ಯಕ್ಕೆ ದೂರ. ನಮ್ಮ ನಾಲ್ಕು ಮಂದಿಯ ಪರವಾಗಿ ನಾನಿಲ್ಲಿ ಉಪ್ಪು ಮುಟ್ಟಿ ಸತ್ಯ ಮಾಡುತ್ತಿದ್ದೇನೆ ಎಂದರು. ಈ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಹಿನ್ನಡೆಯಾದರೆ ಅದಕ್ಕೆ ಮೊದಲನೇ ಕಾರಣ ಕೆ.ಮರೀಗೌಡ. ಇವರು ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷವನ್ನು ಒಂದೊಂದು ಗ್ರಾಮದಲ್ಲಿ ಮೂರು ಓಳು ಮಾಡಿಟ್ಟಿದ್ದಾರೆ. ಕಾಂಗ್ರೆಸ್ಸಿಗರು ಓಟು ಯಾರಿಗೆ ಮಾಡಬೇಕೆಂದು ಮರೀಗೌಡರಲ್ಲಿ ಕೇಳಿದಾಗ, ನಿಮ್ಮಿಷ್ಟ ಎಂದು ಹೇಳಿ ಕಳುಹಿಸಿದ್ದಾರೆ ಎಂದು ದೂರಿದರು.

ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ಕುಲಗೆಟ್ಟಿದ್ದರೆ ಅದಕ್ಕೆ ಮೊದಲನೇ ಸೂತ್ರಧಾರಿ ಮರೀಗೌಡ. ಇವರು ನನ್ನ ವಿರುದ್ಧ ಬುಕ್ ಆಗಿದ್ದಾರೆಂದು ಅಪಪ್ರಚಾರ ಮಾಡಿದ್ದಾರೆ. ಯಾವತ್ತು ಜಿ.ಟಿ. ದೇವೇಗೌಡರಿಂದ ದೂರ ವಾದೆನೋ ಅಂದಿನಿಂದ ಅವರ ಮನೆ ಬಾಗಿಲಿಗೆ ಹೋಗಿಲ್ಲ. ● 9ನೇ ಪುಟಕ್ಕೆ

ಬುಕ್ ಮಾಡಿಕೊಳ್ಳುವ ಜಾಯಮಾನ ನನ್ನದಲ್ಲ

● ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ, ಶಾಸಕ ಜಿ.ಟಿ.ದೇವೇಗೌಡ ಸ್ಪಷ್ಟನೆ ● ಸಿದ್ದರಾಮಯ್ಯನವರಿಗೆ ಚಾಮುಂಡೇಶ್ವರಿ ಕ್ಷೇತ್ರದ ಬಗ್ಗೆ ಗೊತ್ತಿಲ್ಲ!

ಮೈಸೂರು, ಮೇ 11(ಪಿಎಂ)–ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯನ್ನು ಬುಕ್ ಮಾಡಿಕೊಂಡಿದ್ದಾರೆ ಎಂಬ ತಮ್ಮ ಮೇಲಿನ ಆರೋಪವನ್ನು ಖಡಾಖಂಡಿತವಾಗಿ ನಿರಾಕರಿಸಿದ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯೂ ಆದ ಶಾಸಕ ಜಿ.ಟಿ.ದೇವೇಗೌಡ, ಬುಕ್ ಮಾಡಿಕೊಳ್ಳುವ ಜಾಯಮಾನ ನನ್ನದಲ್ಲ. ಯಾರೊಂದಿಗೂ ಹೊಂದಾಣಿಕೆ ಮಾಡಿಕೊಂಡಿಲ್ಲ ಎಂದು ಸ್ಪಷ್ಟಪಡಿಸಿದರು. ಮೈಸೂರಿನ ವಿವಿ ಮೊಹಲ್ಲಾದ ತಮ್ಮ ನಿವಾಸದಲ್ಲಿ ಗುರುವಾರ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, ಎಪಿಎಂಸಿ ಅಧ್ಯಕ್ಷ ಸ್ಥಾನ, ಡೈರಿ ಅಧ್ಯಕ್ಷ ಸ್ಥಾನ, ಎರಡು ಗೂಟದ ಕಾರು ಎಲ್ಲಾ ಅನುಭವಿಸಿ, ಮೋಸ ಮಾಡಿದರು. ಮೋಸಗಾರರಿಗೆ ಟಿಕೆಟ್ ಕೊಟ್ಟ ಹಿನ್ನೆಲೆಯಲ್ಲಿ ಅವರಿಗೂ ಮೋಸ ಮಾಡುತ್ತಿದ್ದಾರೆ. ನನ್ನ ಜೊತೆಯಲ್ಲಿದ್ದು ಬಿಟ್ಟು ಹೋದ ಸದರಿ ಅಭ್ಯರ್ಥಿ ಸೇರಿದಂತೆ ಆ ಐದು ಜನರನ್ನು ಈವರೆಗೆ ನಾನು ಮಾತನಾಡಿಸಿಲ್ಲ ಎಂದು ಹೇಳಿದರು. ಅವರು ಐದು ಜನ ಪಂಚ ಪಾಂಡವರು ಎಂದು ಹೋದರು. ನಾನೇಕೆ ಅವರನ್ನು (ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ) ಬುಕ್ ಮಾಡಿಕೊಳ್ಳಲಿ. ಅವನ ಸಾಮರ್ಥ್ಯ ನನಗೆ ಗೊತ್ತಿತ್ತು. ಆದ್ದರಿಂದಲೇ ನಾನು ನಿರಾಳವಾಗಿದ್ದೆ ಎಂದರು.



ಸಿದ್ದೇಗೌಡರಿಗೆ ಟಿಕೆಟ್ ಕೊಟ್ಟು ತಪ್ಪಾಯಿತು ಎಂದು ಸಿದ್ದರಾಮಯ್ಯ ಹೇಳಿದ್ದಾರೆ ಎನ್ನಲಾದ ಬಗ್ಗೆ ಪ್ರತಿಕ್ರಿಯಿಸಿ, ಸಿದ್ದೇಗೌಡ ಮೋಸಗಾರ ಎಂದು ಸಿದ್ದರಾಮಯ್ಯನವರಿಗೆ ನಾನು ಹೇಳಿದ್ದೆ. ಡೈರಿಯಲ್ಲಿ ಎಷ್ಟು ಮೋಸ ಮಾಡಿದ್ದ ಎಂದೂ ಹೇಳಿದ್ದೆ. ಆದರೆ ಅವರು ನಂಬದೇ ಟಿಕೆಟ್ ಕೊಟ್ಟರು. ಮೋಸ ಮಾಡುವವರು ಯಾರ ಬಳಿ ಹೋದರೂ ಮೋಸವೇ. ಅವರ ಪಕ್ಷದವರೇ ಬುಕ್ ಮಾಡಿಕೊಂಡಿರಬೇಕು ಎಂದು ಅನುಮಾನ ವ್ಯಕ್ತಪಡಿಸಿದರು. ಸಿದ್ದರಾಮಯ್ಯನವರು ಇಷ್ಟು ಹಿರಿಯ ನಾಯಕರಾಗಿ ಚಾಮುಂಡೇಶ್ವರಿ ಅಭ್ಯರ್ಥಿ ಆಯ್ಕೆಯಲ್ಲಿ ಎಡವಿದ್ದಾರೆಯೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ● 9ನೇ ಪುಟಕ್ಕೆ

ಎಲ್ಲಾ ಎಕ್ಸಿಟ್ ಪೋಲ್‌ಗಳು ಸುಳ್ಳಾಗುತ್ತವೆ



ಬೆಂಗಳೂರು, ಮೇ 11–ಎಲ್ಲಾ ಎಕ್ಸಿಟ್ ಪೋಲ್‌ಗಳು ಸುಳ್ಳಾಗುತ್ತವೆ. ಈ ಹಿಂದೆಯೂ ಅವು ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಬಿಜೆಪಿ ಗೆಲ್ಲುತ್ತದೆ ಎಂದು ಊಹಿಸಿರಲಿಲ್ಲ ಎಂದು ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಗುರುವಾರ ಹೇಳಿದ್ದಾರೆ. ಬಿಜೆಪಿಯು 2014ರಲ್ಲಿ 282 ಅಥವಾ 2019ರಲ್ಲಿ 303 ಅಥವಾ 2022ರಲ್ಲಿ 156 ಅಥವಾ 2018 ರಲ್ಲಿ 104 ಎಂದು 0ಯಾವ ಸಮೀಕ್ಷೆಗಳು ಭವಿಷ್ಯ ನುಡಿದಿರಲಿಲ್ಲ ಎಂದಿದ್ದಾರೆ. 2018ರಲ್ಲಿ ಕರ್ನಾಟಕದಲ್ಲಿ ಬಿಜೆಪಿ 14 ವಿಧಾನಸಭಾ ಕ್ಷೇತ್ರಗಳಲ್ಲಿ ಹಿನ್ನಡೆಯೊಂದಿಗೆ 24,000 ಬೂತ್‌ಗಳಲ್ಲಿ ಮುನ್ನಡೆ ಸಾಧಿಸಿತ್ತು. ಈ ಬಾರಿ ನಾವು 31,000 ಬೂತ್‌ಗಳಲ್ಲಿ ಮುನ್ನಡೆ ಸಾಧಿಸಿದ್ದೇವೆ ಮತ್ತು ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಿದ್ದೇವೆ. ನೀವು ನೀಡಿರುವ ಸಂಖ್ಯೆಗಳು ಕೇವಲ ನಿಮ್ಮ ಊಹೆಯಷ್ಟೇ ಎಂದು ಸಂತೋಷ್ ಹೇಳಿದರು.



ಇವಿಎಂಗಳಿರುವ ಸ್ಟ್ರಾಂಗ್ ರೂಂಗಳಿಗೆ ಭಾರೀ ಭದ್ರತೆ

ನಾಳೆ ಮತ ಎಣಿಕೆ; ಅಗತ್ಯ ಸಿದ್ಧತೆ



ಮೈಸೂರು, ಮೇ 11(ಆರ್‌ಕೆ)–ಇವಿಎಂಗಳನ್ನಿರಿಸಿರುವ ಮೈಸೂರಿನ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ಮಹಿಳಾ ಸರ್ಕಾರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಸ್ಟ್ರಾಂಗ್ ರೂಂಗೆ 3 ಹಂತದ ಭಾರೀ ಪೊಲೀಸ್ ಭದ್ರತೆ ಮಾಡಲಾಗಿದೆ.

ನಿನ್ನೆಯಷ್ಟೇ ಮತದಾನ ಮುಕ್ತಾಯಗೊಂಡಿದ್ದು, ರಾತ್ರಿಯೇ ಮೈಸೂರು ಜಿಲ್ಲೆಯ ಎಲ್ಲಾ 11 ವಿಧಾನಸಭಾ ಕ್ಷೇತ್ರಗಳ ವಿದ್ಯುನ್ಮಾನ ಮತಯಂತ್ರಗಳನ್ನು ಮೈಸೂರಿನ ಮಹಾರಾಣಿ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜು ಸ್ಟ್ರಾಂಗ್ ರೂಂನಲ್ಲಿ ಭದ್ರಪಡಿಸಲಾಗಿದೆ. ಸ್ಟ್ರಾಂಗ್ ರೂಂಗಳಿಗೆ ಪ್ರವೇಶ ದ್ವಾರದಲ್ಲಿ ಶಸ್ತ್ರ ಸಜ್ಜಿತ ಸಿಐಎಸ್‌ಎಫ್ ತುಕಡಿ, ಎರಡನೇ ಹಂತದಲ್ಲಿ ಸಿಎಆರ್ ತುಕಡಿ ಪೊಲೀಸರು ಹಾಗೂ ಮೂರನೇ ಸುತ್ತಿನಲ್ಲಿ ಸಿಟಿ ಸಿವಿಲ್ ಪೊಲೀಸರನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಬುಧವಾರ ರಾತ್ರಿಯಿಂದಲೇ ಸ್ಟ್ರಾಂಗ್ ರೂಂಗೆ 3 ಪಾಳಿಯಲ್ಲಿ ದಿನದ 24 ಗಂಟೆಯೂ ಬಂದೋಬಸ್ತ್ ಕರ್ತವ್ಯ ನಿರ್ವಹಿಸಲು ಸಿಬ್ಬಂದಿಗಳನ್ನು ನಿಯೋಜಿಸಲಾಗಿದ್ದು, ಎನ್.ಆರ್. ಉಪ ವಿಭಾಗದ ಎಸಿಪಿ ಸಿ.ಕೆ.ಅಶ್ವತ್ಥನಾರಾಯಣ, ವಿಜಯನಗರ ಉಪ ವಿಭಾಗದ ಗಜೇಂದ್ರ ಪ್ರಸಾದ್ ಮತ್ತು ಕೆಆರ್. ಉಪ ವಿಭಾಗದ ಎಸ್‌ಇ ಗಂಗಾಧರಸ್ವಾಮಿ ಅವರು ಭದ್ರತಾ ಕಾರ್ಯವನ್ನು ಮೇಲ್ವಿಚಾರಣೆ ಮಾಡುವರು ಎಂದು ಅವರು ತಿಳಿಸಿದರು. ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ.ಮುತ್ತುರಾಜ್ ಅವರು ಆಗಿಂದಾಗ್ಗೆ ಸ್ಟ್ರಾಂಗ್ ರೂಂ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಲಿದ್ದು, ತಾವೂ ಪ್ರತೀ ದಿನ ಭೇಟಿ ನೀಡಿ ಭದ್ರತಾ ವ್ಯವಸ್ಥೆ ವೀಕ್ಷಿಸಿ ಸೂಕ್ತ ಮಾರ್ಗದರ್ಶನ ಮಾಡುತ್ತಿದ್ದೇವೆ ಎಂದೂ ಪೊಲೀಸ್ ಆಯುಕ್ತರು ತಿಳಿಸಿದರು. ಮೇ 13ರಂದು ಮತ ಎಣಿಕೆ ● 9ನೇ ಪುಟಕ್ಕೆ



ನಕ್ಕರೆ ಅದೇ ಸ್ವರ್ಗ

ಡಾಕ್ಟರ್ ಬಸ್ಯಾ : "ನಮ್ಮ ಆಸ್ಪತ್ರೆಯ ಪ್ರಚಾರಕ್ಕಾಗಿ ಒಂದೊಳ್ಳೆ ಪಂಚ್ ಡೈಲಾಗ್ ಹೇಳು ತಿಪ್ಪೇಶಿ"

ತಿಪ್ಪೇಶಿ : "ಕರ್ಕೊಂಡ್ ಬನ್ನಿ, ಹೊತ್ಕೊಂಡ್ ಹೋಗಿ. ಹಣ ನಮಗೆ, ಹೆಣ ನಿಮಗೆ!"

ಮೈಸೂರು ಮಿತ್ರ

ಶುಕ್ರವಾರ, 12 ಮೇ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ದುಃಖ ಆತ್ಮ ಪರಿಶೀಲನದ ಮಾರ್ಗ.
ದುಃಖ ಹೃದಯಕ್ಕೊಂದು ಸಂಸ್ಕಾರ ನೀಡುತ್ತದೆ.– ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪ್ರೀತಿಗೊಂದು ಮುತ್ತು / ಹಸಿವಿಗೊಂದು ತುತ್ತು

ನಿಮ್ಮ ಪತ್ರಗಳು

ಮತದಾನೋತ್ತರ ಸಮೀಕ್ಷೆಯ ಸುತ್ತಮುತ್ತ

ಮಾನ್ಯರೆ,

ರಾಜ್ಯ ವಿಧಾನಸಭೆಗೆ ಇತ್ತೀಚೆಗೆ ಬುಧವಾರ (ಮೇ 10) ನಡೆದ ಚುನಾವಣೆ ಕುರಿತಾದ ಮತದಾನೋತ್ತರ ಸಮೀಕ್ಷೆ (Exit Poll) ಪ್ರಕಟವಾಗಿದ್ದು, ಸಾಕಷ್ಟು ಕುತೂಹಲ ಕೆರಳಿಸಿದೆ. ಈ ಸಮೀಕ್ಷೆಗಳನ್ನು ಟಿವಿ 9 ಸಿ–ವೋಟರ್, ಸುವರ್ಣ, ಜನ್ ಕಿ ಬಾತ್, ರಿಪಬ್ಲಿಕ್ ಟಿವಿ, ಇಂಡಿಯಾ ಟಿವಿ, ಟೈಮ್ಸ್ ನೌ, ವಿಸ್ತಾರ, ಮುಂತಾದ ಸಂಸ್ಥೆಗಳು ನಡೆಸಿವೆ. ಕೆಲವು ಸಮೀಕ್ಷೆಗಳ ಪ್ರಕಾರ ಕಾಂಗ್ರೆಸ್ ಹೆಚ್ಚು ಸ್ಥಾನ ಗಳಿಸಿ, ಸರ್ಕಾರ ರಚಿಸುತ್ತದೆ ಎಂದು ಹೇಳಿದ್ದರೆ, ಒಂದೆರಡು ಸಮೀಕ್ಷೆಗಳು ಭಾರತೀಯ ಜನತಾ ಪಕ್ಷ ಹೆಚ್ಚು ಸ್ಥಾನ ಗಳಿಸುತ್ತದೆ ಎಂದು ಹೇಳಿವೆ. ಈ ಬಾರಿ 120ಕ್ಕೂ ಅಧಿಕ ಸ್ಥಾನ ಗಳಿಸಿ ಸ್ವಂತ ಬಲದ ಮೇಲೆ ಸರ್ಕಾರ ರಚಿಸುವ ವಿಶ್ವಾಸ ವ್ಯಕ್ತಪಡಿಸಿದ್ದ ಜೆಡಿಎಸ್‌ಗೆ ಯಾವ ಸಮೀಕ್ಷೆಯಲ್ಲೂ 36ಕ್ಕಿಂತ ಅಧಿಕ ಸ್ಥಾನ ದೊರಕಿಲ್ಲ. ಭಾರತೀಯ ಜನತಾ ಪಕ್ಷದ ಪರವಾಗಿ ಸ್ವತಃ ಪ್ರಧಾನ ಮಂತ್ರಿಗಳೇ ಪ್ರಚಾರದ ಅಖಾಡಕ್ಕೆ ಧುಮುಕಿದ್ದರು. ಆ ಪಕ್ಷದ ಹಿರಿಯ ನಾಯಕ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮುಂತಾದವರು ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರ ನಡೆಸಿದ್ದರು. ಸೋನಿಯಾ ಗಾಂಧಿ, ಪ್ರಿಯಾಂಕ ಗಾಂಧಿ, ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್‌ನ ಪ್ರಮುಖ ನಾಯಕರು ಸಹ ತಮ್ಮ ಪಕ್ಷದ ಅಭ್ಯರ್ಥಿಗಳ ಪ್ರಚಾರ ನಡೆಸಿದ್ದರು. ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್, ಕಣ್ಣು ಕೋರೈಸುವ ರೋಡ್ ಶೋಗಳನ್ನು ನಡೆಸಿದ್ದವು. ಈಗ ಅದೆಲ್ಲಾ ಮುಗಿದ ಕಥೆಯಾಗಿದ್ದು, ಮತದಾರರು, ತಮ್ಮ ಆಯ್ಕೆಯನ್ನು ಮಾಡಿ ಮುಗಿಸಿದ್ದು ಅವುಗಳು ಮತ ಪೆಟ್ಟಿಗೆಯೊಳಗೆ ಭದ್ರವಾಗಿದ್ದು, ಇದೇ ತಿಂಗಳ 13 ರಂದು ಒಂದೊಂದಾಗಿ ಹೊರಬರಲಿವೆ.

ಸಾಮಾನ್ಯವಾಗಿ ಪ್ರತಿಷ್ಠಿತ ಟಿವಿ ಚಾನಲ್‌ಗಳು ಹಾಗೂ ಮಾಧ್ಯಮ ಸಂಸ್ಥೆಗಳು ಹಲವಾರು ವರ್ಷಗಳಿಂದ ಮತದಾನೋತ್ತರ ಸಮೀಕ್ಷೆ ನಡೆಸುತ್ತಾ ಬಂದಿವೆ. ಚುನಾವಣೆಯಲ್ಲಿ ಮತದಾನ ಮಾಡಿ ಹೊರಬಂದ ಮತದಾರರನ್ನು ಭೇಟಿಯಾಗಿ, ಅವರು ಯಾವ ಪಕ್ಷಕ್ಕೆ ಮತ ನೀಡಿದ್ದಾರೆ ಎಂಬುದನ್ನು ತಿಳಿದುಕೊಂಡು ಅದರ ಆಧಾರದ ಮೇಲೆ ಈ ಮತದಾನೋತ್ತರ ಸಮೀಕ್ಷೆಯನ್ನು ತಯಾರು ಮಾಡಲಾಗುತ್ತದೆ. ಇದಕ್ಕಾಗಿ ರಾಜ್ಯಾದ್ಯಂತ ಕೆಲವು ಮತ ಕ್ಷೇತ್ರಗಳನ್ನು ಹಾಗೂ ಮತಗಟ್ಟೆಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಈ ಸಮೀಕ್ಷೆ ಕಳೆದ ಹಲವಾರು ಚುನಾವಣೆಗಳಲ್ಲಿ ನಿಜವಾಗಿದೆ. ಮತ್ತೇ ಕೆಲವು ಚುನಾವಣೆಗಳಲ್ಲಿ ನಿಜವಾಗಿಲ್ಲ. ಆದರೂ ಸಹ ಎಕ್ಸಿಟ್ ಪೋಲ್ ಮತದಾರರ ಆಶಯಗಳನ್ನು ಒಟ್ಟಾರೆಯಾಗಿ ಬಿಂಬಿಸುತ್ತದೆ. ಈ ಸಮೀಕ್ಷೆಯಲ್ಲಿ ಪಾಲ್ಗೊಳ್ಳುವ ಮತದಾರರ ಸಂಖ್ಯೆ ಕಡಿಮೆ ಇದ್ದು, ಇದರ ಆಧಾರದ ಮೇಲೆಯೇ ಇಡೀ ಫಲಿತಾಂಶ ಅವಲಂಬಿತವಾಗಿರುತ್ತದೆ ಎಂಬುದನ್ನು ಸಹ ನಂಬುವುದು ಕಷ್ಟ, ಅದೇನೇ ಇರಲಿ, ಮತದಾನೋತ್ತರ ಸಮೀಕ್ಷೆಗಳಿಗೆ ತಮ್ಮದೇ ಆದ ಮಹತ್ವವಿದ್ದು, ಇದು ಮತದಾರರ ನಾಡಿಮಿಡಿತವನ್ನು ಸ್ವಲ್ಪಮಟ್ಟಿಗಾದರೂ ಸೂಚಿಸಬಲ್ಲವು ಎಂಬುದಂತೂ ನಿಜವಾದ ಮಾತು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಶಿಥಿಲಗೊಂಡಿರುವ ಯುಜಿಡಿ ಲೈನ್ ಸರಿಪಡಿಸಿ

ಮಾನ್ಯರೆ,

ಮೈಸೂರಿನ ವಿಜಯನಗರ 2ನೇ ಹಂತದ, ಹಂಪಿ ಸರ್ಕಲ್ ಹತ್ತಿರ, 80 ಅಡಿ ರಸ್ತೆಯ 21ನೇ ಮುಖ್ಯ ರಸ್ತೆಯು, ಹೆಚ್ಚಿನ ಜನರು ಓಡಾಡುವ ಅತೀ ಮುಖ್ಯ ರಸ್ತೆಯಾಗಿದೆ. ಆದರೆ ಈ ರಸ್ತೆಯ ಒಳಚರಂಡಿಯು ಸುಮಾರು 35 ವರ್ಷಗಳಷ್ಟು ಹಳೆಯದಾಗಿದ್ದು, ಪೂರ್ಣ ಮುಚ್ಚಿ ಹೋಗಿರುತ್ತದೆ. FUGD Lineನಲ್ಲಿ ಹಾಕಿರುವ ಎಲ್ಲಾ 6 ಚೇಂಬರ್‌ಗಳೂ ಶಿಥಿಲಗೊಂಡು ಪೂರ್ಣ ಹಾಳಾಗಿವೆ. ಇವುಗಳ ದುಸ್ಥಿತಿಯಿಂದ, ಗಲೀಜು ನೀರೆಲ್ಲಾ ರಸ್ತೆಯಲ್ಲೆಲ್ಲಾ ಹರಿದು ದುರ್ವಾಸನೆ ಬೀರುತ್ತಿರುವುದಲ್ಲದೇ, ಸುತ್ತಲಿನ ಮನೆಗಳ U G D Pipe ಗಳೂ ಬ್ಲಾಕ್ ಆಗುತ್ತಿವೆ. ಬಡಾವಣೆಯ ಎಲ್ಲಾ U G D Line ಗಳನ್ನು ಬದಲಾಯಿಸಿ, ಕಾಮಗಾರಿ ಮುಗಿಸಿರುತ್ತಾರೆ. ಆದರೆ, ತೀರ ದುಸ್ಥಿತಿಯಲ್ಲಿದ್ದ F U G D Line ಬಗ್ಗೆ ಯಾರೂ ಗಮನಕೊಡದೇ ಇರುವುದು, ತೀರ ವಿಷಾದನೀಯ. ಎರಡೂ ಬಡಾವಣೆಯ ಜನರು ಮತ್ತು ಹಿರಿಯ ನಾಗರಿಕರು ಅಸಹ್ಯ ಪಡುತ್ತಾ ಅದೇ ಮಾರ್ಗವಾಗಿ ಓಡಾಡಬೇಕಾದ ಅನಿವಾರ್ಯತೆ ಬಂದೊದಗಿದೆ. ಈ ವಿಚಾರವನ್ನು ಸಂಬಂಧಪಟ್ಟ ಕಾರ್ಪೋರೇಟರ್‌ಗಳ ಗಮನಕ್ಕೆ ತಂದರೂ, ಕಿಂಚಿತ್ತೂ ಗಮನ ಕೊಡದೇ ನಿದ್ರಾವಸ್ಥೆಯಲ್ಲಿರುವುದು ತೀರ ದುರದೃಷ್ಟಕರ ಸಂಗತಿ.

ಆದ್ದರಿಂದ ಈ ವಿಚಾರವನ್ನು ಅತೀ ತುರ್ತು ಕಾರ್ಯವೆಂದು ಪರಿಗಣಿಸಿ, ಸ್ಥಳ ಪರಿಶೀಲನೆ ನಡೆಸಿ, ಸದರಿ U GD Line ನ್ನು ಹೊಸದಾಗಿ ಬದಲಾಯಿಸಿ ಬಡಾವಣೆಯ ನಾಗರಿಕರ ಸಮಸ್ಯೆಯನ್ನು ಬಗೆಹರಿಸುವಿರೆಂದು ನಂಬಿದ್ದೇವೆ.

– ಬಡಾವಣೆಯ ನಿವಾಸಿಗಳು, ಹೆಬ್ಬಾಳು 2ನೇ ಹಂತ, ಮೈಸೂರು.

ಕೃಷಿ ಇಲಾಖೆ ಸಮರ್ಪಕ ಬಿತ್ತನೆ ಬೀಜ ಪೂರೈಕೆಯಲ್ಲಿ ವಿಫಲ

ಮಾನ್ಯರೆ,

ಯುಗಾದಿ ಹಬ್ಬದ ನಂತರ ಮಳೆ ಆಗಿ ಬಿತ್ತನೆ ಕಾರ್ಯ ಆರಂಭವಾಗುವ ವಿಚಾರ ತಿಳಿದಿದ್ದರೂ ಕೃಷಿ ಇಲಾಖೆ ಹಾಗೂ ಸರ್ಕಾರ ಬಿತ್ತನೆ ಬೀಜವನ್ನು ಗುಂಡ್ಲುಪೇಟೆ ಹಾಗೂ ಬೇಗೂರಿನಲ್ಲಿ ಸಮರ್ಪಕವಾಗಿ ಪೂರೈಕೆ ಮಾಡಲು ವಿಫಲವಾಗಿರುವುದು ತುಂಬಾ ನಾಚಿಕೆಗೇಡಿನ ಸಂಗತಿ.

ಇದು ಪ್ರತಿ ವರ್ಷವೂ ಜರುಗುವ ವಿಷಯವಾಗಿದೆ. ಮಳೆ ಬಂದ ಮೇಲೆ ಸರಿಯಾದ ಸಮಯಕ್ಕೆ ಬಿತ್ತನೆ ಮಾಡದಿದ್ದರೆ ವ್ಯತ್ಯಾಸವಾಗಿ ರೈತರಿಗೆ ಹೆಚ್ಚು ಇಳುವರಿ ಸಿಗದೆ ರೈತ ನಷ್ಟಕ್ಕೆ ಈಡಾಗುತ್ತಾನೆ ಹಾಗೂ ಸಾಲದ ಸುಳಿಗೆ ಸಿಲುಕುತ್ತಾನೆ. ಕೃಷಿ ಇಲಾಖೆ ಸರಿಯಾದ ಸಮಯಕ್ಕೆ ಬಿತ್ತನೆ ಬೀಜ ವಿತರಿಸದಿದ್ದರೆ ರೈತರಿಗೆ ತುಂಬಾ ತೊಂದರೆಯಾಗುತ್ತದೆ ಎಂದು ತಿಳಿದಿದ್ದರೂ ಯಾಕೆ ಈ ಉದಾಸೀನ ಮನೋಭಾವದ ಧೋರಣೆ ಎಂಬುದು ಅರ್ಥವಾಗುವುದಿಲ್ಲ. ಸರ್ಕಾರದಿಂದ ಕಡಿಮೆ ಬೆಲೆಗೆ ಬಿತ್ತನೆ ಬೀಜ ದೊರಕುತ್ತದೆ. ಆದರೆ ಸರಿಯಾಗಿ ದಾಸ್ತಾನು ಮಾಡದೆ ಖಾಸಗಿಯವರಿಗೆ ಹಣ ಮಾಡಿಕೊಳ್ಳಲು ಅನುವು ಮಾಡಿಕೊಡುವ ಮೂಲಕ ರೈತರ ಕಣ್ಣಿನಲ್ಲಿ ನೀರು ಬರಿಸುವುದು ಎಷ್ಟು ನ್ಯಾಯಸಮ್ಮತ. ರೈತರು ಖಾಸಗಿ ಅಂಗಡಿಗಳ ಮುಂದೆ ಬಿತ್ತನೆ ಬೀಜಕ್ಕಾಗಿ ಸರತಿ ಸಾಲಿನಲ್ಲಿ ಬೆಳಗ್ಗಿನಿಂದ ಸಂಜೆಯವರೆಗೆ ಕಾಯ್ದು ಹೆಚ್ಚುವರಿ ಹಣ ನೀಡುತ್ತಿರುವುದು ತುಂಬಾ ಬೇಸರದ ಸಂಗತಿ. ಕೃಷಿ ಇಲಾಖೆ ಅಧಿಕಾರಿಗಳು ಇತ್ತಕಡೆ ಗಮನ ಹರಿಸಿ ಆದಷ್ಟು ಬೇಗ ಬಿತ್ತನೆ ಬೀಜ ದೊರಕುವಂತೆ ಮಾಡುವುದು ಸೂಕ್ತ.

– ಬೆಸಗರಹಳ್ಳಿ ರವಿ ಪ್ರಸಾದ್. ಕೆ ಸಿ ನಗರ, ಮೈಸೂರು.

ಸಕಾಲಿಕ



ಆರ್.ಪಿ.ಜಗದೀಶ್
ಹಿರಿಯ ಪತ್ರಕರ್ತರು
ಮೊ: 9845048051

ಯಾರು ಹಿತವರು ಈ ಮೂವರೊಳಗೆ ಕಾಂಗ್ರೆಸ್, ಬಿಜೆಪಿ, ಸಮ್ಮಿಶ್ರ

ಈಗ ಹೊರ ಬಂದಿರುವ ಸಮೀಕ್ಷಾ ವರದಿಗಳು ಜೆಡಿಎಸ್, ಕಾಂಗ್ರೆಸ್, ಬಿಜೆಪಿಗೆ ಸವಾಲಾಗಿದೆ. 100 ಸ್ಥಾನಗಳಿಗಿಂತ 2 ರಾಷ್ಟ್ರೀಯ ಪಕ್ಷಗಳು ಕಡಿಮೆ ಪಡೆದರೆ ಜೆಡಿಎಸ್ ಪಾದಕ್ಕೆ ಬೀಳಬೇಕಾದ ಪರಿಸ್ಥಿತಿ ಬರುತ್ತದೆ. ಆಗ ಬಿಜೆಪಿ ಆಯ್ಕೆ ಜೆಡಿಎಸ್. ಕಾಂಗ್ರೆಸ್‌ನ ಡಿಕೆಶಿ ಕೂಡ ಸುಮ್ಮನೆ ಕೈ ಕಟ್ಟಿ ಕೂರುವ ಆಸಾಮಿ ಅಲ್ಲ. ಜೆಡಿಎಸ್ ಭವಿಷ್ಯ ಅತಂತ್ರ ಫಲಿತಾಂಶದ ಮೇಲೆ ನಿಂತಿದೆ. ದೇವೇಗೌಡರ ಬಹು ದೊಡ್ಡ ಆಸೆ ಮತ್ತೊಮ್ಮೆ ತಮ್ಮ ಪುತ್ರ ಸಿಎಂ ಆಗುವುದು. ಇದರಲ್ಲಿ ಯಾವ ಭವಿಷ್ಯವಾಣಿಗೆ ಮತದಾರ ಮಣೆ ಹಾಕಿದ್ದಾನೋ ಕಾದು ನೋಡಬೇಕು.

ರಾಜ್ಯ ವಿಧಾನಸಭಾ ಚುನಾವಣಾ ಸಮೀಕ್ಷೆಗಳ ಪ್ರಕಾರ ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿಯಬೇಕು. ಆದರೆ ಇನ್ನೂ ಕೆಲವು ಸಂಸ್ಥೆಗಳ ಲೆಕ್ಕಾಚಾರದ ರೀತಿ ಬಿಜೆಪಿ ಬಹುಮತ ಗಳಿಸಲಿದೆ. ಕೆಲವು ಸಮೀಕ್ಷೆಗಳು ನುಡಿದಿರುವಂತೆ ರಾಜ್ಯದಲ್ಲಿ ಜೆಡಿಎಸ್ + ಸಮ್ಮಿಶ್ರ ಸರ್ಕಾರ ಬರಲಿದೆ ಎಂಬ ವಾದವೂ ಇದೆ. ಈ ಮೂರು ಭವಿಷ್ಯವಾಣಿ ಬಿಟ್ಟು ಯಾರು ಹಿತವರು ನಮಗೆ ಈ ಮೂರು ಪಕ್ಷಗಳಲ್ಲಿ ಎಂಬುದನ್ನು ಮತದಾರ ಪ್ರಭು ಈಗಾಗಲೇ ನಿರ್ಧರಿಸಿದ್ದಾನೆ.


ಹೆಚ್ಚಿನ ಸಂಖ್ಯೆಯ ಸಮೀಕ್ಷೆಗಳು 'ಕೈ' ಅಧಿಕಾರದ ಚುಕ್ಕಾಣಿ ಹಿಡಿಯುವುದಾಗಿ ಭವಿಷ್ಯ ನುಡಿದಿವೆ. ಈ ಸಮೀಕ್ಷೆಗೆ ಆಧಾರವೇನು? ಈ ಬಗ್ಗೆ ವಿಶ್ಲೇಷಿಸುವುದಾದರೆ, ಪ್ರಸಕ್ತ ಸರ್ಕಾರದ ಆಡಳಿತದ ಬಗ್ಗೆ ಅಂಗೈ ಹುಣ್ಣಿಗೆ ಕನ್ನಡಿ ಬೇಕೇ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ.

ಒಂದೇ ಮಾತಿನಲ್ಲಿ ಹೇಳಬೇಕೆಂದರೆ 'ಮಾಡಿದ್ದುಣ್ಣೋ ಮಾರಾಯ' ಎಂಬ ಗಾದೆಯಂತಾಗುತ್ತದೆ ಬಿಜೆಪಿ ಸ್ಥಿತಿ. ಭ್ರಷ್ಟಾಚಾರದ ಗಂಗೋತ್ರಿಯಂತೆ ಆಡಳಿತ ನಡೆದದ್ದು ಬಿಜೆಪಿ ಸರ್ಕಾರಕ್ಕೆ ಮಸಿ ಬಳಿದಂತಾಯಿತು. ಇದೇ ಆ ಪಕ್ಷದ ಭವಿಷ್ಯಕ್ಕೆ ಮುಳುವಾಯಿತು ಎನ್ನಬಹುದು.

ಇನ್ನು ಕಾಂಗ್ರೆಸ್ ಬಗ್ಗೆ ಹೇಳಬೇಕೆಂದರೆ ಅವರೇನು ಸತ್ಯ ಹರಿಶ್ಚಂದ್ರರಲ್ಲ. ಆದರೂ ಬಿಜೆಪಿಯವರಷ್ಟು ಭ್ರಷ್ಟರಲ್ಲ. ಇದೇ ನಿಜವಾದ ಜನಾಭಿಪ್ರಾಯ. ಒಳ್ಳೇ ಆಡಳಿತದ ಬಗ್ಗೆ ದೇಶಕ್ಕೆಲ್ಲಾ ಶಂಖ ಊದುತ್ತಿದ್ದ ಬಿಜೆಪಿ ದೆಹಲಿ ನಾಯಕರಿಗೆ ರಾಜ್ಯ ನಾಯಕರು ಕೊಟ್ಟ ಕೊಡುಗೆ ಪ್ರಧಾನಿ ಮೋದಿಯವರಂತಹ ಧೀಮಂತ ನಾಯಕನಿದ್ದು ಕಮಲ ಕಮರುವಂತೆ ಮಾಡಿದ್ದು.

ಬಹಳ ವರ್ಷಗಳ ಕಾಲ ರಾಜ್ಯವನ್ನು ಆಳಿ ಅನುಭವ ಪಡೆದಿರುವ ಸ್ಥಳೀಯ ಕಾಂಗ್ರೆಸ್ ನಾಯಕರ ಶ್ರಮ ಕಡೆಗಣಿಸುವಂತಿಲ್ಲ. ಜನಪ್ರಿಯ ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನವರ ಕೊಡುಗೆ ಅಪಾರ. ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಹಾಗೂ ನಾಲಿಗೆಗೆ ಲಗಾಮು ಇಲ್ಲದಂತೆ ಬಿಜೆಪಿ ನಾಯಕರನ್ನು ಅಲ್ಲಾಡಿಸಿದ್ದಾರೆ. ಅವರ ಶ್ರಮದ ಪ್ರತಿಫಲವೇ ಈ ಸಮೀಕ್ಷೆಗಳ ಫಲಿತಾಂಶಗಳು ಎಂದರೆ ಅತಿಶಯೋಕ್ತಿಯಲ್ಲ.

ಇನ್ನು ಸರ್ಕಾರದ ಚುಕ್ಕಾಣಿ ಹಿಡಿಯುವ ಕನಸು ಕಾಣುತ್ತಿರುವ ಕೆಪಿಸಿಸಿ ಅಧ್ಯಕ್ಷ, ಕನಕಪುರದ ಬಂಡೆ ಡಿ.ಕೆ.ಶಿವಕುಮಾರ್ ಮಿಂಚಿನ ಸಂಚಾರ, ಹಗಲು–ರಾತ್ರಿ ಎನ್ನದೆ ಸಂಘಟನೆ ಮತ್ತು ಪ್ರಚಾರದಲ್ಲಿ ತೊಡಗಿದ್ದು ಅವರ ನಾಯಕತ್ವದ ಗುಣವನ್ನು ಮೆಚ್ಚುವಂತಹದ್ದು. ಈ ಇಬ್ಬರು ನಾಯಕರಿಗೆ ಬೆನ್ನಿಗೆ ಬೆನ್ನಾಗಿ ನಿಂತವರು ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ್.



ಈ ತ್ರಿಮೂರ್ತಿಗಳಿಗೆ ಮಾರ್ಗದರ್ಶಕರಾಗಿ ಅವರೊಂದಿಗೆ 'ಕೈ' ಜೋಡಿಸಿ ಹಳ್ಳಿಗಳಲ್ಲಿ ಸುತ್ತಾಡಿ ಪಕ್ಷದ ಸಂಘಟನೆ ಹಾಗೂ ಪ್ರಚಾರ ಮಾಡಿದ ಕಾಂಗ್ರೆಸ್‌ನ ಮುತ್ಸದ್ದಿ ನಾಯಕ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಪರಿಶ್ರಮವನ್ನು ಮರೆಯುವಂತಿಲ್ಲ. ಕಾಂಗ್ರೆಸ್‌ನ ವಕ್ತಾರರಾಗಿ ಇಲ್ಲೇ ನೆಲೆಯೂರಿದ್ದ ಸುರ್ಜೇವಾಲ ಅವರ ಶ್ರಮವನ್ನು ಕೂಡ ಕಡೆಗಣಿಸುವಂತಿಲ್ಲ. ಇವರಿಗೆಲ್ಲಾ ಮೀರಿ ತಮ್ಮ ಆರೋಗ್ಯ ಲೆಕ್ಕಿಸದೆ ರಾಜ್ಯಕ್ಕೆ ಬಂದು ಪಕ್ಷದ ಪರವಾಗಿ ಪ್ರಚಾರ ಮಾಡಿದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಹಾಗೂ ಪ್ರಿಯಾಂಕ ಗಾಂಧಿ ಈ ತಾಯಿ–ಮಕ್ಕಳು ಪಕ್ಷವೆಂಬ 'ರಥ' ಎಳೆದದ್ದು ಗಮನಾರ್ಹ. ಇವೆಲ್ಲಾ ಒಟ್ಟಾರೆಯಾಗಿ ಸಮೀಕ್ಷೆಗಳ ಪ್ರಕಾರ ಫಲ ಕೊಟ್ಟಿದೆ.

ಮತ್ತೆ ಇನ್ನು ಕೆಲವು ಸಮೀಕ್ಷೆಗಳ ಪ್ರಕಾರ ರಾಜ್ಯದಲ್ಲಿ ಬಿಜೆಪಿ ಆಡಳಿತ ಮುಂದುವರಿಯಲಿದೆ. ಏಕೆಂದರೆ ರಾಜ್ಯ ಸರ್ಕಾರ ಮಾಡಿರುವ ಅಭಿವೃದ್ಧಿ ಕಾರ್ಯಗಳು. ಇದರ ಜೊತೆಗೆ ಕೇಂದ್ರ ಸರ್ಕಾರ ಇವರಿಗೆ ನೀಡಿದ ಸಹಕಾರ ಅಮೋಘವಾದದ್ದು. ಅದರ ಸದುಪಯೋಗ ಪಡೆದದ್ದು ಈ ಸರ್ಕಾರದ ಹೆಮ್ಮೆ. ಜತೆಗೆ ಜನತೆಯ ಕಣ್ಣು ತೆರೆಸುವಂತೆ ಮಾಡಿದೆ.

ಬಿಜೆಪಿಗೆ ಆನೆ ಬಲ ಬಂದಂತೆ ಭೀಷ್ಮರಾಯನಾಗಿ ರಾಜ್ಯದ ಮೂಲೆ–ಮೂಲೆಯಲ್ಲಿ ಅಲೆದಾಡಿ ಜನತೆಯ ಮನ ಗೆದ್ದ ಬಿಎಸ್‌ವೈಗೆ ಸಾಟಿಯೇ ಇಲ್ಲ. ತಮಗಾದ ಅವಮಾನ, ನೋವು–ಸಂಕಟ ಮರೆತು ಟೊಂಕಕಟ್ಟಿ ನಿಂತು ಪಕ್ಷದ ಭವಿಷ್ಯಕ್ಕೆ ಶ್ರಮಿಸಿದ ರೀತಿ ಒಬ್ಬ ದೊಡ್ಡ ನಾಯಕರಿಗೆ ಇರಬೇಕಾದ ಸದ್ಗುಣ. ಇದು ಪಕ್ಷದ ಗೆಲುವಿಗೆ ಕಾರಣವಾಗಿದೆ. ವಿರೋಧ ಪಕ್ಷದವರೂ ಕೂಡ ಬಿಎಸ್‌ವೈ ಬಗ್ಗೆ ಅನುಕಂಪ ತೋರಿಸುತ್ತಿದ್ದರು. ಇದು ಅವರ ಧೀಮಂತ ನಾಯಕತ್ವಕ್ಕೆ ಸಾಕ್ಷಿ. ಈ ವಯಸ್ಸಿನಲ್ಲಿ ದಣಿವರಿಯದ ನಾಯಕರೆಂಬ ಬಿರುದಿಗೆ ಅನ್ವರ್ಥವಾಗಿದ್ದಾರೆ.

ಸಿಎಂ ಹಾಗೂ ಅವರ ಮಿತ್ರ ಮಂಡಳಿ ಬಹಳಷ್ಟು ಪ್ರವಾಸ–ಪ್ರಚಾರ ಮಾಡಿ ಹೈಕಮಾಂಡ್ ನಾಯಕರಿಂದ ಭೇಷ್ ಎನಿಸಿಕೊಂಡಿದೆ. ಬಸವರಾಜ ಬೊಮ್ಮಾಯಿ ಈಗ ಹೈಕಮಾಂಡ್ ನೀಲಿಗಣ್ಣಿನ ಸಿಎಂ ಆಗಿದ್ದಾರೆ ಎನ್ನಬಹುದು.

ಈ ಸಮೀಕ್ಷೆಯ ಫಲಿತಾಂಶ ನಿಜವಾದರೆ, ಅದರ ಪೂರ್ಣ ಫಲ ಮೋದಿ, ಶಾ, ನಡ್ಡಾ ಸೇರಿದಂತೆ ದೆಹಲಿಯ ಹಲವು ನಾಯಕರ ಪರಿಶ್ರಮಕ್ಕೆ ಸಲ್ಲುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ, **ದೇಶ ಕಂಡ ಅತ್ಯಂತ ಧೀಮಂತ ಪ್ರಧಾನಿ ಹಾಗೂ ವಿಶ್ವ ನಾಯಕರಾಗಿ ಮಿಂಚುತ್ತಿರುವ ಮೋದಿಯ ಆಕರ್ಷಣೆ ಬಿಜೆಪಿಗೆ ವರದಾನವಾಗಿದೆ**. ಅವರ ಪ್ರಚಾರದ ವೈಖರಿ, ರೋಡ್ ಶೋ ಇವೆಲ್ಲ ರಾಜ್ಯದ ಜನತೆ ಬೆರಗಾಗುವಂತಿದೆ. ಅಲ್ಲದೆ ರಾಜ್ಯದ ವಿರೋಧ ಪಕ್ಷಗಳ ನಾಯಕರ ಜಂಘಾಬಲವನ್ನೇ ಅಲ್ಲಾಡಿಸಿದಂತೆ ಮಾಡಿದೆ. ಒಂದು ವೇಳೆ, ಈ ಸಮೀಕ್ಷೆ ಸುಳ್ಳಾಗಿ ಅಧಿಕಾರ ಕಳೆದುಕೊಂಡರೆ, ರಾಜ್ಯ ಬಿಜೆಪಿ ನಾಯಕರು ತಮ್ಮ ಭ್ರಷ್ಟಾಚಾರದ ಆರೋಪ ತಲೆ ಮೇಲೆ ಹೊತ್ತುಕೊಂಡು, ಕಾಶಿಯಾತ್ರೆ ಮಾಡಿ ಗಂಗಾ ನದಿಯಲ್ಲಿ ಮಿಂದು ಪಾಪ ತೊಳೆದುಕೊಂಡಂತೆ ಮೂಲೆಗುಂಪಾಗಬೇಕಾಗುತ್ತದೆ. ಇವರ ಪಾಪದ ಕೂಸಿನ ಫಲವಾಗಿ ದೆಹಲಿ ನಾಯಕರ ವರ್ಚಸ್ಸಿಗೆ ಮಸಿ ಬಳಿದಂತಾಗುತ್ತದೆ.

ಸಮೀಕ್ಷೆಗಳ ಪ್ರಕಾರ ಜೆಡಿಎಸ್‌ಗೆ ಮೂರನೇ ಸ್ಥಾನ. ಆದರೆ ಬಹುತೇಕ ಸಮೀಕ್ಷೆಗಳು ಜೆಡಿಎಸ್ ಪಾತ್ರವನ್ನು ಅಷ್ಟಾಗಿ ಪರಿಗಣಿಸಿಲ್ಲ. ಅವುಗಳ ಪ್ರಕಾರ ಕಾಂಗ್ರೆಸ್ ಇಲ್ಲವೇ ಬಿಜೆಪಿ ಅಧಿಕಾರಕ್ಕೆ ಬರಲಿದೆ. ಅಂದರೆ ಸಮ್ಮಿಶ್ರ ಸರ್ಕಾರದ ಪ್ರಶ್ನೆ ಇಲ್ಲ ಎಂಬುದು.

ಆದರೆ ಮಾಜಿ ಸಿಎಂ ಕುಮಾರಸ್ವಾಮಿ, ಜೆಡಿಎಸ್ ಕನಿಷ್ಠ 123 ಸ್ಥಾನ ಗಳಿಸಿ ಸ್ವತಂತ್ರವಾಗಿ ಸರ್ಕಾರ ರಚನೆಯ ಆಸೆ ಇಟ್ಟುಕೊಂಡಿದ್ದಾರೆ. ಅದಾಗದಿದ್ದರೂ ಎರಡೂ ರಾಷ್ಟ್ರೀಯ ಪಕ್ಷಗಳು ಬಹುಮತ ಗಳಿಸಲಾರವು. ಆಗ ನಮ್ಮ ಮನೆ ಬಾಗಿಲಿಗೆ ಬಂದೇ ಬರುತ್ತಾರೆಂಬ ಅಚಲ ವಿಶ್ವಾಸದಲ್ಲಿದ್ದಾರೆ.

ಆದರೂ ಕುಮಾರಸ್ವಾಮಿ ಅವರ ಏಕಾಂಗಿ ಹೋರಾಟ ಹಾಗೂ ಮಗನಿಗೆ ಸಾಥ್ ನೀಡಿದ, ಸಿಎಂ ಮಾಡಬೇಕೆಂಬ ಛಲದಿಂದ 'ಛಲದಂಕ ಮಲ್ಲ'ನಾಗಿ ರಾಜ್ಯವನ್ನು ಸುತ್ತಾಡಿದ ಹೆಚ್.ಡಿ. ದೇವೇಗೌಡರ ಶ್ರಮ ಯುವ ಜನಾಂಗವನ್ನು ನಾಚಿಸುವಂತಿದೆ.

ಸಮೀಕ್ಷೆಗಳ ಭವಿಷ್ಯ ಏನೇ ಆಗಿರಲಿ ರಾಜ್ಯದ ಮತದಾರರ ಒಟ್ಟಾರೆ ಅಭಿಪ್ರಾಯದಲ್ಲಿ ಮೋದಿ ಮೋಡಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವ ಭರವಸೆ ಮೂಡಿಸಿದೆ. ಆದರೂ ಕಣ್ಣಿಗೆ ಕಾಣದ ದೇವರ ಆಟ ಬಲ್ಲವರ್ಯಾರು ಕಾದು ನೋಡಬೇಕು.

ಈ ಮಧ್ಯೆ ದೆಹಲಿಯ ಸಮೀಕ್ಷಾ ಸಂಸ್ಥೆಗಳು ಇದುವರೆಗೆ ಮಾಡಿರುವ ಯಾವ ಸಮೀಕ್ಷೆಗಳು ನಿಜವಾದ ನಿದರ್ಶನಗಳಿಲ್ಲ. ಉದಾ: ಗುಜರಾತ್ ವಿಧಾನಸಭಾ ಚುನಾವಣೆ ಫಲಿತಾಂಶ ಇತ್ತೀಚಿನ ತಾಜಾ ನಿದರ್ಶನ.

ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಭಜರಂಗದಳ ನಿಷೇಧದ ವಿಚಾರ ಹಾಗೂ ಖರ್ಗೆ ಅವರು ಮೋದಿ ಅವರ ಬಗ್ಗೆ ಆಡಿದ ಮಾತು ಹಿಂದೂಗಳನ್ನು ಕೆರಳಿಸಿತು ಎಂಬುದಂತೂ ನಿಜ. ಇದು ಸ್ವಲ್ಪಮಟ್ಟಿಗಾದರೂ ಕಾಂಗ್ರೆಸ್‌ಗೆ ಬಿಸಿ ಮುಟ್ಟಿಸಿತು. ಚುನಾವಣಾ ಸಮೀಕ್ಷೆಗಳ ಪ್ರಕಾರ ಕಾಂಗ್ರೆಸ್ ಮೊದಲ ಸ್ಥಾನದಲ್ಲಿದೆ ಎಂದುಕೊಂಡರೆ ಮುಂದಿನ ಸಿಎಂ ಯಾರು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಮುಂದಿನ ಸಿಎಂ ಸಿದ್ದರಾಮಯ್ಯನವರೋ–ಡಿಕೆಶಿಯೋ ಪ್ರಶ್ನೆ ಸಹಜ.

ಹಿಂದಿನ ಮಾಜಿ ಸಿಎಂ ಎಂಬ ಲೆಕ್ಕಾಚಾರ ಹಾಗೂ ಜನಪ್ರಿಯತೆ ಆಧಾರದ ಮೇಲೆ ಸಿದ್ದರಾಮಯ್ಯ ಸಿಎಂ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಡಿಕೆಶಿ ಕೂಡ ಆ ಸ್ಥಾನದ ಪ್ರಬಲ ಆಕಾಂಕ್ಷಿ. ಈ ಇಬ್ಬರ ನಡುವಿನ ಹಗ್ಗಜಗ್ಗಾಟದಲ್ಲಿ **ಕಾಂಗ್ರೆಸ್ ಹೈಕಮಾಂಡ್ ಸಿದ್ದು–ಡಿಕೆಶಿ ಎರಡೂವರೆ ವರ್ಷ**ವೆಂಬ ಸೂತ್ರ ಕಂಡುಹಿಡಿಯಬಹುದು. ಇಲ್ಲವೇ **ಸಿದ್ದು ಸಿಎಂ–ಡಿಕೆಶಿ ಡಿಸಿಎಂ** ಎನ್ನಬಹುದು. ಆದರೆ ಮುಂಬರುವ ಲೋಕಸಭಾ ಚುನಾವಣಾ ದೃಷ್ಟಿಯಿಂದ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ್ ಅವರಿಗೂ ಸಹ ಡಿಸಿಎಂ ಪಟ್ಟ ನೀಡಬಹುದು.

ಆದರೆ ಹಿರಿತನ ಗಣನೆಗೆ ತೆಗೆದುಕೊಂಡರೆ ಖರ್ಗೆ ಅವರಿಗೂ ಅವಕಾಶ ಸಿಗಬಹುದು. ಆದರೆ ಎಐಸಿಸಿ ಅಧ್ಯಕ್ಷರೂ, ಲೋಕಸಭೆ ಹಾಗೂ ರಾಜ್ಯಸಭೆ ವಿರೋಧ ಪಕ್ಷದ ನಾಯಕರಾಗಿದ್ದವರಿಗೆ ಒಂದು ರಾಜ್ಯದ ಸಿಎಂ ಗಾದಿ ಏನೇನೂ ಅಲ್ಲ. ಆದರೂ ಅವರೊಬ್ಬ ಆಕಾಂಕ್ಷಿ. ದಾಳ ಹೈಕಮಾಂಡ್ ಕೈಯ್ಯಲ್ಲಿದೆ.

ಸಮೀಕ್ಷೆಗಳ ಪ್ರಕಾರ ಬಿಜೆಪಿಯೂ ಮತ್ತೆ ಅಧಿಕಾರ ಹಿಡಿಯುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಹಾಗಾದರೆ ಈಗಿನ ಸಿಎಂ ಮುಂದುವರಿಯುವರೇ ಇಲ್ಲವೇ ಹೊಸ ಮುಖಕ್ಕೆ ಮಣೆ ಹಾಕುವರೇ ನೋಡಬೇಕು. ಹೊಸ ಪ್ರಯೋಗಗಳಿಗೆ ಹೆಸರಾದ ಬಿಜೆಪಿ ವರಿಷ್ಠರ ಇಚ್ಛೆ ಬಲ್ಲವರ್ಯಾರು.

ಸೋಮಣ್ಣ ಅವರಿಗೆ ವಿಧಾನಸಭೆಯ 2 ಕ್ಷೇತ್ರಗಳಲ್ಲಿ ಸ್ಪರ್ಧೆಗೆ ಅವಕಾಶ ನೀಡಿ, ತಮ್ಮ ಸ್ವಕ್ಷೇತ್ರ ಬೆಂಗಳೂರಿನ ಗೋವಿಂದರಾಜನಗರದಿಂದ ದೂರ ಕಳುಹಿಸಿದ ಹೈಕಮಾಂಡ್ ಮರ್ಮ ತಿಳಿಯದಾಗಿದೆ. ಅಂದರೆ ವಿ.ಸೋಮಣ್ಣನವರ ಭವಿಷ್ಯ ಹೈಕಮಾಂಡ್ ಅರಿವಿಗಿದೆ. ಅದಕ್ಕೆ ಈ ಅಗ್ನಿ ಪರೀಕ್ಷೆ. ಆದರೆ ಸೋಮಣ್ಣನವರಿಗೆ ನೀಡಿದಂತೆ ಆರ್. ಅಶೋಕ್‌ಗೂ ಎರಡು ಕ್ಷೇತ್ರಗಳಲ್ಲಿ ಸ್ಪರ್ಧೆಗೆ ಅವಕಾಶ ನೀಡಿದರೂ ಅವರೂ ಅಷ್ಟಾಗಿ ಗಂಭೀರವಾಗಿ ಪರಿಗಣಿಸಿದಂತಿಲ್ಲ. ಅಲ್ಲದೇ ಸ್ವಕ್ಷೇತ್ರದಲ್ಲೂ ಅವರು ಸ್ಪರ್ಧಿಸಿದ್ದಾರೆ.

ಇವರಲ್ಲದೆ, ಸಿ.ಟಿ. ರವಿ, ವಿದ್ಯುತ್ ಸಚಿವ ಸುನೀಲ್ ಕುಮಾರ್, ಶೋಭಾ ಕರಂದ್ಲಾಜೆ ಹೆಸರುಗಳೂ ಚಾಲ್ತಿಯಲ್ಲಿವೆ. ಹೈಕಮಾಂಡ್ ಆಯ್ಕೆ ಯಾವಾಗಲೂ ಸರ್‌ಪ್ರೈಸ್ ಆಗಿರುತ್ತದೆ.

ಈಗ ಹೊರ ಬಂದಿರುವ ಸಮೀಕ್ಷೆಗಳು ಜೆಡಿಎಸ್; ಕಾಂಗ್ರೆಸ್, ಬಿಜೆಪಿಗೆ ಸವಾಲಾಗಿದೆ. 100 ಸ್ಥಾನಗಳಿಗಿಂತ ಕಡಿಮೆ ಸ್ಥಾನಗಳನ್ನು ಈ 2 ರಾಷ್ಟ್ರೀಯ ಪಕ್ಷಗಳು ಪಡೆದರೆ ಜೆಡಿಎಸ್ ಪಾಲಿಗೆ ಸ್ವರ್ಗವೇ ಧರೆಗಿಳಿದಂತೆ. ಆಗ ಬಿಜೆಪಿ ಆಯ್ಕೆ ಜೆಡಿಎಸ್. ಆದರೆ, ಕಾಂಗ್ರೆಸ್‌ನ ಡಿಕೆಶಿ ಕೂಡ ಸುಮ್ಮನೆ ಕೈಕಟ್ಟಿ ಕೂರುವ ಆಸಾಮಿ ಅಲ್ಲ. ಜೆಡಿಎಸ್‌ನ ಭವಿಷ್ಯ ಅತಂತ್ರ ಫಲಿತಾಂಶದ ಮೇಲೆ. ದೇವೇಗೌಡರ ಬಹು ದೊಡ್ಡ ಆಸೆ ಮತ್ತೊಮ್ಮೆ ತಮ್ಮ ಮಗ ಕುಮಾರಸ್ವಾಮಿ ಸಿಎಂ ಆಗುವುದು. ಯಾವ ಭವಿಷ್ಯವಾಣಿಗೆ ಮತದಾರ ಮಣೆ ಹಾಕಿದ್ದಾನೋ ಕಾದು ನೋಡಬೇಕು.

ಕರ್ನಾಟಕ ವಿಧಾನಸಭೆ ಚುನಾವಣೆಗೆ ಹೈದರಾಬಾದ್‌ನ ಇಸಿಎಲ್‌ನ ಇವಿಎಂಗಳ ಬಳಕೆ

ಕಾಂಗ್ರೆಸ್ ಆರೋಪಕ್ಕೆ ಚುನಾವಣಾ ಆಯೋಗ ಸ್ಪಷ್ಟನೆ

ನವದೆಹಲಿ: ದಕ್ಷಿಣ ಆಫ್ರಿಕಾದಲ್ಲಿ ಉಪಯೋಗಿಸಲಾಗಿದ್ದ ವಿದ್ಯುನ್ಮಾನ ಮತಯಂತ್ರ(ಇವಿಎಂ)ಗಳನ್ನು ಕರ್ನಾಟಕ ವಿಧಾನಸಭೆಗೆ ಬಳಸಲಾಗುತ್ತಿದೆ ಎಂಬ ಕಾಂಗ್ರೆಸ್ ಪಕ್ಷದ ಆರೋಪವನ್ನು ಚುನಾವಣಾ ಆಯೋಗ ಗುರುವಾರ ತಳ್ಳಿಹಾಕಿದೆ.

ಈ ಸಂಬಂಧ ಕಾಂಗ್ರೆಸ್ ಮುಖಂಡ ರಣದೀಪ್ ಸಿಂಗ್ ಸುರ್ಜೇವಾಲ ಅವರಿಗೆ ಪತ್ರ ಬರೆದಿರುವ ಆಯೋಗ, ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್(ಇಸಿಐಎಲ್) ತಯಾರಿಸಿರುವ ಹೊಸ ಇವಿಎಂಗಳನ್ನು ಕರ್ನಾಟಕದಲ್ಲಿ ನಡೆದ ಚುನಾವಣೆಯಲ್ಲಿ ಬಳಕೆ ಮಾಡಲಾಗಿದೆ. ಮತಯಂತ್ರಗಳನ್ನು ದಕ್ಷಿಣ ಆಫ್ರಿಕಾಕ್ಕೆ ಕಳುಹಿಸಿರಲಿಲ್ಲ. ಆ ರಾಷ್ಟ್ರವು ಚುನಾವಣೆಯಲ್ಲಿ ಮತಯಂತ್ರಗಳನ್ನು ಬಳಕೆ ಮಾಡುವುದೂ ಇಲ್ಲ ಎಂದು ಸ್ಪಷ್ಟಪಡಿಸಿದೆ.

ಇಸಿಐಎಲ್ ತಯಾರಿಸಿರುವ ಹೊಸ ಮತಯಂತ್ರಗಳನ್ನು ಮಾತ್ರ ಕರ್ನಾಟಕದಲ್ಲಿ ಬಳಕೆ ಮಾಡಲಾಗುತ್ತದೆ ಎಂಬ ಬಗ್ಗೆ ಕಾಂಗ್ರೆಸ್ ಪಕ್ಷಕ್ಕೆ ಮಾಹಿತಿ ಇತ್ತು. ಇವಿಎಂಗಳ ಸಾಗಣೆ ಹಾಗೂ ಅವುಗಳ ಬಳಕೆಯ ಪ್ರತಿ ಹಂತದಲ್ಲಿಯೂ ಕಾಂಗ್ರೆಸ್ ಪ್ರತಿನಿಧಿಗಳು ಇದ್ದರು. ಆದಾಗ್ಯೂ ಇವಿಎಂಗಳ ಕುರಿತಾಗಿ ತಪ್ಪು ಮಾಹಿತಿ ಹಬ್ಬಿಸುತ್ತಿರುವ ಮೂಲಗಳನ್ನು ಕಾಂಗ್ರೆಸ್ ಬಹಿರಂಗಪಡಿಸಬೇಕು. ಈ ಕುರಿತು ಕ್ರಮ ಕೈಗೊಳ್ಳಲಾಗಿದೆಯೇ ಎಂಬುದನ್ನು ಮೇ 15ರ ಸಂಜೆ 5 ಗಂಟೆ ಒಳಗೆ ದೃಢಪಡಿಸಬೇಕು ಎಂದೂ ಆಯೋಗ ಸೂಚಿಸಿದೆ.

ದಕ್ಷಿಣ ಆಫ್ರಿಕಾದಲ್ಲಿ ಬಳಸಲಾಗಿದ್ದ ಮತಯಂತ್ರಗಳನ್ನೇ ಕರ್ನಾಟಕ ಚುನಾವಣೆಯಲ್ಲಿ ಮರು ಬಳಕೆ ಮಾಡಲಾಗುತ್ತಿದೆ ಎಂದು ಕಾಂಗ್ರೆಸ್ ಆತಂಕ ವ್ಯಕ್ತಪಡಿಸಿ ಈ ಸಂಬಂಧ ಮೇ 8ರಂದು ಆಯೋಗಕ್ಕೆ ಪತ್ರ ಬರೆದು ಕೆಲ ಸ್ಪಷ್ಟೀಕರಣಗಳನ್ನು ಕೇಳಿತ್ತು.

ಫಲಿತಾಂಶದ ಬಗ್ಗೆ ಭವಿಷ್ಯ...

ಎರಡೂವರೆ ವರ್ಷದಿಂದ ಹೇಳುತ್ತಿದ್ದೇನೆ ನಮ್ಮ ಲೆಕ್ಕ 141
–ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್

ಕನಿಷ್ಠ 130ರಿಂದ 150 ಸ್ಥಾನ ಗೆಲ್ತೇವೆ
–ವಿಪಕ್ಷ ನಾಯಕ ಸಿದ್ದರಾಮಯ್ಯ

ಕಾಂಗ್ರೆಸ್ ಈ ಬಾರಿ 130 ಸ್ಥಾನ ಗೆಲ್ಲಲಿದೆ
–ಮಾಜಿ ಡಿಸಿಎಂ ಡಾ.ಜಿ.ಪರಮೇಶ್ವರ್

ಬಿಜೆಪಿ 115 ಸೀಟುಗಳನ್ನು ಗೆದ್ದು ಅಧಿಕಾರಕ್ಕೆ ಬರಲಿದೆ
–ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ

ಸಮೀಕ್ಷಾ ವರದಿಗಳು ಪೂರ್ಣ ನಿಜವಾಗಲ್ಲ
–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಈಗ ವರದಿಯಾಗಿರುವ ಸಮೀಕ್ಷೆಗಳ ಭವಿಷ್ಯ ಸುಳ್ಳಾಗುತ್ತೆ
ನಮ್ಮ ಕಾರ್ಯಕರ್ತರೊಬ್ಬರು ಮುಂದಿನ ಮುಖ್ಯಮಂತ್ರಿ ಆಗ್ತಾರೆ
–ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ

ಬಿಜೆಪಿ ಗೆಲುವು ಶತಃಸಿದ್ಧ; ನಮಗೆ ಬಹುಮತ ಸಿಕ್ಕೇ ಸಿಗುತ್ತೆ
–ಕಂದಾಯ ಸಚಿವ ಆರ್.ಅಶೋಕ್

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಜೋರಾಯ್ತು ಬೆಟ್ಟಿಂಗ್: ಸಟ್ಟಾ ಬಜಾರ್‌ನಲ್ಲಿ 'ಕೈ' ಪರ ಕೈ ಎತ್ತಿದ ಬುಕ್ಕಿಗಳು



ಬೆಂಗಳೂರು, ಮೇ 11–ರಾಜ್ಯ ವಿಧಾನ ಸಭೆ ಚುನಾವಣೆ ಮತದಾನ ಮುಕ್ತಾಯ ಗೊಂಡಿದೆ. ಶನಿವಾರ ಫಲಿತಾಂಶ ಪ್ರಕಟವಾಗಲಿದೆ. ಮತದಾನೋತ್ತರ ಸಮೀಕ್ಷೆಗಳು ಹೊರಬಿದ್ದಿವೆ. ಯಾವ ಪಕ್ಷಕ್ಕೆ ಎಷ್ಟು ಸ್ಥಾನ ದೊರೆಯಲಿದೆ ಎಂಬುದರ ಚಿತ್ರಣವನ್ನು ಕೆಲವು ಚಾನೆಲ್‌ಗಳು, ಸಂಸ್ಥೆಗಳು ನೀಡಿವೆ. ಇದರ ಬೆನ್ನಲ್ಲೇ ಬೆಟ್ಟಿಂಗ್ ಕೂಡ ಜೋರಾಗಿ ನಡೆಯುತ್ತಿದೆ ಎನ್ನಲಾಗಿದೆ.

ಬೆಟ್ಟಿಂಗ್ ಮಾರುಕಟ್ಟೆ ಹಾಗೂ ಸಟ್ಟಾ ಬಜಾರ್‌ನಲ್ಲಿ ಕಾಂಗ್ರೆಸ್ ಅತೀ ದೊಡ್ಡ ಪಕ್ಷವಾಗಿ ಅಥವಾ ಸರಳ ಬಹುಮತ ಗಳಿಸುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ. ಬಿಜೆಪಿ 70ಕ್ಕಿಂತ ಹೆಚ್ಚು ಹಾಗೂ ಜೆಡಿಎಸ್ 30ಕ್ಕಿಂತ ಕಡಿಮೆ ಸ್ಥಾನ ಪಡೆಯುತ್ತವೆ ಎಂಬುದು ಬುಕ್ಕಿಗಳ ಅಭಿಪ್ರಾಯ. ಮತದಾನಕ್ಕೂ ಮುನ್ನ ಹಲವರು ಬೆಟ್ಟಿಂಗ್‌ನಲ್ಲಿ ತೊಡಗಿಸಿಕೊಂಡಿದ್ದಾರೆ. ಹೆಚ್ಚಿನ ಬುಕ್ಕಿಗಳು ಕಾಂಗ್ರೆಸ್ ಪರವಾಗಿ ಬಾಜಿ ಕಟ್ಟುತ್ತಿದ್ದಾರೆನ್ನಲಾಗಿದೆ.

ಬೆಟ್ಟಿಂಗ್ ಹೇಗೆ ನಡೆಯುತ್ತಿದೆ?: ಕಾಂಗ್ರೆಸ್ 112– 130 ಸ್ಥಾನಗಳನ್ನು ಪಡೆಯುತ್ತದೆ ಎಂದು ಒಬ್ಬ ವ್ಯಕ್ತಿ ಬೆಟ್ಟಿಂಗ್ ಕಟ್ಟಿದ್ದರೆ ಮತ್ತು ಫಲಿತಾಂಶದಲ್ಲಿ ಅಷ್ಟು ಸ್ಥಾನ ಬಂದರೆ, ಬೆಟ್ಟಿಂಗ್ ಆಪರೇಟರ್ ದುಪ್ಪಟ್ಟು ಹಣವನ್ನು ಕೊಡಬೇಕಾಗುತ್ತದೆ. ಬಿಜೆಪಿ 100 ಸ್ಥಾನಗಳನ್ನು ಪಡೆಯುತ್ತದೆ ಎಂದು ಯಾರಾದರು ಬೆಟ್ ಮಾಡಿದ್ದರೆ ಆಪರೇಟರ್‌ಗಳು ಒಂದಕ್ಕೆ 3ರ ಆಫರ್ ನೀಡುತ್ತಿದ್ದಾರೆ ಎಂದು ಹೇಳಲಾಗುತ್ತಿದೆ.

ಅಂದರೆ ನೀವು ರೂ 1000 ಬಾಜಿ ಕಟ್ಟಿದರೆ 4000 ಮರಳಿ ಪಡೆಯುತ್ತೀರಿ. ಬಿಜೆಪಿ 70–85 ಸ್ಥಾನಗಳನ್ನು ಮಾತ್ರ ಪಡೆಯುವ ಸಾಧ್ಯತೆಯಿದೆ. ನೀವು ಬಿಜೆಪಿ 80/100 ಸ್ಥಾನ ಪಡೆಯುತ್ತದೆ ಎಂದು 1000 ರೂ. ಬೆಟ್ ಮಾಡಿದರೆ, ಆಡ್ ಆಧಾರದಲ್ಲಿ ನಿಮಗೆ 1800 ರೂ. ಸಿಗುತ್ತದೆಯಂತೆ.

ಕಾಂಗ್ರೆಸ್ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮುತ್ತದೆ ಎಂದು ಯಾರಾದರೂ ಹೇಳಿದರೆ, 90/100ರ ಆಡ್ ಪ್ರಕಾರ ನಿಮ್ಮ 1000 ರೂಗೆ 1900 ರೂ. ಹಣ ಹಿಂತಿರುಗಿ ಕೊಡಲಾಗುತ್ತದೆಯಂತೆ. ಬಿಜೆಪಿ ಏಕೈಕ ದೊಡ್ಡ ಪಕ್ಷವಾಗಿ ಹೊರ ಹೊಮ್ಮುತ್ತದೆ ಎಂದು 1000 ರೂಪಾಯಿ ಬೆಟ್ ಮಾಡಿದರೆ 3500–4000 ರೂ. ಹಣ ಕೊಡಲಾಗುತ್ತದೆ ಎಂದು ಹೇಳಲಾಗಿದೆ.

ಪ್ರಾದೇಶಿಕ ಪಕ್ಷ ಜೆಡಿಎಸ್‌ಗೆ 25–30 ಸೀಟು ಬರುತ್ತೆ ಎಂದು ಯಾರಾದರೂ ಬೆಟ್ಟಿಂಗ್ ಕಟ್ಟಿದರೆ, 1000 ರೂ ಕೊಟ್ಟರೆ 2500 ಸಿಗುತ್ತೆ. ಈಗ ಸದ್ಯದ ಮಟ್ಟಿಗೆ, ಜೆಡಿಎಸ್ 31 ಕ್ಕಿಂತ ಹೆಚ್ಚು ಸ್ಥಾನಗಳನ್ನು ಪಡೆಯುವ ಮೇಲೆ ಬೆಟ್ಟಿಂಗ್ ಮಾಡುವವರು 1000 ಕ್ಕೆ 3500 ರೂ. ಹಣ ಪಡೆಯಲಿದ್ದಾರಂತೆ.

ಪ್ರಮುಖ ಬೆಟ್ಟಿಂಗ್ ಮಾರುಕಟ್ಟೆಗಳು: ಕೆಲವು ದಿನಗಳ ಹಿಂದಿನವರೆಗೂ ಚುನಾವಣಾ ಬೆಟ್ಟಿಂಗ್ ಕಮ್ಮಿಯಾಗಿತ್ತು ಆದರೆ ನಿರ್ಬಂಧಗಳನ್ನು ತೆಗೆದುಹಾಕಿದ ನಂತರ ಬೆಟ್ಟಿಂಗ್ ಹೆಚ್ಚಾಗಿದೆ. ಮೇ 13 ರಂದು ಫಲಿತಾಂಶ ಪ್ರಕಟವಾಗುವವರೆಗೂ ಹೆಚ್ಚಿನ ಸಂಖ್ಯೆಯಲ್ಲಿ ಬೆಟ್ಟಿಂಗ್ ದಂಧೆ ಮುಂದುವರಿಯಲಿದೆ ಎನ್ನಲಾಗಿದೆ. ಮೇ 13ರವರೆಗೆ ಚುನಾವಣಾ ಬೆಟ್ಟಿಂಗ್ ಹವಾ ಜೋರಾಗಿ ಸಾಗುತ್ತದೆ ಎಂದು ಹೇಳಲಾಗುತ್ತಿದ್ದು, ಗ್ರಾಮೀಣ ಭಾಗಗಳಲ್ಲೂ ವಿವಿಧ ರೀತಿಯ ಬೆಟ್ಟಿಂಗ್‌ಗಳು ನಡೆಯುತ್ತಿದೆಯಂತೆ. ಕೆಲವರು ಜಾನುವಾರುಗಳನ್ನೇ ಪಣ ಕಟ್ಟಿದ್ದರೆ, ಮತ್ತೆ ಕೆಲವರು ಜಮೀನು ಅಡ ಇಟ್ಟಿದ್ದಾರಂತೆ. ಇನ್ನೂ ಕೆಲವರು ದುಡ್ಡಿನ ರೂಪದಲ್ಲಿ ಲಕ್ಷ ಲಕ್ಷ ಬೆಟ್ಟಿಂಗ್‌ನಲ್ಲಿ ಹೂಡಿದ್ದಾರಂತೆ. ಯಾರು ಸೂಪರ್ ಡೂಪರ್ ಆಗುತ್ತಾರೆ, ಯಾರು ಪಾಪರ್ ಆಗುತ್ತಾರೆ ಎಂಬುದಕ್ಕೆ ಇದೇ ಶನಿವಾರ ಮೇ 13ರಂದು ಉತ್ತರ ದೊರೆಯಲಿದೆ ಎಂದು ರಾಜಕೀಯ ಲೆಕ್ಕಾಚಾರಗಳು ಹೇಳುತ್ತವೆ.

ಮೈಸೂರು ಜಿಲ್ಲೆಯಲ್ಲಿ ಶೇ.75.12ರಷ್ಟು ಮತದಾನ

ಶೇ.75.91 ಪುರುಷರು, ಶೇ.74.34 ಮಹಿಳೆಯರು, ತೃತೀಯ ಲಿಂಗಿಗಳಿಂದ ಶೇ.21.68ರಷ್ಟು ಮತದಾನ



ಮೈಸೂರು, ಮೇ 11(ಎಂಟಿವೈ)– ಮೈಸೂರು ಜಿಲ್ಲೆಯಲ್ಲಿ ಮತದಾನದ ಪೂರ್ಣ ಪ್ರಮಾಣದ ಪರಿಷ್ಕೃತ ಅಂಕಿ ಅಂಶ ಪ್ರಕಟಿಸಲಾಗಿದ್ದು, ಜಿಲ್ಲೆಯಲ್ಲಿ ಒಟ್ಟು ಶೇ.75.12 ರಷ್ಟು ಮತದಾನವಾಗಿದೆ. ಅದರಲ್ಲಿ ಶೇ.75.91 ಪುರುಷ ಮತದಾರರು, ಶೇ.74.34 ಮಹಿಳಾ ಮತದಾರರು ಹಾಗೂ ಶೇ.21.68ರಷ್ಟು ತೃತೀಯಲಿಂಗಿಗಳು ಮತದಾನ ಮಾಡಿರುವುದು ಗಮನಾರ್ಹವಾಗಿದೆ.

ಮೈಸೂರು ಜಿಲ್ಲೆಯಲ್ಲಿ ಬುಧವಾರ (ಮೇ 10) ಶಾಂತಿಯುತವಾಗಿ ಮತದಾನ ನೆರವೇರಿತ್ತು. ಜಿಲ್ಲಾ ಚುನಾವಣಾಧಿಕಾರಿಗಳು ಮತದಾನದ ಪ್ರಮಾಣ ಶೇ.75.04 ಎಂದು ಉಲ್ಲೇಖಿಸಿ ಮಾಹಿತಿ ನೀಡಿದ್ದರು. ಆದರೆ, ಕ್ಷೇತ್ರವಾರು ಮತದಾನ ಆಗಿರುವ ಮಾಹಿತಿಯನ್ನು ಅವಲೋಕಿಸಿದಾಗ ಮೈಸೂರು ಜಿಲ್ಲೆಯ ಮತದಾನದ ಪ್ರಮಾಣ ಶೇ.75.12ರಷ್ಟಾಗಿರುವುದು ಖಚಿತಪಡಿಸಿದ್ದಾರೆ.

ಈ ಬಾರಿ 11 ಕ್ಷೇತ್ರಗಳಿಂದ ಜಿಲ್ಲೆಯಲ್ಲಿ 13,17,121 ಪುರುಷರು, 13,38,637 ಮಹಿಳೆಯರು ಹಾಗೂ 226 ಮಂದಿ ತೃತೀಯಲಿಂಗಿಗಳು ಸೇರಿದಂತೆ ಒಟ್ಟು 26,55,984 ಮತದಾರರು ಮತ ಚಲಾಯಿಸುವ ಹಕ್ಕು ಹೊಂದಿದ್ದರು. ಅದರಲ್ಲಿ 9,99,864 ಪುರುಷರು, 9,95,188 ಮಹಿಳೆಯರು ಹಾಗೂ 49 ತೃತೀಯ ಲಿಂಗಿಗಳು ಒಳಗೊಂಡಂತೆ 19,95,101 ಮಂದಿ ಮತದಾನ ಮಾಡುವ ಮೂಲಕ ತಮ್ಮ ಹಕ್ಕನ್ನು ಚಲಾಯಿಸಿದ್ದಾರೆ.

ಕ್ಷೇತ್ರವಾರು ಅಂಕಿ ಅಂಶ: ಪಿರಿಯಾಪಟ್ಟಣ ಕ್ಷೇತ್ರದಲ್ಲಿ 1,95,458 ಮತದಾರರಲ್ಲಿ ಶೇ.84.50ರಷ್ಟರಂತೆ 1,65,156 ಮಂದಿ ಮತ ಚಲಾಯಿಸಿದ್ದಾರೆ. ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದಲ್ಲಿ 2,17,786 ಮತದಾರರಲ್ಲಿ 1,85,529 ಮಂದಿ ಹಕ್ಕು ಚಲಾಯಿಸಿದ್ದು, ಕ್ಷೇತ್ರದ ಮತದಾನದ ಪ್ರಮಾಣ ಶೇ.85.19ರಷ್ಟಿದೆ.

ಹುಣಸೂರು ಕ್ಷೇತ್ರದಲ್ಲಿ ಒಟ್ಟು 2,42,753 ಮತದಾರರಿದ್ದು, ಅವರಲ್ಲಿ 1,99,945 ಮಂದಿ ಮತ ಚಲಾಯಿಸಿದ್ದಾರೆ. ಕ್ಷೇತ್ರದ ಮತದಾನ ಪ್ರಮಾಣ ಶೇ.82.37ರಷ್ಟು ದಾಖಲಾಗಿದೆ. ಹೆಚ್.ಡಿ.ಕೋಟೆ ಕ್ಷೇತ್ರದಲ್ಲಿ 2,25,787 ಮತದಾರರಿದ್ದು, ಅವರಲ್ಲಿ ಶೇ.80.37ರಂತೆ 1,81,475 ಮಂದಿ ಮತ ಚಲಾಯಿಸಿದ್ದಾರೆ.

ನಂಜನಗೂಡು ಕ್ಷೇತ್ರದಲ್ಲಿ ಒಟ್ಟು ಮತದಾರರ ಸಂಖ್ಯೆ 2,20,393 ಇದ್ದು, ಅದರಲ್ಲಿ 1,74,838 ಮಂದಿ ಓಟ್ ಮಾಡಿದ್ದಾರೆ. ಕ್ಷೇತ್ರದ ಮತದಾನ ಪ್ರಮಾಣ ಶೇ.79.33ರಷ್ಟಿದೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿರುವ 3,29,141 ಮತದಾರರಲ್ಲಿ 2,44,938 ಮತ ಹಾಕಿ ದ್ದಾರೆ. ಈ ಕ್ಷೇತ್ರದಲ್ಲಿ ಶೇ.74.42 ರಷ್ಟು ಮತ ದಾನವಾಗಿದೆ.

ಕೆ.ಆರ್.ಕ್ಷೇತ್ರ	–59.55
ಚಾಮರಾಜ	–61.05
ನರಸಿಂಹರಾಜ	–63.61
ಚಾಮುಂಡೇಶ್ವರಿ	–74.42
ವರುಣ	–84.74
ಪಿರಿಯಾಪಟ್ಟಣ	–84.50
ಕೆ.ಆರ್.ನಗರ	–85.19
ಹುಣಸೂರು	–82.37
ನಂಜನಗೂಡು	–79.33
ತಿ.ನರಸೀಪುರ	–78.80
ಕೆ.ಆರ್.ನಗರ	–85.19

ಮೈಸೂರಿನ ಕೆಆರ್. ಕ್ಷೇತ್ರದಲ್ಲಿರುವ ಒಟ್ಟು 2,50,357 ಮತದಾರರಲ್ಲಿ, ಶೇ.59.55ರಷ್ಟು 1,49,098 ಮಂದಿ ಮತದಾನ ಮಾಡಿದ್ದಾರೆ. ಚಾಮರಾಜ ವಿಧಾನಸಭಾ ಕ್ಷೇತ್ರದ 2,46,243 ಮಂದಿ ಪೈಕಿ ಒಟ್ಟು 1,50,322 ಮಂದಿ ಓಟ್ ಹಾಕಿದ್ದಾರೆ. ಕ್ಷೇತ್ರದ ಮತದಾನದ ಪ್ರಮಾಣ ಶೇ.61.05ರಷ್ಟಿದೆ.

ನರಸಿಂಹರಾಜ ಕ್ಷೇತ್ರದಲ್ಲಿ 2,88,710 ಮತದಾರರಲ್ಲಿ 1,83,659 ಮಂದಿ ಮತ ಚಲಾಯಿಸಿದ್ದಾರೆ. ಕ್ಷೇತ್ರದ ಮತದಾನದ ಪ್ರಮಾಣ ಶೇ.63.61ರಷ್ಟಿದೆ. ಹೈವೋಲ್ಟೇಜ್ ಕ್ಷೇತ್ರ ಎನಿಸಿದ ರಾಷ್ಟ್ರದ ಗಮನ ಸೆಳೆದಿರುವ ವರುಣ ಕ್ಷೇತ್ರದಲ್ಲಿ 2,34,533 ಮಂದಿ ಮತದಾರರು ಹಕ್ಕು ಚಲಾಯಿಸುವ ಅಧಿಕಾರ ಹೊಂದಿದ್ದರು. ಆದರೆ 1,98,740 ಮಂದಿ ಮಾತ್ರ ವೋಟ್ ಮಾಡಿದ್ದು, ಕ್ಷೇತ್ರದ ಮತದಾನದ ಪ್ರಮಾಣ ಶೇ.84.74ರಷ್ಟು ದಾಖಲಾಗಿದೆ. ತಿ.ನರಸೀಪುರ ಕ್ಷೇತ್ರದಲ್ಲಿ ಒಟ್ಟು ಮತದಾರರ ಸಂಖ್ಯೆ 2,04,824 ಇದ್ದು, ಅವರಲ್ಲಿ 1,61,401 ಮಂದಿ ಮತದಾನ ಮಾಡಿದ್ದಾರೆ. ಈ ಕ್ಷೇತ್ರದಲ್ಲಿ ಶೇ.78.80ರಷ್ಟು ಮತದಾನವಾಗಿದೆ.

ಜಿಲ್ಲೆಯ 11 ಕ್ಷೇತ್ರಗಳಲ್ಲಿ ಕೆ.ಆರ್.ನಗರ ಕ್ಷೇತ್ರದಲ್ಲಿ ಶೇ.85.19ರಷ್ಟು ಮತದಾನವಾಗಿ ಹೆಚ್ಚು ವೋಟ್ ಮಾಡಿದ ಮುಂಚೂಣಿ ಕ್ಷೇತ್ರ ಎನಿಸಿದರೆ, ಕೆ.ಆರ್.ಕ್ಷೇತ್ರದಲ್ಲಿ ಕೇವಲ ಶೇ.59.55ರಷ್ಟು ಮತದಾನ ನಡೆದು ಕೊನೆ ಸ್ಥಾನದಲ್ಲಿದೆ.

ಸಿಂಗಾಪುರಕ್ಕೆ ತೆರಳಿರುವ ಹೆಚ್.ಡಿ.ಕುಮಾರಸ್ವಾಮಿ



ಸಿಂಗಾಪುರ, ಮೇ 11– ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಗುರುವಾರ ಆರೋಗ್ಯ ತಪಾಸಣೆಗಾಗಿ ಸಿಂಗಾಪುರಕ್ಕೆ ತೆರಳಿದ್ದಾರೆ. ಜೆಡಿಎಸ್ ಪಕ್ಷದ ಮೂಲಗಳ ಪ್ರಕಾರ ಕುಮಾರಸ್ವಾಮಿ ಅವರು ತಮ್ಮ ಆಪ್ತ ಸಹಾಯಕ ಮತ್ತು ಇತರ ಕೆಲವರೊಂದಿಗೆ ದ್ವೀಪ–ರಾಷ್ಟ್ರಕ್ಕೆ ತೆರಳಿದ್ದು, ಶನಿವಾರ ಬೆಳಗ್ಗೆ ಹಿಂತಿರುಗಲಿದ್ದಾರೆ. ಶನಿವಾರ ಮತ ಎಣಿಕೆ ನಡೆಯಲಿದೆ. ಚುನಾವಣೆ ಪ್ರಚಾರದ ಸಮಯದಲ್ಲಿ ಬಳಲಿಕೆ ಮತ್ತು ತೀವ್ರ ಆಯಾಸದ ನಂತರ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿದ್ದರು. ಈ ಬಾರಿ ಎಕ್ಸಿಟ್ ಪೋಲ್‌ಗಳು ರಾಜ್ಯದಲ್ಲಿ ಅತಂತ್ರ ವಿಧಾನಸಭೆ ಸಾಧ್ಯತೆಯ ಭವಿಷ್ಯ ನುಡಿದಿದ್ದು, ಜೆಡಿಎಸ್ ಎಷ್ಟು ಸ್ಥಾನಗಳನ್ನು ಗೆಲ್ಲಲಿದೆ. ಕುಮಾರಸ್ವಾಮಿ ಅವರು ಕಿಂಗ್ ಮೇಕರ್ ಆಗಲಿದ್ದಾರೆಯೇ ಎನ್ನುವ ಕುತೂಹಲ ಮನೆ ಮಾಡಿದೆ.

ಇ–ಟಿಕೆಟ್ ಕಾಯ್ದಿರಿಸಲು ಅಕ್ರಮವಾಗಿ ಬಳಸುತ್ತಿದ್ದ ಸಾಫ್ಟ್‌ವೇರ್ ರೈಲ್ವೆ ವಶಕ್ಕೆ



ನವದೆಹಲಿ, ಮೇ 11– ಭಾರತೀಯ ರೈಲ್ವೆ ಆಸನಗಳನ್ನು ಕಾಯ್ದಿರಿಸುವ ವಿಷಯದಲ್ಲಿ ಹೆಚ್ಚಿನ ಬೇಡಿಕೆಯನ್ನು ಹೊಂದಿದ್ದರೆ, ಇದನ್ನೇ ಬಂಡವಾಳವಾಗಿಸಿಕೊಂಡ ಕೆಲವರು ಅಕ್ರಮ ಸಾಫ್ಟ್‌ವೇರ್‌ಗಳನ್ನು ಬಳಸಿಕೊಂಡು ರೈಲ್ವೆ ಟಿಕೆಟ್ ಕಾಯ್ದಿರಿಸುವ ದಂಧೆಯಲ್ಲಿ ತೊಡಗಿದ್ದರು. ಈ ಸಾಫ್ಟ್‌ವೇರ್‌ಗಳನ್ನು ರೈಲ್ವೆ ಇಲಾಖೆ ವಶಕ್ಕೆ ಪಡೆದಿದೆ.

ಕೋವಿಡ್–ಫಿ, ಕೋವಿಡ್–19, ಆನ್ಮ್ ಬ್ಯಾಕ್, ಬ್ಲ್ಯಾಕ್ ಟೈಗರ್, ರೆಡ್–ಮಿರ್ಚಿ ಮತ್ತು ರಿಯಲ್–ಮ್ಯಾಂಗೋ ಮುಂತಾದ ಸಾಫ್ಟ್‌ವೇರ್‌ಗಳನ್ನು ಕ್ಷಿಪ್ರಗತಿಯಲ್ಲಿ ಟಿಕೆಟ್ ಕಾಯ್ದಿರಿಸುವುದಕ್ಕಾಗಿ ಬಳಕೆ ಮಾಡಲಾಗುತ್ತಿತ್ತು.

ಈ ಸಾಫ್ಟ್‌ವೇರ್‌ಗಳು ರೂ. 50000 ರಿಂದ ಎರಡು ಲಕ್ಷದವರೆಗೂ ಲಭ್ಯವಿದ್ದು, ಲ್ಯಾಪ್‌ಟಾಪ್‌ಗಳಲ್ಲಿ ಇದನ್ನು ಇನ್ಸ್ಟಾಲ್ ಮಾಡಿ, ದೀರ್ಘಾವಧಿಯ ಪ್ರಯಾಣಕ್ಕೆ ದೃಢೀಕೃತ ರೈಲ್ವೆ ಟಿಕೆಟ್‌ಗಳನ್ನು ತತ್ಕಾಲ್ ಕೋಟಾದ ಅಡಿ ಕಾಯ್ದಿರಿಸಲು ಬಳಕೆ ಮಾಡುತ್ತಿದ್ದರು. ಈ ರೀತಿಯ ಜಾಲದ ವಿರುದ್ಧ ಕಾರ್ಯಾಚರಣೆ ನಡೆಸಿರುವ ರೈಲ್ವೆ ರಕ್ಷಣಾ ಪಡೆ (ಆರ್‌ಪಿಎಫ್) ದೇಶಾದ್ಯಂತ ಹಲವೆಡೆ ಪೈರೆಟೆಡ್ ಸಾಫ್ಟ್‌ವೇರ್ ಅನ್ನು ವಶಕ್ಕೆ ಪಡೆದಿದೆ.

ರೈಲ್ವೆ ಅಧಿಕಾರಿಗಳು ಮಾಧ್ಯಮಗಳಿಗೆ ನೀಡಿರುವ ಮಾಹಿತಿಯ ಪ್ರಕಾರ, 30 ದಿನಗಳ ವಿಶೇಷ ಕಾರ್ಯಾಚರಣೆಯಲ್ಲಿ 42 ಅಕ್ರಮ ಸಾಫ್ಟ್‌ವೇರ್‌ಗಳನ್ನು ವಶಕ್ಕೆ ಪಡೆಯಲಾಗಿದ್ದು, ಇದರಲ್ಲಿ ವ್ಯವಹರಿಸುತ್ತಿದ್ದ 955 ಮಂದಿಯನ್ನು ಬಂಧಿಸಿದ್ದಾರೆ. ರೈಲುಗಳಿಗೆ ಕಲ್ಲು ತೂರಾಟ ಮಾಡುತ್ತಿದ್ದ ಹಾಗೂ ಇ–ಟಿಕೆಟ್‌ಗಳನ್ನು ಅಕ್ರಮವಾಗಿ ಕಾಯ್ದಿರಿಸುತ್ತಿದ್ದ ಜಾಲದ ವಿರುದ್ಧ ಆರ್‌ಪಿಎಫ್ ಕಾರ್ಯಾಚರಣೆ ಕೈಗೊಂಡಿತ್ತು. ಅಕ್ರಮವಾಗಿ ಟಿಕೆಟ್ ಕಾಯ್ದಿರಿಸುತ್ತಿದ್ದಕ್ಕೆ ಪ್ರಯಾಣಿಕರಿಂದ ದುಬಾರಿ ಮೊತ್ತದ ಹಣ ಪಡೆಯಲಾಗುತ್ತಿತ್ತು ಎಂಬ ಮಾಹಿತಿ ಬಹಿರಂಗವಾಗಿದೆ.

ಈ ಸಾಫ್ಟ್‌ವೇರ್‌ಗಳು ಅಕ್ರಮ ಟಿಕೆಟ್ ಬುಕಿಂಗ್‌ಗೆ ಅನುವು ಮಾಡಿಕೊಡುವ ನಿಟ್ಟಿನಲ್ಲಿ ನಕಲಿ ಐಪಿ ವಿಳಾಸ ಐಡಿಗಳ ಸೃಷ್ಟಿಗೆ ಸಹಕರಿಸುತ್ತಿದ್ದವು. ಇದರಿಂದ ಹೆಚ್ಚು ಟಿಕೆಟ್‌ಗಳನ್ನು ಕಾಯ್ದಿರಿಸಲು ಸಾಧ್ಯವಾಗುತ್ತಿತ್ತು, ಕಳೆದ ಕೆಲವು ವರ್ಷಗಳಲ್ಲಿ ರೈಲ್ವೆ ಇಂತಹ 150ಕ್ಕೂ ಹೆಚ್ಚಿನ ಸಾಫ್ಟ್‌ವೇರ್‌ಗಳನ್ನು ವಶಕ್ಕೆ ಪಡೆದಿದೆ ಎಂದು ರೈಲ್ವೆ ಇಲಾಖೆ ಮಾಹಿತಿ ನೀಡಿದೆ.

ಮೇ 24ರಂದು ಸುತ್ತೂರು ಕ್ಷೇತ್ರದಲ್ಲಿ ಸಾಮೂಹಿಕ ವಿವಾಹ

ಸುತ್ತೂರು, ಮೇ 11– ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮೇ 24ರಂದು ಮಾಸಿಕ ಸಾಮೂಹಿಕ ವಿವಾಹ ಕಾರ್ಯಕ್ರಮ ಆಯೋಜಿಸಲಾಗಿದೆ. ವಿವಾಹದಲ್ಲಿ ಭಾಗವಹಿಸುವ ವರನಿಗೆ 21 ವರ್ಷ, ವಧುವಿಗೆ 18 ವರ್ಷ ಪೂರ್ಣಗೊಂಡಿರಬೇಕು. ಅರ್ಜಿ ನಮೂನೆಯಲ್ಲಿ ವರ ಮತ್ತು ವಧುವಿನ ಭಾವ ಚಿತ್ರಗಳನ್ನು ಲಗತ್ತಿಸಿರಬೇಕು. ಜಾತಿ ದೃಢೀಕರಣ ಪತ್ರ ವಧುವರರ ವಯಸ್ಸಿನ ಬಗ್ಗೆ ಶಾಲೆಯಿಂದ ಪಡೆದ ದಾಖಲಾತಿ ಪತ್ರ ಪಡೆದ ದೃಢೀಕರಣ ಪತ್ರ, ಲಗತ್ತಿಸಿರಬೇಕು. ಬಾಲ್ಯ ವಿವಾಹಕ್ಕೆ ಅವಕಾಶವಿರುವುದಿಲ್ಲ.

ಆಸಕ್ತರು 8 ದಿನಗಳ ಮುಂಚಿತವಾಗಿ ಆಡಳಿತಾಧಿಕಾರಿ, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸುತ್ತೂರು ಇವರನ್ನು ನೇರವಾಗಿ ಸಂಪರ್ಕಿಸಿ ಅಥವಾ ದೂರವಾಣಿ: 08221–232217, 232033, 9741342222, 9449030588 ಸಂಪರ್ಕಿಸಿ ಮಾಹಿತಿ ಪಡೆದು ನೋಂದಣಿ ಮಾಡಿಕೊಳ್ಳಬಹುದು.

ಪಂಡಿತ್ ನೆಹರೂ ಪ್ರೌಢಶಾಲೆಗೆ ಉತ್ತಮ ಫಲಿತಾಂಶ

ಮೈಸೂರು, ಮೇ 11– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರಿನ ಕುವೆಂಪುನಗರದಲ್ಲಿರುವ ವಿದ್ಯಾವರ್ಧಕ ಸಂಘದ ಪಂಡಿತ್ ನೆಹರು ಪ್ರೌಢಶಾಲೆಗೆ ಶೇ.100 ಫಲಿತಾಂಶ ಬಂದಿದೆ. ಪರೀಕ್ಷೆಗೆ ಹಾಜರಾಗಿದ್ದ 32 ವಿದ್ಯಾರ್ಥಿಗಳಲ್ಲಿ 15 ವಿದ್ಯಾರ್ಥಿಗಳು ಶೇ. 85ಕ್ಕಿಂತಲೂ ಹೆಚ್ಚು ಅಂಕ ಗಳಿಸಿದ್ದಾರೆ. 16 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, ಓರ್ವ ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಎ.ಎಸ್.ಸಾನಿಕ ಹಾಗೂ ಆಕಾಂಕ್ಷ ಕಂಚಿಬೈಲ್ 625ಕ್ಕೆ 603 ಅಂಕಗಳನ್ನು ಗಳಿಸಿ ಶಾಲೆಗೆ ಪ್ರಥಮರಾಗಿದ್ದಾರೆ.

ಮತಗಟ್ಟೆ ಸಮೀಕ್ಷೆಯಲ್ಲಿ 'ಕೈ' ಮೇಲು: ಸಿದ್ದರಾಮಯ್ಯ ನಿವಾಸದಲ್ಲಿ ರಣತಂತ್ರ!



ಬೆಂಗಳೂರು: ವಿಧಾನಸಭೆ ಸಾರ್ವತ್ರಿಕ ಚುನಾವಣೆ 2023ಕ್ಕೆ ಮತದಾನ ಮುಗಿದು ಎಲ್ಲರೂ ಫಲಿತಾಂಶಕ್ಕಾಗಿ ಕಾಯುತ್ತಿದ್ದಾರೆ. ಈ ಮಧ್ಯೆ ನಿನ್ನೆ ಸಾಯಂಕಾಲ ಹೊರಬಿದ್ದ ಬಹುತೇಕ ಮತದಾನೋತ್ತರ ಸಮೀಕ್ಷೆಗಳಲ್ಲಿ ಕಾಂಗ್ರೆಸ್‌ಗೆ ಈ ಬಾರಿ ಬಹುಮತ ಸಿಗಲಿದೆ. ಸ್ಪಷ್ಟ ಬಹುಮತಕ್ಕೆ ಕೆಲವು ಸ್ಥಾನಗಳು ಬೇಕಾಗಬಹುದು ಎಂಬಿತ್ಯಾದಿ ಸಮೀಕ್ಷೆಗಳು ಬಂದಿದ್ದು ಫಲಿತಾಂಶಕ್ಕೆ ಮುನ್ನ ಕಾಂಗ್ರೆಸ್ ಪಾಳೆಯದಲ್ಲಿ ರಾಜಕೀಯ ಚಟುವಟಿಕೆ ಗರಿಗೆದರಿದೆ.

ಒಂದು ವೇಳೆ ಪೂರ್ಣ ಬಹುಮತ ಬರದೆ ಸರ್ಕಾರ ರಚಿಸಲು ಕೆಲವೇ ಸ್ಥಾನಗಳು ಬೇಕಾದರೆ ಏನು ಮಾಡಬಹುದು ಎಂಬ ಬಗ್ಗೆ ಕಾಂಗ್ರೆಸ್ ನಾಯಕರು ಗಂಭೀರ ಚರ್ಚೆಯಲ್ಲಿ ತೊಡಗಿದ್ದಾರೆ. ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಂದೀಪ್ ಸಿಂಗ್ ಸುರ್ಜೆವಾಲ ನೇತೃತ್ವದಲ್ಲಿ ಗುರುವಾರ ವಿಪಕ್ಷ ನಾಯಕ ಸಿದ್ದರಾಮಯ್ಯ ನಿವಾಸದಲ್ಲಿ ರಾಜಕೀಯ ತಂತ್ರಗಾರಿಕೆ ಚರ್ಚೆ, ಮಾತುಕತೆಗಳು ನಡೆದಿವೆ ಎಂದು ತಿಳಿದುಬಂದಿದೆ. ಕಾಂಗ್ರೆಸ್‌ನಲ್ಲಿ ಫಲಿತಾಂಶಕ್ಕೂ ಮುನ್ನ ಘಟಾನುಘಟಿ ನಾಯಕರಿಂದ ರಣತಂತ್ರಗಳು ನಡೆಯುತ್ತಿದ್ದು ಸರಣಿ ಮೀಟಿಂಗ್‌ಗಳು ನಡೆಯುತ್ತಿವೆ. ಸುರ್ಜೆವಾಲಾ ಮತ್ತು ಸಿದ್ದರಾಮಯ್ಯ ನಡುವೆ ಸುಮಾರು 2 ಗಂಟೆಗಳ ಕಾಲ ಮಾತುಕತೆ ನಡೆದಿದೆ ಇಂದು ಸಂಜೆ 6 ಗಂಟೆಗೆ ಕಾಂಗ್ರೆಸ್ ನಾಯಕರು ಮತ್ತೊಂದು ಸುತ್ತಿನ ಸಭೆ ನಡೆಸಲಿದ್ದಾರೆ ಎಂದು ಹೇಳಲಾಗುತ್ತಿದೆ. ಅದರಲ್ಲಿ ಡಿ.ಕೆ.ಶಿವಕುಮಾರ್ ಭಾಗಿಯಾಗುವ ಸಾಧ್ಯತೆಯಿದೆ.

ಶತಾಯಗತಾಯ ಈ ಬಾರಿ ಬಿಜೆಪಿಗೆ ಅಧಿಕಾರ ಬಿಟ್ಟುಕೊಡದೆ ಸರ್ಕಾರ ರಚಿಸಲು ಕಾಂಗ್ರೆಸ್ ಶತಪ್ರಯತ್ನ ಮಾಡುತ್ತಿದೆ. ಬಹುಮತ ಬಂದರೆ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಯಾರಾಗುತ್ತಾರೆ, ಒಂದು ವೇಳೆ ಬಹುಮತ ಬಾರದಿದ್ದರೆ ಆಪರೇಷನ್ ಹಸ್ತ ನಡೆಸುವ ವಿಚಾರ ಮತ್ತು ಬಿಜೆಪಿಗೆ ಶಾಸಕರು ಹೋಗದಂತೆ ಹೇಗೆ ಹಿಡಿದಿಟ್ಟುಕೊಳ್ಳಬೇಕು ಎಂಬ ಬಗ್ಗೆ ಕೂಡ ಮಾತುಕತೆ ನಡೆಯಲಿದೆ ಎಂದು ತಿಳಿದುಬಂದಿದೆ.

ದೆಹಲಿ V/S ಕೇಂದ್ರ: ಚುನಾಯಿತ ಸರ್ಕಾರಕ್ಕೆ ಆಡಳಿತಾತ್ಮಕ ಅಧಿಕಾರ ಇರಬೇಕು; ಸುಪ್ರೀಂಕೋರ್ಟ್ ಮಹತ್ವದ ತೀರ್ಪು



ನವದೆಹಲಿ, ಮೇ 11– ರಾಷ್ಟ್ರ ರಾಜಧಾನಿಯ ಆಡಳಿತಾತ್ಮಕ ಸೇವೆಗಳ ಮೇಲಿನ ನಿಯಂತ್ರಣದ ವಿಚಾರಕ್ಕೆ ಸಂಬಂಧಿಸಿದಂತೆ ದೆಹಲಿ ಸರ್ಕಾರದ ಪರವಾಗಿ ಸುಪ್ರೀಂಕೋರ್ಟ್ ಮಹತ್ವದ ತೀರ್ಪು ನೀಡಿದ್ದು, ಅರವಿಂದ ಕೇಜ್ರಿವಾಲ್ ಸರ್ಕಾರಕ್ಕೆ ದೊಡ್ಡ ಗೆಲುವು ಸಿಕ್ಕಂತಾಗಿದೆ.

ದೆಹಲಿ ಸರ್ಕಾರವು ಕಾನೂನು ಮತ್ತು ಸುವ್ಯವಸ್ಥೆ, ಭೂಮಿ ಹೊರತುಪಡಿಸಿ ಇತರೆ ಸೇವೆಗಳ ಮೇಲೆ ಅಧಿಕಾರ ಹೊಂದಬಹುದು ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿದೆ.

ದೆಹಲಿಯಲ್ಲಿ ಆಡಳಿತಾತ್ಮಕ ಸೇವೆಗಳ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಮತ್ತು ದೆಹಲಿ ಸರ್ಕಾರದ ನಡುವಿನ ವಿವಾದದ ಕುರಿತು ಸುಪ್ರೀಂಕೋರ್ಟ್ ತೀರ್ಪು ನೀಡಿದೆ. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ನ್ಯಾಯಮೂರ್ತಿಗಳ ಪೀಠ ತೀರ್ಪು ಪ್ರಕಟಿಸಿದೆ. ತೀರ್ಪು ಪ್ರಕಟಿಸುವ ಮುನ್ನ ಸಿಜೆಐ, ಎಲ್ಲ ನ್ಯಾಯಾಧೀಶರ ಒಪ್ಪಿಗೆ ಮೇರೆಗೆ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಕೇಂದ್ರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಸುಪ್ರೀಂಕೋರ್ಟ್, ಸಂಪೂರ್ಣ ಆಡಳಿತಾತ್ಮಕ ನಿಯಂತ್ರಣ ಕೇಂದ್ರ ಸರ್ಕಾರದ ಬಳಿ ಇರಬೇಕಾದರೆ ದೆಹಲಿಯಲ್ಲಿ ಚುನಾಯಿತ ಸರ್ಕಾರ ಇರುವುದರ ಉದ್ದೇಶವೇನು ಎಂದು ಪ್ರಶ್ನಿಸಿತು. ಸರ್ಕಾರವು ಅಧಿಕಾರಿಗಳನ್ನು ನೇಮಕ ಮಾಡುವ ಮತ್ತು ವರ್ಗಾವಣೆ ಮಾಡುವ ಹಕ್ಕನ್ನು ಹೊಂದಿರುತ್ತದೆ. ಅದೇ ರೀತಿ ಪೊಲೀಸ್, ಸಾರ್ವಜನಿಕ ಸುವ್ಯವಸ್ಥೆ ಮತ್ತು ಭೂಮಿ ಸಂಬಂಧಿತ ಅಧಿಕಾರಗಳು ಕೇಂದ್ರದ ಬಳಿ ಇರುತ್ತವೆ ಎಂದು ತಿಳಿಸಿದೆ.

ರಾಷ್ಟ್ರಪತಿಗಳು ಸೂಚಿಸಿದಂತೆ ಆಡಳಿತಾತ್ಮಕ ಪಾತ್ರದ ಅಡಿಯಲ್ಲಿ ಲೆಫ್ಟಿನೆಂಟ್ ಗವರ್ನರ್ ಅಧಿಕಾರ ಚಲಾಯಿಸಬೇಕು. ಕಾರ್ಯನಿರ್ವಾಹಕ ಆಡಳಿತ, ಶಾಸಕಾಂಗ ಸಭೆಯ ಹೊರಗೆ ಬೀಳುವ ವಿಷಯಗಳಿಗೆ ಕೈ ಹಾಕಬಾರದು. ಇಲ್ಲದಿದ್ದರೆ ದೆಹಲಿಯಲ್ಲಿ ಪ್ರತ್ಯೇಕ ಚುನಾಯಿತ ಸಂಸ್ಥೆ ಹೊಂದುವ ಉದ್ದೇಶ ನಿರರ್ಥಕವಾಗುತ್ತದೆ. ಪ್ರಜಾಸತ್ತಾತ್ಮಕವಾಗಿ ಚುನಾಯಿತ ಸರ್ಕಾರವು ತನ್ನ ಅಧಿಕಾರಿಗಳ ಮೇಲೆ ನಿಯಂತ್ರಣವನ್ನು ಹೊಂದಿರಬೇಕು ಎಂದು ಸುಪ್ರೀಂಕೋರ್ಟ್ ತಿಳಿಸಿದೆ.


ಪ್ರಜಾಸತ್ತಾತ್ಮಕವಾಗಿ ಚುನಾಯಿತ ಸರ್ಕಾರ ತನ್ನ ಅಧಿಕಾರಿಗಳನ್ನು ನಿಯಂತ್ರಿಸಲು ಆಗದಿದ್ದರೆ ಶಾಸಕಾಂಗ ಮತ್ತು ಸಾರ್ವಜನಿಕರ ಕಡೆಗೆ ಅದರ ಜವಾಬ್ದಾರಿ ದುರ್ಬಲಗೊಳಿಸಲಾಗುತ್ತದೆ. ಒಬ್ಬ ಅಧಿಕಾರಿ ಸರ್ಕಾರಕ್ಕೆ ಪ್ರತಿಕ್ರಿಯಿಸದಿದ್ದರೆ ಸಾಮೂಹಿಕ ಜವಾಬ್ದಾರಿ ದುರ್ಬಲಗೊಳಿಸಲಾಗುತ್ತದೆ. ಚುನಾಯಿತ ಸರ್ಕಾರದಿಂದ ಪ್ರತ್ಯೇಕಿಸಲ್ಪಟ್ಟಿದೆ ಎಂದು ಭಾವಿಸಿದರೆ ಅವರು ಜವಾಬ್ದಾರರಲ್ಲ ಎಂದು ಅವರು ಭಾವಿಸುತ್ತಾರೆ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರಿದ್ದ ಪೀಠ ಹೇಳಿದೆ.

ಜನರ ಇಚ್ಛೆಯನ್ನು ಪ್ರತಿನಿಧಿಸಲು ದೆಹಲಿ ವಿಧಾನಸಭೆಗೆ ಶಾಸನ ಮಾಡಲು ಅಧಿಕಾರವನ್ನು ನೀಡಲಾಗಿದೆ. ಪ್ರಜಾಪ್ರಭುತ್ವದ ತತ್ವ ಮತ್ತು ಒಕ್ಕೂಟ ವ್ಯವಸ್ಥೆ ಮೂಲಭೂತ ರಚನೆಯ ಒಂದು ಭಾಗವಾಗಿದೆ. ಅದನ್ನು ಉಲ್ಲಂಘಿಸುವುದು ಸರಿಯಲ್ಲ ಎಂದು ಹೇಳಿದೆ.

ಗೋಲ್ಡನ್ ಟೆಂಪಲ್ ಬಳಿ ಮತ್ತೊಂದು ಸ್ಫೋಟ: ವಾರದಲ್ಲಿ 3ನೇ ಪ್ರಕರಣ, ಐವರು ವಶಕ್ಕೆ

ಚಂಡೀಗಢ, ಮೇ 11– ಗೋಲ್ಡನ್ ಟೆಂಪಲ್ ಬಳಿ ಬುಧವಾರ ತಡರಾತ್ರಿ ಮತ್ತೊಂದು ಸ್ಫೋಟ ಸಂಭವಿಸಿದೆ. ಇದು ಒಂದೇ ವಾರದಲ್ಲಿ ನಡೆದ 3ನೇ ಪ್ರಕರಣವಾಗಿದ್ದು ಪ್ರಕರಣಕ್ಕೆ ಸಂಬಂಧಿಸಿದಂತೆ ಪಂಜಾಬ್ ಪೊಲೀಸರು ಐವರು ಆರೋಪಿಗಳನ್ನು ಬಂಧಿಸಿದ್ದಾರೆ. ಪೊಲೀಸರ ಮಾಹಿತಿಯಂತೆ ಬುಧವಾರ ರಾತ್ರಿ 12.30ರ ಸುಮಾರಿಗೆ ಅಮೃತಸರದ ಹೆರಿಟೇಜ್ ಸ್ಟ್ರೀಟ್ ಬಳಿ ಸ್ಫೋಟದ ಸದ್ದು ಕೇಳಿದೆ. ಸಿಸಿಟಿವಿ ಆಧಾರದ ಮೇಲೆ ಪೊಲೀಸರು ಐವರು ಆರೋಪಿಗಳನ್ನು ವಶಕ್ಕೆ ಪಡೆದು ಆರೋಪಿಗಳು ಸ್ಫೋಟಕ್ಕೆ ಐಇಡಿಗಳನ್ನು ಬಳಸಿದ್ದರು ಎನ್ನಲಾಗಿದೆ. ನಗರದಲ್ಲಿ ಶಾಂತಿ ಕದಡುವ ದೃಷ್ಟಿಯಿಂದ ಸ್ಫೋಟಕಗಳನ್ನು ಬಳಸಿಕೊಂಡಿದ್ದರು ಎಂದು ತಿಳಿದು ಬಂದಿದೆ. ಘಟನೆ ಸಂಬಂಧ ಎಸ್‌ಐಟಿ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ಇದಕ್ಕೂ ಮೊದಲು, ಮೇ 6 ಮತ್ತು ಮೇ 8ರಂದು ಗೋಲ್ಡನ್ ಟೆಂಪಲ್ ಬಳಿಯ ಹೆರಿಟೇಜ್ ಸ್ಟ್ರೀಟ್‌ನಲ್ಲಿ 2 ಸ್ಫೋಟಗಳು ಸಂಭವಿಸಿದ್ದವು, ಇದರಲ್ಲಿ 6 ಮಂದಿ ಗಾಯಗೊಂಡಿದ್ದರು. ಇಂದು ನಡೆದ ಸ್ಫೋಟದಲ್ಲಿ ಯಾವುದೇ ಪ್ರಾಣಹಾನಿಯಾಗಿಲ್ಲ.

ಪ್ರಜಾಪ್ರಭುತ್ವದ ಹಬ್ಬ ಮತದಾನಕ್ಕೆ ಇಂಬು ನೀಡಿದ ವಿಶೇಷ ಮತಗಟ್ಟೆಗಳು















ಮೈಸೂರು, ಮೇ 11(ಎಸ್‌ಬಿಡಿ)– ಮೈಸೂರು ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿದ್ದ ಅತ್ಯಾಕರ್ಷಕ ವಿಶೇಷ ಮತಗಟ್ಟೆಗಳು ಪ್ರಜಾಪ್ರಭುತ್ವ ಹಬ್ಬದ ಸಂಭ್ರಮವನ್ನು ಇಮ್ಮಡಿಗೊಳಿಸಿದವು.

ಚುನಾವಣೆಯನ್ನು ಎಲ್ಲರೂ ಹಬ್ಬದಂತೆ ಸಂಭ್ರಮಿಸುವ ಮೂಲಕ ಸಾಂವಿಧಾನಿಕ ಹಕ್ಕು ಚಲಾಯಿಸಬೇಕೆಂಬ ಉದ್ದೇಶದೊಂದಿಗೆ ಮಹಿಳೆಯರಿಗಾಗಿ ವಿಶೇಷ ಸಖಿ ಮತಗಟ್ಟೆ, ಯುವ ಸಮುದಾಯವನ್ನು ಆಕರ್ಷಿಸುವ ಯುವ ಮತಗಟ್ಟೆ, ಸಂಸ್ಕೃತಿ ಸಾರುವ ಎಥ್ನಿಕ್ ಮತಗಟ್ಟೆ, ವಿಶೇಷಚೇತನರ ಆತ್ಮವಿಶ್ವಾಸ ಹೆಚ್ಚಿಸುವ ವಿಕಲಚೇತನ ಸ್ನೇಹಿ ಮತಗಟ್ಟೆ, ಹಾಡಿ ಮತದಾರರ ಸೆಳೆಯುವ ಬುಡಕಟ್ಟು ವಿಶೇಷ ಮತಗಟ್ಟೆ, ಹೀಗೆ ವಿಭಿನ್ನ ಶೀರ್ಷಿಕೆಯಡಿ ಮತಗಟ್ಟೆಗಳನ್ನು ಸಿಂಗರಿಸಲಾಗಿತ್ತು.

ನಂಜನಗೂಡು ತಾಲೂಕು ತಾಂಡವಪುರ ಗ್ರಾಮದ ಎಥ್ನಿಕ್ ಮತಗಟ್ಟೆಯಲ್ಲಿ ಸಾಂಪ್ರದಾಯಿಕ ಉಡುಗೆ ತೊಟ್ಟ ದಂಪತಿ ಚಿತ್ರ ಮತದಾರರನ್ನು ಸ್ವಾಗತಿಸಿದರೆ, ಮತಗಟ್ಟೆ ಸಿಬ್ಬಂದಿ ಮೈಸೂರು ಪೇಟ, ಬಿಳಿ ಪಂಚೆ, ಬಿಳಿ ಶರ್ಟ್ ಧರಿಸಿ ಕರ್ತವ್ಯ ನಿರ್ವಹಿಸಿದ್ದು ವಿಶೇಷವಾಗಿತ್ತು. ದೇವಿರಮ್ಮನಹಳ್ಳಿ ಯುವ ಮತಗಟ್ಟೆ, ಹುಳಿಮಾವು ಗ್ರಾಮದ ಮತಗಟ್ಟೆ ಗೋಡೆಯಲ್ಲಿ ಜಾನಪದ ಕಲೆ, ಮೈಸೂರಿನ ಪ್ರೇಕ್ಷಣೀಯ ಸ್ಥಳಗಳ ಚಿತ್ತಾರ ಗಮನ ಸೆಳೆಯಿತು. ಹಲ್ಲರೆ, ಶಿರಮಳ್ಳಿ, ಕುರಹಟ್ಟಿ, ಕಸುವಿನಹಳ್ಳಿ, ನೇರಳೆ, ಸುತ್ತೂರು, ಬಿಳಿಗೆರೆ ಹಾಗೂ ಹೊಸಕೋಟೆ ಇನ್ನಿತರ ಗ್ರಾಮಗಳ ಸಖಿ ಮತಗಟ್ಟೆಗಳಲ್ಲಿ ಮಹಿಳಾ ಸಿಬ್ಬಂದಿ ಕಾರ್ಯ ನಿರ್ವಹಿಸಿದರು. ಬಣ್ಣದ ಬಲೂನ್, ಸ್ವಾಗತ ಕಮಾನುಗಳು ಆಕರ್ಷಣೀಯವಾಗಿದ್ದವು.

ಚಾಮುಂಡೇಶ್ವರಿ ಕ್ಷೇತ್ರದ ಶೆಟ್ಟನಾಯಕನಹಳ್ಳಿ ಸರ್ಕಾರಿ ಪ್ರೌಢಶಾಲೆ, ನರಸಿಂಹರಾಜ ಕ್ಷೇತ್ರ ರಾಜೇಂದ್ರ ನಗರದ ಇನ್ಸ್ಟಿಟ್ಯೂಟ್ ಆಫ್ ಎಜುಕೇಷನ್ ಪ್ರೌಢಶಾಲೆ, ಚಾಮರಾಜ ಕ್ಷೇತ್ರ ಮೇಟಗಳ್ಳಿಯ ಜೆಎಸ್‌ಎಸ್ ಪ್ರೌಢಶಾಲೆ, ಕೃಷ್ಣರಾಜ ಕ್ಷೇತ್ರದ ದೇವಯ್ಯನಹುಂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹುಣಸೂರು ಕ್ಷೇತ್ರದ ಧರ್ಮಾಪುರ ಸರ್ಕಾರಿ ಪ್ರೌಢಶಾಲೆ, ತಿ.ನರಸೀಪುರ ಸರ್ಕಾರಿ ಪದವಿ ಪೂರ್ವ ಕಾಲೇಜು, ಪಿರಿಯಾಪಟ್ಟಣದ ಬೈಲುಕುಪ್ಪೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ನಂಜನಗೂಡಿನ ಸರ್ಕಾರಿ ಪದವಿ ಪೂರ್ವ ಕಾಲೇಜು, ಕೆಆರ್.ನಗರದ ಹೆಬ್ಬಾಳು ಗ್ರಾಮ ಕಚೇರಿ ಹಾಗೂ ಹೆಚ್.ಡಿ.ಕೋಟೆ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವಿಶೇಷ ಚೇತನ ಸ್ನೇಹಿ ಮತಗಟ್ಟೆ ತೆರೆಯಲಾಗಿತ್ತು.

ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ 11 ವಿಶೇಷ ಮತಗಟ್ಟೆಗಳನ್ನು ಸ್ಥಾಪಿಸಲಾಗಿತ್ತು. ಅವುಗಳಲ್ಲಿ ಬುಡಕಟ್ಟು ಜನರನ್ನು ಸೆಳೆಯುವ ಉದ್ದೇಶದಿಂದ ಬಸವನಗಿರಿ ಎ ಹಾಡಿ, ಭೀಮನಹಳ್ಳಿ ಹಾಗೂ ಪೆಂಜಹಳ್ಳಿ ಕಾಲೋನಿಯ ಗಿರಿಜನ ಆಶ್ರಮ ಶಾಲೆಗಳಲ್ಲಿ ಸ್ಥಾಪಿಸಲಾಗಿದ್ದ ಸಾಂಪ್ರದಾಯಿಕ ಮತಗಟ್ಟೆಗಳಲ್ಲಿ ಆದಿವಾಸಿ ಜನ ಮತದಾನ ಮಾಡುವ ಮೂಲಕ ಪ್ರಜಾಪ್ರಭುತ್ವ ಹಬ್ಬದಲ್ಲಿ ಭಾಗಿಯಾದರು.

ಹೆಚ್.ಡಿ.ಕೋಟೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿಕಲಚೇತನ ಸ್ನೇಹಿ ಮತಗಟ್ಟೆ ವ್ಯಾಪ್ತಿಯಲ್ಲಿ 405 ಮಹಿಳೆಯರು ಹಾಗೂ 383 ಪುರುಷರು ಸೇರಿ ಒಟ್ಟು 788 ವಿಶೇಷ ಚೇತನ ಮತದಾರರಿದ್ದು, ಇವರಲ್ಲಿ 566 ಮಂದಿ(ಶೇ.72) ಮತ ಚಲಾಯಿಸಿದ್ದಾರೆ.

ಚುನಾವಣೆ ಫಲಿತಾಂಶಕ್ಕೆ ಒಂದು ದಿನ ಬಾಕಿ

ಮಂಡ್ಯ ಜಿಲ್ಲೆಯಲ್ಲಿ ಹೆಚ್ಚಾಯ್ತು ಬೆಟ್ಟಿಂಗ್ ಅಬ್ಬರ

ಮೇಲುಕೋಟೆ ಕ್ಷೇತ್ರದ ಗ್ರಾಮಗಳಲ್ಲೂ ಬೆಟ್ಟಿಂಗ್ ಭರಾಟೆ

● ಎಂ.ಕೆ.ಮೋಹನ್‌ರಾಜ್

ಮಂಡ್ಯ, ಮೇ 11– ಐದು ವರ್ಷಕ್ಕೊಮ್ಮೆ ಬರುವ ಪ್ರಜಾಪ್ರಭುತ್ವದ ದೊಡ್ಡ ಹಬ್ಬ ವಿಧಾನ ಸಭಾ ಚುನಾವಣೆ ಅಬ್ಬರ ಎಲ್ಲೆಡೆ ರಂಗು ರಂಗಿನಿಂದ ಕೂಡಿರುತ್ತದೆ. ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಂತೂ ಪ್ರತಿಷ್ಠೆ, ವೈಯಕ್ತಿಕವಾಗಿ ತೆಗೆದುಕೊಂಡು ಚುನಾವಣೆಯನ್ನು ನಡೆಸುತ್ತಾರೆ. ಈಗಾಗಲೇ ಮತದಾನ ಮುಗಿದಿದ್ದು, ಮಂಡ್ಯ ಜಿಲ್ಲೆಯಲ್ಲಿ ಬೆಟ್ಟಿಂಗ್ ಭರಾಟೆ ಜೋರಾಗಿದ್ದು, ಅದರಲ್ಲೂ ಮೇಲುಕೋಟೆ ಕ್ಷೇತ್ರದಲ್ಲಿ ಬೆಟ್ಟಿಂಗ್ ಅಬ್ಬರ ತುಸು ಜೋರಾಗಿದೆ.

ಕಳೆದ 2018ರ ಚುನಾವಣೆಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷ ಏಳಕ್ಕೆ ಏಳು ಕ್ಷೇತ್ರದಲ್ಲೂ ಗೆದ್ದು ಕಮಾಲ್ ಮಾಡಿತ್ತು. ಹೆಚ್.ಡಿ.ಕುಮಾರಸ್ವಾಮಿ ರಾಜ್ಯದ ಮುಖ್ಯಮಂತ್ರಿಯಾಗುತ್ತಾರೆ. ಸಾಲಮನ್ನಾ ಮಾಡುತ್ತಾರೆ ಎಂಬ ಅಲೆ ಮಂಡ್ಯ ಜಿಲ್ಲೆಯಲ್ಲಿ ಜೋರಾಗಿದ್ದರಿಂದ ಜೆಡಿಎಸ್‌ನ ಏಳು ಅಭ್ಯರ್ಥಿಗಳನ್ನು ಭಾರೀ ಅಂತರದಿಂದ ಇಲ್ಲಿನ ಮತದಾರರು ಗೆಲ್ಲಿಸಿದ್ದರು. ಅದರಲ್ಲೂ ಮೂರ್‍ನಾಲ್ಕು ಕ್ಷೇತ್ರಗಳಲ್ಲಿ ಗೆಲುವಿನ ಅಂತರ 40 ಸಾವಿರ ದಾಟಿತ್ತು. ಆ ಚುನಾವಣೆಯಲ್ಲಿ ಬೆಟ್ಟಿಂಗ್ ಭರಾಟೆಗೆ ಅವಕಾಶವೇ ಇರಲಿಲ್ಲ.

ಆದರೆ ಈ ಬಾರಿ ಪರಿಸ್ಥಿತಿ 2018ರ ಚುನಾವಣೆಗಿಂತ ಭಿನ್ನವಾಗಿದ್ದು, ಏಳು ಕ್ಷೇತ್ರದಲ್ಲೂ ಜೆಡಿಎಸ್– ಕಾಂಗ್ರೆಸ್ ನಡುವೆ ಸಮಬಲದ ಕಾದಾಟ ನಡೆದಿದೆ. ಏಳು ಕ್ಷೇತ್ರದಲ್ಲೂ ಸಾಂಪ್ರದಾಯಿಕ ಎದುರಾಳಿಗಳಾದ ಜೆಡಿಎಸ್– ಕಾಂಗ್ರೆಸ್‌ಗೆ ಬಿಜೆಪಿ ಭಾರೀ ಪೈಪೋಟಿ ನೀಡುತ್ತಿದೆ. ಈ ನಿಟ್ಟಿನಲ್ಲಿ ಈ ಬಾರಿ ಏಳು ಕ್ಷೇತ್ರದಲ್ಲೂ ಇಂತಹವರೇ ಗೆಲ್ಲುತ್ತಾರೆ ಎಂಬುದನ್ನು ರಾಜಕೀಯ ಪಂಡಿತರೂ ಊಹಿಸಲು ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಏಳು ಕ್ಷೇತ್ರದಲ್ಲೂ ಬೆಟ್ಟಿಂಗ್ ಅಬ್ಬರ ಬಲು ಜೋರಾಗಿದೆ.

ಮೇಲುಕೋಟೆಯಲ್ಲಿ ಬೆಟ್ಟಿಂಗ್ ಭರಾಟೆ: ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಹಾಲಿ ಶಾಸಕ ಸಿ.ಎಸ್.ಪುಟ್ಟರಾಜು ಜೆಡಿಎಸ್‌ನಿಂದ ಕಣಕ್ಕಿಳಿದು ಅಬ್ಬರದ ಪ್ರಚಾರ ನಡೆಸಿ, ದೇವೇಗೌಡರು ಹಾಗೂ ಕುಮಾರಸ್ವಾಮಿ ಅವರನ್ನು ಕ್ಷೇತ್ರಕ್ಕೆ ಕರೆತಂದು ಮತ ಬೇಟೆ ನಡೆಸಿದ್ದರು. ಮತ್ತೊಂದೆಡೆ ಅವರ ಸಮೀಪದ ಪ್ರತಿಸ್ಪರ್ಧಿ ಸರ್ವೋದಯ ಕರ್ನಾಟಕ ಪಕ್ಷದ ದರ್ಶನ್ ಪುಟ್ಟಣ್ಣಯ್ಯ ಸಹ ಅಬ್ಬರದ ಪ್ರಚಾರ ನಡೆಸಿದ್ದರು. ಅವರಿಗೆ ಕಾಂಗ್ರೆಸ್ ಪಕ್ಷ ಸೇರಿದಂತೆ ಕೆಲ ಸಂಘಟನೆಗಳು ಬೆಂಬಲ ಸೂಚಿಸಿದ್ದವು.



ಹಣ, ಜಮೀನು, ಟ್ರ್ಯಾಕ್ಟರ್, ದ್ವಿಚಕ್ರ ವಾಹನ, ಹಸು, ಕೋಳಿ, ಕುರಿಗಳು ಪಣಕ್ಕೆ

ಇಬ್ಬರ ನಡುವೆ ಭಾರೀ ಕಾಳಗ ನಡೆದಿದ್ದು, ಚುನಾವಣೆಯ ಫಲಿತಾಂಶ ಬಲು ರೋಚಕತೆಯಿಂದ ಕೂಡಿರುವ ನಿರೀಕ್ಷೆಯಿದೆ. ಇಡೀ ಮಂಡ್ಯ ಜಿಲ್ಲೆಯಲ್ಲಿ ಮೇಲುಕೋಟೆ ಹೈ ವೋಲ್ಟೇಜ್ ಕ್ಷೇತ್ರವಾಗಿ ಪರಿಣಮಿಸಿದ್ದು, ಮೇಲುಕೋಟೆ ಕ್ಷೇತ್ರದ ಗ್ರಾಮ ಗ್ರಾಮಗಳಲ್ಲೂ ಬೆಟ್ಟಿಂಗ್ ಅಬ್ಬರ ಜೋರಾಗಿದೆ. ಪ್ರತಿ ಗ್ರಾಮದಲ್ಲೂ ಪುಟ್ಟರಾಜು ಹಾಗೂ ದರ್ಶನ್ ಪರ 50 ಸಾವಿರದಿಂದ ಹಿಡಿದು 5 ಲಕ್ಷದವರೆಗೂ ಬೆಟ್ಟಿಂಗ್ ಭರಾಟೆ ನಡೆಯುತ್ತಿದೆ.

ಕೇವಲ ಹಣ ಮಾತ್ರವಲ್ಲದೇ ಜಮೀನು, ಜಾನುವಾರು, ಕುರಿ, ಮೇಕೆಗಳನ್ನು ಪಣಕ್ಕಿಡುವ ಮಟ್ಟಕ್ಕೆ ಮೇಲುಕೋಟೆ ಕ್ಷೇತ್ರ ಕುತೂಹಲ ಮೂಡಿಸಿದೆ. ಅದರಲ್ಲೂ ಮೇಲುಕೋಟೆ ಕ್ಷೇತ್ರ ವ್ಯಾಪ್ತಿಯ ದುದ್ದ, ಚಿನಕುರಳಿ, ಜಕ್ಕನಹಳ್ಳಿ, ಕ್ಯಾತನಹಳ್ಳಿ ಭಾಗದಲ್ಲಿ ಬೆಟ್ಟಿಂಗ್ ಅಬ್ಬರ ಜೋರಾಗಿದೆ. ಆದರೆ ಬೆಟ್ಟಿಂಗ್ ಕಟ್ಟುವುದು ಕಾನೂನಾತ್ಮಕವಾಗಿ ಅಪರಾಧವಾಗಿರುವುದರಿಂದ ಗೌಪ್ಯವಾಗಿ ನಡೆಯುತ್ತಿದ್ದು, ಪಟ್ಟಣ ಪ್ರದೇಶದಲ್ಲಿ ಬೆಟ್ಟಿಂಗ್ ಭರಾಟೆ ಅಷ್ಟು ಕಂಡು ಬಂದಿಲ್ಲ.

ಉಳಿದ ಕಡೆಯಲ್ಲೂ ಬೆಟ್ಟಿಂಗ್ ಜೋರು: ಮೇಲುಕೋಟೆ ಬಿಟ್ಟರೆ ಜಿಲ್ಲೆಯ ಮತ್ತೊಂದು ಹೈವೋಲ್ಟೇಜ್ ಕ್ಷೇತ್ರವಾಗಿರುವ ನಾಗಮಂಗಲದಲ್ಲೂ ಬೆಟ್ಟಿಂಗ್ ಜೋರಾಗಿದೆ. ಜೆಡಿಎಸ್‌ನ ಸುರೇಶ್‌ಗೌಡ ಹಾಗೂ ಕಾಂಗ್ರೆಸ್‌ನ ಚಲುವರಾಯಸ್ವಾಮಿ ನಡುವೆ ನೇರಾನೇರಾ ಹಣಾಹಣಿ ನಡೆದಿದ್ದು, ಅಲ್ಲೂ ಸಹ ಫಲಿತಾಂಶ ಊಹಿಸಲು ಸಾಧ್ಯವಾಗದ ಕಾರಣ ಲಕ್ಷಾಂತರ ರೂ. ಹಣವನ್ನು ನಾಗಮಂಗಲದಲ್ಲಿ ಪಣಕ್ಕಿಟ್ಟಿದ್ದಾರೆ.

ಇತ್ತ ಈ ಬಾರಿ ಕೆ.ಆರ್.ಪೇಟೆ ಸಹ ಗಮನ ಸೆಳೆದಿದ್ದು, ಅಲ್ಲೂ ಸಹ ಕಾಂಗ್ರೆಸ್‌ನ ಬಿ.ಎಲ್.ದೇವರಾಜು, ಜೆಡಿಎಸ್‌ನ ಹೆಚ್.ಟಿ.ಮಂಜು, ಬಿಜೆಪಿಯ ನಾರಾಯಣಗೌಡ ನಡುವೆ ಬೆಟ್ಟಿಂಗ್ ಕಟ್ಟುವವರು ಲಕ್ಷಾಂತರ ಹಣವನ್ನು ಪಣಕ್ಕಿಟ್ಟು, ಇಂತಹವರು ಗೆಲ್ಲಬಹುದೆಂದು ಊಹಿಸುತ್ತಿದ್ದರೆ, ಶ್ರೀರಂಗಪಟ್ಟಣದಲ್ಲೂ ಜೆಡಿಎಸ್‌ನ ರವೀಂದ್ರ ಶ್ರೀಕಂಠಯ್ಯ, ಕಾಂಗ್ರೆಸ್‌ನ ರಮೇಶ್ ಬಂಡಿಸಿದ್ದೇಗೌಡ ಹಾಗೂ ಬಿಜೆಪಿಯ ಇಂಡುವಾಳು ಸಚ್ಚಿದಾನಂದ ನಡುವೆ ಬೆಂಬಲಿಗರ ಬೆಟ್ಟಿಂಗ್ ಭರಾಟೆ ಜೋರಾಗಿದೆ.

ಇದಲ್ಲದೇ ಮದ್ದೂರು ಕ್ಷೇತ್ರದಲ್ಲೂ ಸಹ ಜೆಡಿಎಸ್‌ನ ಡಿ.ಸಿ.ತಮ್ಮಣ್ಣ ಹಾಗೂ ಕಾಂಗ್ರೆಸ್‌ನ ಕದಲೂರು ಉದಯ್ ನಡುವೆ ಬೆಂಬಲಿಗರು ಬೆಟ್ಟಿಂಗ್‌ನಲ್ಲಿ ತೊಡಗಿದ್ದರೆ, ಈ ಬಾರಿ ಚತುಷ್ಕೋನ ಸ್ಪರ್ಧೆಗೆ ಸಾಕ್ಷಿಯಾಗಿರುವ ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲೂ ಜೆಡಿಎಸ್ ಅಭ್ಯರ್ಥಿ ಬಿ.ಆರ್. ರಾಮಚಂದ್ರ, ಕಾಂಗ್ರೆಸ್ ಅಭ್ಯರ್ಥಿ ಗಣಿಗ ರವಿಕುಮಾರ್, ಜೆಡಿಎಸ್ ಬಂಡಾಯ ಅಭ್ಯರ್ಥಿ ಕೆ.ಎಸ್.ವಿಜಯಾನಂದ ನಡುವೆ ಅಬ್ಬರದ ಬೆಟ್ಟಿಂಗ್ ಭರಾಟೆ ನಡೆಯುತ್ತಿದ್ದು, ಕೀಲಾರ, ಕೆರಗೋಡು, ಬಸರಾಳು ಭಾಗದಲ್ಲಿ ಲಕ್ಷ ಲಕ್ಷ ಹಣವನ್ನು ಬೆಟ್ಟಿಂಗ್‌ಗೆ ಹೂಡಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದ್ದು, ಮಳವಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಮಾತ್ರ ಬೆಟ್ಟಿಂಗ್ ಅಬ್ಬರ ಕಾಣುತ್ತಿಲ್ಲ.


2019ರ ಲೋಕಸಭಾ ಚುನಾವಣೆಯಲ್ಲಿ ಬಹಿರಂಗವಾಗಿ ನಡೆದಿದ್ದ ಬೆಟ್ಟಿಂಗ್ ಅಬ್ಬರ

ದೇಶದ ಗಮನ ಸೆಳೆದಿದ್ದ 2019ರ ಲೋಕಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಬೆಟ್ಟಿಂಗ್ ಅಬ್ಬರ ಬಹಿರಂಗವಾಗಿಯೇ ನಡೆದಿತ್ತು ಜೆಡಿಎಸ್– ಕಾಂಗ್ರೆಸ್‌ನ ಮೈತ್ರಿ ಅಭ್ಯರ್ಥಿಯಾಗಿ ನಿಖಿಲ್ ಕುಮಾರಸ್ವಾಮಿ ಹಾಗೂ ಪಕ್ಷೇತರವಾಗಿ ಬಿಜೆಪಿ, ರೈತಸಂಘದ ಬೆಂಬಲದೊಂದಿಗೆ ಸ್ಪರ್ಧಿಸಿದ್ದ ಸುಮಲತಾ ಅಂಬರೀಷ್ ನಡುವೆ ಭಾರೀ ಹಣಾಹಣಿ ನಡೆದಿತ್ತು. ಅಂತಿಮವಾಗಿ ಈ ಚುನಾವಣೆಯಲ್ಲಿ ಸುಮಲತಾ ಗೆದ್ದಿದ್ದರು.

ಸುಮಾರು 1.40 ಲಕ್ಷ ಮತಗಳ ಅಂತರದಿಂದ ಗೆಲುವು ಸಾಧಿಸಿದ್ದ ಸುಮಲತಾ ಹಾಗೂ ಪರಾಜಿತ ಅಭ್ಯರ್ಥಿ ನಿಖಿಲ್ ಪರ, ಮಂಡ್ಯ ಲೋಕಸಭಾ ಕ್ಷೇತ್ರ ಮಾತ್ರವಲ್ಲದೇ ಹೊರಗಿನ ಜಿಲ್ಲೆಗಳಲ್ಲೂ ಅಬ್ಬರ ಬೆಟ್ಟಿಂಗ್ ನಡೆದಿತ್ತು. ಗ್ರಾಮೀಣ ಪ್ರದೇಶ ನಗರ ಪ್ರದೇಶ ಎಂಬುದನ್ನು ಲೆಕ್ಕಿಸದೆ, ಕನಿಷ್ಠ 10 ಲಕ್ಷದ ವರೆಗೂ ಹಣ, ವಾಹನಗಳು, ಜಮೀನು, ಜಾನುವಾರುಗಳನ್ನು ಪಣಕ್ಕಿಟ್ಟಿದ್ದರು. ಬಹಿರಂಗವಾಗಿ ಬೆಟ್ಟಿಂಗ್ ನಡೆದಿದ್ದು, ವಿಶೇಷವಾಗಿತ್ತು. ಆ ಚುನಾವಣೆಯಲ್ಲಿ ನಿಖಿಲ್ ಪರ ಅಂದಿನ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಜೆಡಿಎಸ್, ಕಾಂಗ್ರೆಸ್‌ನ ಘಟಾನುಘಟಿಗಳು ಅಬ್ಬರದ ಪ್ರಚಾರ ನಡೆಸಿದ್ದರೆ, ಇತ್ತ ಸುಮಲತಾ ಸ್ವಾಭಿಮಾನದ ಹೆಸರಲ್ಲಿ ಚುನಾವಣೆ ಕಣಕ್ಕಿಳಿದಿದ್ದರು. ಪತಿ ಅಂಬರೀಷ್ ನಿಧನದ ಅನುಕಂಪ, ನಟರಾದ ದರ್ಶನ್, ಯಶ್ ಪ್ರಚಾರ ಸುಮಲತಾ ಕೈ ಹಿಡಿದಿತ್ತು. ಪರಸ್ಪರ ವಾಕ್ಸಮರ, ಟೀಕಾ ಪ್ರಹಾರಗಳು ದೊಡ್ಡ ಮಟ್ಟದಲ್ಲಿ ನಡೆದಿತ್ತು. ಈ ಚುನಾವಣೆ ದೇಶದ ಗಮನ ಸೆಳೆದಿತ್ತು.

ವಿದ್ಯಾವಂತನಾದರೂ ದರ್ಶನ್ ಪುಟ್ಟಣ್ಣಯ್ಯ ವರ್ತನೆ ಸರಿಯಲ್ಲ

ಶಾಸಕ ಸಿ.ಎಸ್. ಪುಟ್ಟರಾಜು ಅಸಮಾಧಾನ



ಮಂಡ್ಯ, ಮೇ 11– ರೈತ ಮುಖಂಡ, ಮಾಜಿ ಶಾಸಕ ದಿವಂಗತ ಕೆ.ಎಸ್.ಪುಟ್ಟಣ್ಣಯ್ಯ ಹಾಗೂ ನಾನು ಹಲವಾರು ವರ್ಷ ರಾಜಕೀಯ ಮಾಡಿದ್ದೇವೆ. ಪುಟ್ಟಣ್ಣಯ್ಯ ಅವರು ಗೆದ್ದರೂ, ಸೋತರೂ ನಡವಳಿಕೆಯಲ್ಲಿ ಎಂದೂ ಬದಲಾವಣೆಯಾಗಿರಲಿಲ್ಲ. ಆದರೆ ದರ್ಶನ್ ಪುಟ್ಟಣ್ಣಯ್ಯ ವಿದ್ಯಾವಂತರಾಗಿದ್ದು, ಈ ರೀತಿಯ ವರ್ತನೆ ಸರಿಯಲ್ಲ ಎಂದು ಮೇಲುಕೋಟೆಯ ಜೆಡಿಎಸ್ ಅಭ್ಯರ್ಥಿ ಸಿ.ಎಸ್. ಪುಟ್ಟರಾಜು ಅಸಮಾಧಾನ ವ್ಯಕ್ತಪಡಿಸಿದರು.

ನಿನ್ನೆ ನಾರಾಯಣಪುರ ಗ್ರಾಮದಲ್ಲಿ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷನ ಮೊಮ್ಮಗನನ್ನು ಕೊಲೆ ಪ್ರಕರಣದಲ್ಲಿ ಜೈಲಿಗೆ ಹೋಗಿದ್ದ ರಘು ಎಂಬಾತ ಹೊಡೆಯುತ್ತಿದ್ದ. ಹೆಣ್ಣು ಮಕ್ಕಳು ಅಳುತ್ತಿದ್ದರು. ಯಾರೂ ಬಿಡಿಸಲು ಆಗಿಲ್ಲ. ಆಗ ನಾನು, ನನ್ನ ಗನ್‌ಮ್ಯಾನ್ ರಮೇಶ್ ಹೋಗಿ ಆತನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದೇವೆ. ನಾನು ಯಾರ ಮೇಲೂ ಹಲ್ಲೆ ಮಾಡಿಲ್ಲ. ಆದರೆ, ಅದನ್ನೇ ನನ್ನ ವಿರುದ್ಧವೇ ವಿಡಿಯೋ ತಿರುಚಿ ಎಲ್ಲೆಡೆ ವೈರಲ್ ಮಾಡಲಾಗಿದೆ ಎಂದು ಆರೋಪಿಸಿದರು.

ಅದೇ ರೀತಿ ಬೇವುಕಲ್ಲು ಗ್ರಾಮದಲ್ಲಿ ಹಿರಿಯ ನಾಗರಿಕರೊಬ್ಬರ ಕೊಲೆ ಪ್ರಕರಣ ಆರೋಪಿ ಕೂಡ ಇದೇ ರೀತಿ ರೈತಸಂಘದ ಬೆಂಬಲಿಗನಾಗಿ ಕಾರ್ಯಕರ್ತರೊಂದಿಗೆ ಕೆಟ್ಟದ್ದಾಗಿ ನಡೆದುಕೊಂಡಿದ್ದಾನೆ. ಇಂಥವರನ್ನು ಜೊತೆಯಲ್ಲಿಟ್ಟುಕೊಂಡು ದರ್ಶನ್ ಪುಟ್ಟಣ್ಣಯ್ಯ ರಾಜಕೀಯ ಮಾಡುತ್ತಿರುವುದು ಸರಿಯಲ್ಲ. ಎಚ್.ಮಲ್ಲಿಗೆರೆಯಲ್ಲಿ ಗೊಂದಲ ಉಂಟಾಗಿದೆ. ನಂತರ ಸಂಜೆ 5.30ರಲ್ಲಿ ಚಿನಕುರಳಿಗೆ ದರ್ಶನ್ ಆಗಮಿಸಿದ್ದಾರೆ. ಆಗ ಕಾಂಗ್ರೆಸ್‌ನ ತಾಲೂಕು ಅಧ್ಯಕ್ಷ ರಮೇಶ್ ಎಂಬುವರು ದರ್ಶನ್ ಪುಟ್ಟಣ್ಣಯ್ಯ ಅವರನ್ನು ಜೆಡಿಎಸ್ ಕಾರ್ಯಕರ್ತರು ಹಿಡಿದುಕೊಂಡಿದ್ದಾರೆ ಎಂದು ಸುಳ್ಳು ಸುದ್ದಿ ಹಬ್ಬಿಸಿ 500ಕ್ಕೂ ಹೆಚ್ಚು ಮಂದಿಯನ್ನು ಕರೆಸಿದ್ದಾರೆ. ಬಳಿಕ ಕ್ಯಾತನಹಳ್ಳಿಯಲ್ಲಿ ನಮ್ಮ ಜೆಡಿಎಸ್ ಕಾರ್ಯಕರ್ತರ ಮನೆ ಮುಂದೆ ಹೋಗಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದು ಆರೋಪಿಸಿದರು.


ನಾನು ಎಸ್‌ಎಸ್‌ಎಲ್‌ಸಿ ಓದಿದ್ದೇನೆ. ಆದರೆ ದರ್ಶನ್ ಪುಟ್ಟಣ್ಣಯ್ಯ ಅಮೆರಿಕಾದಲ್ಲಿ ಓದಿ, ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ವಿದ್ಯಾವಂತರಾಗಿರುವ ನೀವು ಇಂಥ ರೌಡಿಗಳೊಂದಿಗೆ ಸೇರಿ ಕ್ಷೇತ್ರದಲ್ಲಿ ಗೊಂದಲ ಸೃಷ್ಟಿಸುವುದು ಸರಿಯಲ್ಲ. ಇದು ನಿಮಗೆ ಶೋಭೆ ತರುವುದಿಲ್ಲ. ದಿಕ್ಕು ತಪ್ಪಿಸುವವರ ಬಗ್ಗೆ ಕಿವಿಗೊಡಬಾರದು. ಕ್ಷೇತ್ರದ ಜನ ನಮ್ಮ ಹಣೆಬರಹ ಬರೆದಿದ್ದಾರೆ. 13ರಂದು ಫಲಿತಾಂಶ ಬರಲಿದೆ. ಆದರೆ ನಾವು–ನೀವು ಎಲ್ಲೋ ಇರುತ್ತೇವೆ. ಗ್ರಾಮದಲ್ಲಿ ಈ ರೀತಿಯ ಗಲಾಟೆ, ಗೊಂದಲ ಸೃಷ್ಟಿಸುವುದರಿಂದ ಒಗ್ಗಟ್ಟು ಹೊಡೆದಂತಾಗಲಿದೆ. ಬಹಿರಂಗ ವೇದಿಕೆಗೆ ಬನ್ನಿ, ನಮ್ಮ ನಡವಳಿಕೆಯಲ್ಲಿ ಏನಾದರೂ ತಪ್ಪಿದ್ದರೆ ಹೇಳಿ, ತಿದ್ದಿಕೊಳ್ಳುತ್ತೇವೆ. ಆದರೆ ಇಂಥ ಕೆಲಸಗಳನ್ನು ನಿಲ್ಲಿಸಬೇಕು ಎಂದು ಕಿವಿಮಾತು ಹೇಳಿದರು.

ನಿನ್ನೆಯ ಈ ರೀತಿಯ ಘಟನೆಗಳು ನಡೆಯಲು ಪೊಲೀಸರ ವೈಫಲ್ಯವೇ ಕಾರಣವಾಗಿದೆ. ಹಲವು ಬಾರಿ ರೌಡಿಶೀಟರ್‌ಗಳನ್ನು ಗಡಿಪಾರು ಮಾಡುವಂತೆ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ತಿಳಿಸಿದ್ದೆ. ಆದರೂ ಕ್ರಮ ವಹಿಸಿಲ್ಲ. ಇದರ ಬಗ್ಗೆ ಎಸ್ಪಿ ಹಾಗೂ ಚುನಾವಣಾಧಿಕಾರಿಗೆ ದೂರು ಸಲ್ಲಿಸುತ್ತೇನೆ. ಅಲ್ಲದೆ, ವಿಡಿಯೋ ತಿರುಚಿರುವ ಬಗ್ಗೆಯೂ ದೂರು ಸಲ್ಲಿಸಲಾಗುವುದು ಎಂದು ತಿಳಿಸಿದರು.

ಮಂಡ್ಯ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಕೆ.ಎಸ್.ವಿಜಯಾನಂದ ತಮ್ಮ ಬಗ್ಗೆ ಮಾಡಿರುವ ಆರೋಪಗಳ ಬಗ್ಗೆ ಪ್ರತಿಕ್ರಿಯಿಸಿದ ಪುಟ್ಟರಾಜು ಅವರು, ವಿಜಯಾನಂದ ನಾಲಿಗೆ ಬಿಗಿ ಹಿಡಿದು ಮಾತನಾಡಲಿ. ಅವರ ತಾತ ಕೆ.ವಿ.ಶಂಕರಗೌಡರನ್ನು ಹತ್ತಿರದಿಂದ ನಾನು ನೋಡಿದ್ದೇನೆ. ಅವರ ತಂದೆ ಸಚ್ಚಿದಾನಂದ ನನ್ನ ಒಡನಾಡಿಯಾಗಿದ್ದರು. ಮೇಲುಕೋಟೆ ಕ್ಷೇತ್ರದಲ್ಲಿ ಶಂಕರಗೌಡರ ಅಭಿಮಾನಿಗಳು ನನ್ನ ಬೆನ್ನಿಗೆ ಇದ್ದಾರೆ. ವಿಜಯಾನಂದ ಇದೀಗ ರಾಜಕೀಯಕ್ಕೆ ಬಂದಿರುವವರು. ಹಿರಿಯರ ಬಗ್ಗೆ ಗೌರವದಿಂದ ಮಾತನಾಡಬೇಕು. ಅವರಿಗೆ ಟಿಕೆಟ್ ತಪ್ಪಲು ಅವರೇ ಕಾರಣ. ಕ್ಷೇತ್ರದಲ್ಲಿ ಯಾವುದೇ ಸಂಘಟನೆ ಮಾಡಿರಲಿಲ್ಲ. ಮಂಡ್ಯ ಕ್ಷೇತ್ರದಲ್ಲಿ ಜೆಡಿಎಸ್ ಸಂಘಟನೆ ಮಾಡಿದ್ದರೆ ಅದು ಬಿ.ಆರ್.ರಾಮಚಂದ್ರ. ಮಂಡ್ಯದಲ್ಲಿ ಜೆಡಿಎಸ್ ಉಳಿಯಲು ರಾಮಚಂದ್ರ ಕಾರಣ ಎಂದರು.

ಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಡಿ.ರಮೇಶ್, ಜಿಪಂ ಮಾಜಿ ಸದಸ್ಯ ಅಣ್ಣೇಗೌಡ ಇದ್ದರು.

ಮತ ಎಣಿಕೆ: ನಾಳೆ ನಿಷೇಧಾಜ್ಞೆ



ಮಂಡ್ಯ, ಮೇ 11– ವಿಧಾನಸಭಾ ಚುನಾವಣೆಯ ಮತದಾನ ಪ್ರಕ್ರಿಯೆ ಮುಗಿದಿದ್ದು, ಮೇ 13 ರಂದು ಮತ ಎಣಿಕೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಮೇ 13 ರಂದು ಬೆಳಗ್ಗೆ 6 ಗಂಟೆಯಿಂದ ಮೇ 14 ರ ಬೆಳಗ್ಗೆ 6 ಗಂಟೆವರೆಗೆ 144ರ ಅಡಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಡಾ.ಹೆಚ್.ಎನ್. ಗೋಪಾಲಕೃಷ್ಣ ಆದೇಶ ಹೊರಡಿಸಿದ್ದಾರೆ.

ಗೆದ್ದ ಅಭ್ಯರ್ಥಿಗಳ ಬೆಂಬಲಿಗರು ವಿಜಯೋತ್ಸವ ಆಚರಿಸುವ ಸಾಧ್ಯತೆಗಳಿದ್ದು, ಈ ವೇಳೆ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆಯಾಗುವ ಸಾಧ್ಯತೆಯೂ ಇರುವುದರಿಂದ ಮೇ 13 ರ ಬೆಳಗ್ಗೆ 6 ಗಂಟೆಯಿಂದ ಮೇ 14 ರ ಬೆಳಗ್ಗೆ 6 ಗಂಟೆಯವರೆಗೆ ಯಾವುದೇ ಮೆರವಣಿಗೆ ಮಾಡುವುದನ್ನು, ಮಾರಕಾಸ್ತ್ರಗಳನ್ನು ಹಿಡಿದು ತಿರುಗಾಡುವುದನ್ನು ತಡೆ ಗಟ್ಟಲು ಸಿ.ಆರ್.ಪಿ.ಸಿ ಕಲಂ 144ರ ಅನ್ವಯ ಮಂಡ್ಯ ಜಿಲ್ಲೆಯಾದ್ಯಂತ ನಿಷೇಧಾಜ್ಞೆಯನ್ನು ಜಾರಿಗೊಳಿಸಿ ಆದೇಶಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಹೆಚ್.ಎನ್. ಗೋಪಾಲಕೃಷ್ಣ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಕವಳ್ಳಿ ನಿಂಗೇಗೌಡ ನಿಧನ



ಕೆ.ಆರ್.ಪೇಟೆ, ಮೇ 11– ತಾಲೂಕಿನ ಕಸಬಾ ಹೋಬಳಿಯ ಮಾಕವಳ್ಳಿ ಗ್ರಾಮದ ಹಿರಿಯ ಮುಖಂಡ ನಿಂಗೇಗೌಡ (65) ಅವರು ಬುಧವಾರ ಸಂಜೆ ನಿಧನರಾದರು. ಮೃತರ ಅಂತ್ಯಕ್ರಿಯೆಯು ಇಂದು (ಗುರುವಾರ) ಮಾಕವಳ್ಳಿ ಗ್ರಾಮದ ಜಮೀನಿನಲ್ಲಿ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜೆಡಿಎಸ್ ಅಭ್ಯರ್ಥಿ ಎಚ್.ಟಿ. ಮಂಜು, ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕ ಡಾಲು ರವಿ, ಎಂಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೊಸಹೊಳಲು ಅಶೋಕ್, ಜೆಡಿಎಸ್ ಮುಖಂಡ ಕಾರಿಗನಹಳ್ಳಿ ಕುಮಾರ್, ಮಾಕವಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಬಲರಾಮೇಗೌಡ, ಗ್ರಾಪಂ ಉಪಾಧ್ಯಕ್ಷ ಕಾಯಿ ಮಂಜೇಗೌಡ ಸೇರಿದಂತೆ ಅನೇಕ ಗಣ್ಯರು ಇವರ ನಿಧನಕ್ಕೆ ಸಂತಾಪ ಸೂಚಿಸಿದ್ದರು.

ಜೈಸ್ವಾಲ್ ಅಬ್ಬರಕ್ಕೆ ಕೋಲ್ಕತ್ತಾ ಧೂಳೀಪಟ: ರಾಜಸ್ಥಾನಕ್ಕೆ 9 ವಿಕೆಟ್‌ಗಳ ಭರ್ಜರಿ ಜಯ



ಕೋಲ್ಕತ್ತಾ, ಮೇ 11– ಯುವ ಆಟಗಾರ ಯಶಸ್ವಿ ಜೈಸ್ವಾಲ್ ದಾಖಲೆಯ ವೇಗದ ಅರ್ಧಶತಕ ಮತ್ತು ನಾಯಕ ಸಂಜು ಸ್ಯಾಮ್ಸನ್ ಅವರ ಸ್ಫೋಟಕ ಆಟದಿಂದಾಗಿ ರಾಜಾಸ್ಥಾನ ರಾಯಲ್ಸ್ ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ 9 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

ಗೆಲ್ಲಲು 150 ರನ್‌ಗಳ ಗುರಿಯನ್ನು ಪಡೆದ ರಾಜಸ್ಥಾನ 13.1 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 151 ರನ್ ಗಳಿಸುವ ಮೂಲಕ ಗೆಲುವಿನ ನಗೆ ಬೀರಿತು.

21 ವರ್ಷದ ಯುವ ಆಟಗಾರ ಜೈಸ್ವಾಲ್ ಕೇವಲ 13 ಎಸೆತಗಳಲ್ಲಿ 50 ರನ್ (6 ಬೌಂಡರಿ, 3 ಸಿಕ್ಸ್) ಚಚ್ಚುವ ಮೂಲಕ ಕೆಎಲ್ ರಾಹುಲ್ ಅವರ ಹೆಸರಿನಲ್ಲಿದ್ದ ವೇಗದ ಅರ್ಧಶತಕ ದಾಖಲೆಯನ್ನು ಮುರಿದರು. ಈ ಮೊದಲು 2018ರ ಆವೃತ್ತಿಯಲ್ಲಿ ರಾಹುಲ್14 ಎಸೆತಗಳಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಅರ್ಧಶತಕ ಸಿಡಿಸಿದ್ದರು.

ಮೊದಲ ವಿಕೆಟಿಗೆ 30 ರನ್ ಬಂದರೂ ಬಟ್ಲರ್ ಕೊಡುಗೆ ಶೂನ್ಯ. ಮುರಿಯದ ಎರಡನೇ ವಿಕೆಟಿಗೆ ಜೈಸ್ವಾಲ್ ಮತ್ತು ಸಂಜು ಸ್ಯಾಮ್ಸನ್ 69 ಎಸೆತಗಳಲ್ಲಿ 121 ರನ್ ಜೊತೆಯಾಟವಾಡಿದರು.

ಅಂತಿಮವಾಗಿ ಜೈಸ್ವಾಲ್ ಔಟಾಗದೇ 98 ರನ್ (47 ಎಸೆತ, 12 ಬೌಂಡರಿ, 5 ಸಿಕ್ಸರ್), ಸಂಜು ಸ್ಯಾಮ್ಸನ್ ಔಟಾಗದೇ 48 ರನ್ (29 ಎಸೆತ, 2 ಬೌಂಡರಿ, 2 ಸಿಕ್ಸರ್) ಹೊಡೆದು ತಂಡಕ್ಕೆ ಗೆಲುವು ತಂದುಕೊಟ್ಟರು. 16 ಎಸೆತಗಳಲ್ಲಿ ರಾಜಸ್ಥಾನದ ಮೊದಲ 50 ರನ್ ಬಂದಿದ್ದರೆ 49 ಎಸೆತಗಳಲ್ಲಿ 100 ರನ್ ಗಡಿ ದಾಟಿತ್ತು. ಪಂದ್ಯವನ್ನು ಗೆಲ್ಲುವ ಮೂಲಕ 5ನೇ ಸ್ಥಾನದಲ್ಲಿದ್ದ ರಾಜಸ್ಥಾನ 3ನೇ ಸ್ಥಾನಕ್ಕೆ ಜಿಗಿದರೆ 6ನೇ ಸ್ಥಾನದಲ್ಲಿದ್ದ ಕೊಲ್ಕತ್ತಾ 7ನೇ ಸ್ಥಾನಕ್ಕೆ ಜಾರಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೊಲ್ಕತ್ತಾ ಆರಂಭದಿಂದಲೇ ವಿಕೆಟ್ ಕಳೆದುಕೊಳ್ಳುತ್ತಾ ಸಾಗಿತು. ವೆಂಕಟೇಶ್ ಅಯ್ಯರ್ 57 ರನ್(42 ಎಸೆತ, 2 ಬೌಂಡರಿ, 4 ಸಿಕ್ಸರ್) ನಾಯಕ ನಿತೀಶ್ ರಾಣಾ 22 ರನ್ ಹೊಡೆದು ಸ್ವಲ್ಪ ಪ್ರತಿರೋಧ ತೋರಿದರು. ಚಹಲ್ 25 ರನ್ ನೀಡಿ 4 ವಿಕೆಟ್ ಕಿತ್ತರೆ ಬೌಲ್ಟ್ 2 ವಿಕೆಟ್, ಸಂದೀಪ್ ಶರ್ಮಾ ಮತ್ತು ಆಸೀಫ್ ತಲಾ ಒಂದೊಂದು ವಿಕೆಟ್ ಪಡೆದರು.

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಗುಜರಾತ್	11	8	3	0	16
ಸಿಎಸ್‌ಕೆ	12	7	4	1	15
ರಾಜಸ್ಥಾನ್	12	6	6	0	12
ಮುಂಬೈ	11	6	5	0	12
ಲಕ್ನೋ	11	5	5	1	11
ಆರ್‌ಸಿಬಿ	11	5	6	0	10
ಕೋಲ್ಕತ್ತಾ	12	5	7	0	10
ಪಂಜಾಬ್	11	5	6	0	10
ಎಸ್‌ಆರ್‌ಹೆಚ್	10	4	6	0	08
ಡೆಲ್ಲಿ	11	4	7	0	08

ಠಾಕ್ರೆ ಸರ್ಕಾರ ಪುನಃ ಸ್ಥಾಪಿಸಲು ಸಾಧ್ಯವಿಲ್ಲ: ಸುಪ್ರೀಂಕೋರ್ಟ್

ಶಿವಸೇನೆ V/S ಶಿವಸೇನೆ

ನವದೆಹಲಿ, ಮೇ 11– ಮಹಾರಾಷ್ಟ್ರದಲ್ಲಿ ಉದ್ಧವ್ ಠಾಕ್ರೆ ಬಣದ ಮಹಾರಾಷ್ಟ್ರ ವಿಕಾಸ ಅಘಾಡಿ ಸರ್ಕಾರದ ಪುನಃಸ್ಥಾಪನೆ ಸಾಧ್ಯವಿಲ್ಲ ಎಂದು ಸುಪ್ರೀಂಕೋರ್ಟ್ ಗುರುವಾರ ಹೇಳಿದೆ.

ಮಹಾರಾಷ್ಟ್ರ ಮೂಲ ಶಿವಸೇನೆಯಿಂದ ಬಂಡಾಯವೆದ್ದು ಏಕನಾಥ ಶಿಂಧೆ ಹಿಂದೆ ಹೋಗಿದ್ದ 16 ಮಂದಿ ಶಾಸಕರನ್ನು ಅನರ್ಹಗೊಳಿಸಬೇಕು ಎಂದು ಕೋರಿ ಮಾಜಿ ಸಿಎಂ ಉದ್ಧವ್ ಠಾಕ್ರೆ ಬಣ ಸಲ್ಲಿಸಿದ್ದ ಅರ್ಜಿ ಸೇರಿದಂತೆ 2 ತೀರ್ಪುಗಳನ್ನು ಸುಪ್ರೀಂಕೋರ್ಟ್ ಇಂದು ಪ್ರಕಟಿಸಿದೆ.



ಉದ್ಧವ್ ಠಾಕ್ರೆ ವಿಶ್ವಾಸಮತ ಸಾಬೀತುಪಡಿಸದೆ ರಾಜೀನಾಮೆ ನೀಡಿದ್ದರಿಂದ ಸರ್ಕಾರವನ್ನು ಮರುಸ್ಥಾಪಿಸಲಾಗದು ಎಂದು ಹೇಳಿದೆ. ಉದ್ಧವ್ ಠಾಕ್ರೆ ರಾಜೀನಾಮೆ ನೀಡಿದ್ದರಿಂದ ಏಕನಾಥ ಶಿಂಧೆ ನೇತೃತ್ವದ ಬಣವನ್ನು ಸರ್ಕಾರ ರಚನೆಗೆ ಆಹ್ವಾನಿಸಿರುವ ರಾಜ್ಯಪಾಲರ ಕ್ರಮ ಸರಿಯಾಗಿತ್ತು. ಆದರೆ ಠಾಕ್ರೆ ಸರ್ಕಾರ ಬಹುಮತ ಕಳೆದುಕೊಂಡಿದೆ ಎಂದು ಭಾವಿಸಿ ಸದನದಲ್ಲಿ ಬಹುಮತ ಸಾಬೀತುಪಡಿಸಲು ಆದೇಶಿಸಿದ್ದೂ ಸರಿಯಾದ ನಿರ್ಧಾರವಲ್ಲ ಎಂದು ರಾಜ್ಯಪಾಲ ರನ್ನು ತರಾಟೆಗೆ ತೆಗೆದುಕೊಂಡಿದೆ. ಠಾಕ್ರೆ ಸರ್ಕಾರದ ಬಹುಮತವನ್ನು ರಾಜ್ಯಪಾಲರು ಅನುಮಾನಿಸುವುದಕ್ಕೆ ಸಾಧ್ಯವಿರಲಿಲ್ಲ. ಕೆಲವು ಶಾಸಕರು ಅತೃಪ್ತಿ ಹೊಂದಿದ್ದಾರೆ ಎನ್ನುವುದಷ್ಟೇ ವಿಶ್ವಾಸಮತ ಯಾಚನೆಗೆ ಸೂಚಿಸಲು ಸಾಕಾಗುವುದಿಲ್ಲ, ಸದಸ್ಯರು ಬೆಂಬಲವನ್ನು ಹಿಂತೆಗೆದುಕೊಂಡಿದ್ದಾರೆ ಎನ್ನುವುದನ್ನು ಸೂಚಿಸುವ ಯಾವುದೇ ದಾಖಲೆಗಳಿರಲಿಲ್ಲ. ಉದ್ಧವ್ ಠಾಕ್ರೆ ಸರ್ಕಾರದ ಕೆಲವು ನೀತಿ ನಿರ್ಧಾರಗಳೊಂದಿಗೆ ಅವರು ಸಹಮತ ಹೊಂದಿರ ಲಿಲ್ಲ ಎನ್ನುವುದನ್ನಷ್ಟೇ ಲಭ್ಯ ಸಂವಹನವು ತೋರಿಸುತ್ತದೆ. ಅವರು (ಶಿಂಧೆ ಬಣ) ಈ ವಿಚಾರವಾಗಿ ಚರ್ಚಿಸುತ್ತಾರೆಯೇ ಅಥವಾ ಬೇರೆ ಪಕ್ಷದೊಂದಿಗೆ ವಿಲೀನ ಗೊಳ್ಳುತ್ತಾರೆಯೇ ಎನ್ನುವುದು ಸ್ಪಷ್ಟವಾಗಿರಲಿಲ್ಲ. ಹಾಗಾಗಿ ಉದ್ಧವ್ ಠಾಕ್ರೆ ಅವರು ಸದನದಲ್ಲಿ ಬಹುಮತ ಕಳೆದುಕೊಂಡಿದ್ದಾರೆ ಎಂದು ರಾಜ್ಯಪಾಲರು ನಿರ್ಧರಿಸುವಲ್ಲಿ ತಪ್ಪೆಸಗಿದ್ದಾರೆ ಎಂದು ನ್ಯಾಯಾಲಯ ಹೇಳಿತು.

ರಾಜ್ಯಪಾಲರು ವಸ್ತುನಿಷ್ಠ ಮಾನದಂಡಗಳನ್ನು ಬಳಸಬೇಕು, ವ್ಯಕ್ತಿನಿಷ್ಠ ತೃಪ್ತಿಯನ್ನಲ್ಲ. ಶಾಸಕರು ಸರ್ಕಾರ ತೊರೆಯಲು ಬಯಸಿದ್ದರು ಎಂದು ಒಂದು ವೇಳೆ ಭಾವಿಸಿದರೂ, ಅದು ಕೇವಲ ಅತೃಪ್ತಿಯನ್ನು ಮಾತ್ರ ಬಿಂಬಿಸುತ್ತದೆ. ಅರ್ಜಿದಾರರು ಯಥಾಸ್ಥಿತಿಯನ್ನು ಕಾಪಾಡಿಕೊಳ್ಳಲು ಆದೇಶಿಸುವಂತೆ ಒತ್ತಾಯಿಸಿ ದ್ದಾರೆ. ಠಾಕ್ರೆ ರಾಜೀನಾಮೆ ನೀಡದಿರುತ್ತಿದ್ದರೆ ಅವರ ನೇತೃತ್ವದ ಸರ್ಕಾರವನ್ನು ಮರು ಸ್ಥಾಪನೆಗೊಳಿಸಬಹುದಿತ್ತು. ಈ ಮೂಲಕ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳಲು ಆದೇಶಿಸಬಹುದಿತ್ತು. ಆದರೆ, ಠಾಕ್ರೆ ವಿಶ್ವಾಸ ಮತ ಪರೀಕ್ಷೆಯನ್ನೂ ಎದುರಿಸದೆಯೇ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಹೀಗಾಗಿ ಠಾಕ್ರೆ ಸರ್ಕಾರ ಪುನಃಸ್ಥಾಪನೆ ಸಾಧ್ಯವಿಲ್ಲ ಎಂದು ಹೇಳಿತು.

ಮಾಜಿ ಸಿಜೆಐ ರಂಜನ್ ಗೊಗೊಯ್, ಪ್ರಕಾಶಕರ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲು



ಗುವಾಹಟಿ, ಮೇ 11– ರಾಜ್ಯಸಭಾ ಸದಸ್ಯ ಮತ್ತು ಭಾರತದ ಮಾಜಿ ಮುಖ್ಯ ನ್ಯಾಯಮೂರ್ತಿ (ಸಿಜೆಐ) ರಂಜನ್ ಗೊಗೊಯ್ ವಿರುದ್ಧ ಒಂದು ಕೋಟಿ ರೂಪಾಯಿ ಮಾನನಷ್ಟ ಮೊಕದ್ದಮೆ ಮತ್ತು ಅವರ ಆತ್ಮಕಥೆಗೆ ತಡೆಯಾಜ್ಞೆ ಕೋರಿ ಅಸ್ಸಾಂ ಲೋಕೋಪಯೋಗಿ (ಎಪಿಡಬ್ಲ್ಯು) ಅಧ್ಯಕ್ಷ ಅಭಿಜೀತ್ ಶರ್ಮಾ ಅವರು ಇಲ್ಲಿನ ಸ್ಥಳೀಯ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದಾರೆ.

ಗೊಗೊಯ್ ಮತ್ತು ರೂಪಾ ಪಬ್ಲಿಕೇಷನ್ಸ್ ವಿರುದ್ಧ ಶರ್ಮಾ ಅವರು ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ ಮತ್ತು ಅವರ ಆತ್ಮಚರಿತ್ರೆ 'ಜಸ್ಟೀಸ್ ಫಾರ್ ಎ ಜಡ್ಜ್' ಪುಸ್ತಕದಲ್ಲಿ ತಮ್ಮ ವಿರುದ್ಧ ತಪ್ಪುದಾರಿಗೆಳೆಯುವ ಮತ್ತು ಮಾನಹಾನಿಕರ ಹೇಳಿಕೆಗಳನ್ನು ಪ್ರಕಟಿಸಿದ್ದಾರೆ ಎಂದು ದೂರಿದ್ದಾರೆ.

ಗೊಗೊಯ್ ಮತ್ತು ಅವರ ಪ್ರಕಾಶಕರು ತಮ್ಮ ವಿರುದ್ಧ ಅವಹೇಳನಕಾರಿ ಹೇಳಿಕೆಗಳು ಮತ್ತು ಆರೋಪಗಳನ್ನು ಹೊಂದಿರುವ ಯಾವುದೇ ಪುಸ್ತಕವನ್ನು ಮುಂದೆ ಪ್ರಕಟಿಸುವುದು, ವಿತರಿಸುವುದು ಅಥವಾ ಮಾರಾಟ ಮಾಡುವುದನ್ನು ತಡೆಯುವ ಮಧ್ಯಂತರ ತಡೆಯಾಜ್ಞೆಯನ್ನು ಕೋರಿ ಅವರು ಅರ್ಜಿಯನ್ನು ಸಲ್ಲಿಸಿದ್ದಾರೆ.

ಇಲ್ಲಿನ ಕಾಮ್ರೂಪ್ ಮೆಟ್ರೋ ಜಿಲ್ಲಾ ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆ ಮತ್ತು ತಡೆಯಾಜ್ಞೆಗೆ ಅರ್ಜಿ ಸಲ್ಲಿಸಲಾಗಿದೆ. ಮಂಗಳವಾರ ವಿಚಾರಣೆ ನಡೆಸಿದ ನ್ಯಾಯಾಲಯವು, ಅರ್ಜಿ ಮತ್ತು ದಾಖಲೆಗಳನ್ನು ಪರಿಶೀಲಿಸಿದ ನಂತರ ಬುಧವಾರದ ತನ್ನ ತೀರ್ಪಿನಲ್ಲಿ 'ಕಾನೂನು ಮತ್ತು ತೀರ್ಪು ನೀಡಬೇಕಾದ ಸಂಗತಿಗಳೆರಡರಲ್ಲೂ ಗಣನೀಯ ಪ್ರಶ್ನೆ ಇದೆ' ಎಂದು ಕಂಡುಬಂದಿದೆ ಎಂದು ಹೇಳಿದೆ. ಅರ್ಜಿದಾರರು ಮತ್ತು ಪ್ರತಿವಾದಿಗಳಿಬ್ಬರಿಗೂ ಸಮನ್ಸ್ ಜಾರಿಗೊಳಿಸಲು ಸೂಚಿಸಿದ ನ್ಯಾಯಾಲಯವು ಮುಂದಿನ ವಿಚಾರಣೆಯನ್ನು ಜೂನ್ 3ಕ್ಕೆ ಮುಂದೂಡಿತು.

ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆ

ಮೈಸೂರಿನ ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯ ಸಾರ್ವಜನಿಕರಿಗೆ ಮುಕ್ತ

● ನೂರಾರು ವಿದ್ಯಾರ್ಥಿಗಳಿಂದ ವಸ್ತುಪ್ರದರ್ಶನ ವೀಕ್ಷಣೆ, ಇಸ್ರೋದ ಗಗನಯಾನ ಬಾಹ್ಯಾಕಾಶಕ್ಕೆ ಸಿದ್ಧಪಡಿಸಿದ 45 ಆಹಾರ ಪದಾರ್ಥಗಳ ಅನಾವರಣ
● ಡಿಎಫ್‌ಆರ್‌ಎಲ್‌ನಲ್ಲಿ ಗುರುವಾರ ಸಾರ್ವಜನಿಕರಿಗೆ ಮುಕ್ತ ಪ್ರವೇಶ ● ಕುತೂಹಲದಿಂದ ಆಹಾರ ಪದಾರ್ಥಗಳ ವಸ್ತುಪ್ರದರ್ಶನ ವೀಕ್ಷಿಸಿದ ವಿದ್ಯಾರ್ಥಿಗಳು



ಮೈಸೂರು, ಮೇ 11(ಆರ್‌ಕೆ)–ಮೈಸೂರಿನ ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯ (ಡಿಎಫ್‌ಆರ್‌ಎಲ್)ದಲ್ಲಿ ಇಂದು ರಾಷ್ಟ್ರೀಯ ತಂತ್ರಜ್ಞಾನ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆ (ನ್ಯಾಷನಲ್ ಟೆಕ್ನಾಲಜಿ ಡೇ) ಅಂಗವಾಗಿ ಇಂದು ಡಿಎಫ್‌ಆರ್‌ಎಲ್ ಆವರಣದಲ್ಲಿ ಮುಕ್ತ ದಿನ (Open Day) ವನ್ನಾಗಿ ಆಚರಿಸಲಾಯಿತು. ನೂರಾರು ಮಂದಿ ವಿದ್ಯಾರ್ಥಿಗಳು ಆಗಮಿಸಿ ರಕ್ಷಣಾ ಆಹಾರ ಪದಾರ್ಥಗಳನ್ನು ವೀಕ್ಷಿಸಿದರು. ಸಸ್ಯಾಹಾರ ಮತ್ತು ಶಾಖಾಹಾರಿ ಪದಾರ್ಥಗಳನ್ನು ಇಸ್ರೋದ ಬೇಡಿಕೆಗನುಗುಣವಾಗಿ ಸ್ಪೇಸ್ ಮಿಷನ್‌ಗೆ ಪೂರೈಸುತ್ತಿದ್ದು, ಅದಕ್ಕಾಗಿ ಸಿದ್ಧಪಡಿಸಿರುವ ಆಹಾರ ಪದಾರ್ಥಗಳ ವಸ್ತು ಪ್ರದರ್ಶನವನ್ನು ಈ ಸಂದರ್ಭ ಏರ್ಪಡಿಸಲಾಗಿತ್ತು.

ಆಹಾರ ಸಂಸ್ಕರಣೆ ಮತ್ತು ಪ್ಯಾಕ್ ಮಾಡಲು ಲಭ್ಯವಿರುವ ನೂತನ ತಂತ್ರಜ್ಞಾನ ಬಳಸುತ್ತಿರುವ ಬಗ್ಗೆ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಲಾಯಿತು. ಈ ಸಂದರ್ಭ ಸುದ್ದಿಗಾರರಿಗೆ ಮಾಹಿತಿ ನೀಡಿದ ಡಿಎಫ್‌ಆರ್‌ಎಲ್ ನಿರ್ದೇಶಕ ಡಾ. ಎ.ಡಿ. ಸೆಮ್ಮೊಲ್ ಅವರು, ನಮ್ಮ ಆಹಾರ ರುಚಿ ಹಾಗೂ ಗುಣಮಟ್ಟದ್ದಾಗಿದೆ ಎಂದು ಇಸ್ರೋ ಅಭಿಪ್ರಾಯಪಟ್ಟಿದೆ ಎಂದರು.

ಗಗನಯಾನಕ್ಕೆ ತಯಾರಿಸಿರುವ ಆಹಾರದ ಬಗ್ಗೆ ವಿವರಿಸಿದ ಡಿಎಫ್‌ಆರ್‌ಎಲ್ ವಿಜ್ಞಾನಿ ಡಾ. ದೇವಕುಮಾರ್, ಬಾಹ್ಯಾಕಾಶಕ್ಕಾಗಿ ತಯಾರಿಸುತ್ತಿರುವ ಆಹಾರದ ಬಗ್ಗೆ ಸಂಸ್ಥೆ ಅತ್ಯಂತ ಹೆಚ್ಚು ಗಮನ ಹರಿಸಿದೆ. ಅವುಗಳ ಪ್ಯಾಕಿಂಗ್ ವಿಷಯದಲ್ಲೂ ಹೆಚ್ಚು ಮುತುವರ್ಜಿ ವಹಿಸಲಾಗಿದೆ. ಚಪಾತಿ ರೋಲ್, ಸಾಂಬಾರ್, ಚವಾಲ್, ಪೊಟೆಟೋ ಪರೋಟ, ಚಿಕ್ಕಿ, ಕಾದಿ ಚವಾಲ್ ಮೂಂಗ್‌ದಾಲ್ಹಲ್ವ, ಕಾಸಿಯೋ, ಸೂಜಿ ಹಲ್ವ, ತರಕಾರಿ ಬಿರಿಯಾನಿ, ಚಿಕನ್ ಬಿರಿಯಾನಿ, ಚಿಕನ್ ಪಲಾವ್‌ನಂತಹ ಆಹಾರಗಳನ್ನು ಪೂರೈಸಲಾಗುತ್ತಿದೆ ಎಂದರು.

ಮಿಲೆಟ್ ನಿಪ್ಪಟ್ಟು ಮಿಕ್ಸ್, ಮಿಲೆಟ್ ಆದ ಮಿಕ್ಸ್, ಮಿಲೆಟ್ ಸೀಮಿಕ್ಸ್, ಮಿಲೆಟ್ ರಾಗಿ ಮುದ್ದೆ ಮಿಕ್ಸ್, ಮಿಲೆಟ್ ಚಪಾತಿ ಮಿಕ್ಸ್, ಮಿಲೆಟ್ ಫ್ಲೇಕ್ಸ್, ಮಿಲೆಟ್ ಇಡ್ಲಿ ಮಿಕ್ಸ್, ಮಿಲೆಟ್ ದೋಸಾ ಮಿಕ್ಸ್, ಮಲ್ಟಿ ಮಿಲೆಟ್ ಚಿಕ್ಕಿ, ಸಿಹಿ ಮಿಲೆಟ್ ಮಿಕ್ಸ್ ಸೇರಿದಂತೆ ಹಲವು ಸಿದ್ಧ ಆಹಾರಗಳನ್ನು ಸಂಸ್ಥೆ ತಯಾರಿಸಿ ಸಂಸ್ಕರಿಸಿ ರಕ್ಷಣಾ ಪಡೆಗಳಿಗೆ ಪೂರೈಸುತ್ತಿದೆ.

ಇಂದು ಮುಕ್ತ ದಿನವಾಗಿದ್ದು, ವಸ್ತುಪ್ರದರ್ಶನದಲ್ಲಿ ಡಿಎಫ್‌ಆರ್‌ಎಲ್ ತಯಾರಿಸುವ ಇನ್ನಿತರ ಆಹಾರಗಳಾದ ಕಾಂಬೋ ಮೀಲ್ಸ್, ಚಿಕನ್ ಪಲಾವ್, ಚಿಕನ್ ಕರಿ, ರಜ್ಮಾ ಚವಾಲ್, ಮಿಲ್ಕ್ ಟೆಸ್ಟಿಂಗ್ ಕಿಟ್, ಬಯೋಡಿಗ್ರೇಡಬಲ್ ಕಟ್ಲರಿ ಹಾಗೂ ಹಲವು ಉತ್ಪನ್ನಗಳನ್ನು ಪ್ರದರ್ಶಿಸಲಾಗಿತ್ತು.

ಮೈಸೂರಿನ ಕೆ.ಆರ್.ಎಸ್. ರಸ್ತೆಯಲ್ಲಿರುವ ಸಿಎಫ್‌ಟಿಆರ್‌ಐ ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾ ಸಂಸ್ಥೆ (ಸಿಎಫ್‌ಟಿಆರ್‌ಐ) ಯಲ್ಲೂ ಇಂದು ರಾಷ್ಟ್ರೀಯ ತಂತ್ರಜ್ಞಾನ ದಿನ ಆಚರಿಸಲಾಯಿತು. ಎಕ್ಸೆಲ್‌ಸಾಫ್ಟ್ ಸಿಇಓ ಡಿ. ಸುಧನ್ವ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಸಿಎಫ್‌ಟಿಆರ್‌ಐ ನಿರ್ದೇಶಕರಾದ ಡಾ. ಶ್ರೀದೇವಿ ಅನ್ನಪೂರ್ಣ ಸಿಂಗ್ ಅವರು ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ ಸಂಸ್ಥೆಯ ಟಿಟಿಬಿಡಿ ವಿಭಾಗದ ಮುಖ್ಯಸ್ಥ ಡಾ. ಬಿ.ವಿ. ಸತ್ಯನಾರಾಯಣರಾವ್ ಪಾಲ್ಗೊಂಡಿದ್ದರು.

ಮೈಸೂರು ಮಿತ್ರ

ನಾಳೆ ಮೈಸೂರು ಮಹಾರಾಣಿ ವಾಣಿಜ್ಯ, ಮ್ಯಾನೇಜ್‌ಮೆಂಟ್ ಕಾಲೇಜಲ್ಲಿ ಮತ ಎಣಿಕೆ: ವಾಹನ ಸಂಚಾರ ನಿರ್ಬಂಧ

ಬದಲಿ ಮಾರ್ಗ ನಿಗದಿಪಡಿಸಿ ಮೈಸೂರು ಪೊಲೀಸ್ ಆಯುಕ್ತರ ಆದೇಶ

ಮೈಸೂರು, ಮೇ 11(ಎಸ್‌ಬಿಡಿ)– ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ಕೇಂದ್ರವಾದ ವಾಲ್ಮೀಕಿ ರಸ್ತೆಯ ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಸುತ್ತ ಮುತ್ತಲ ರಸ್ತೆಗಳಲ್ಲಿ ಮೇ 13ರ ಬೆಳಗ್ಗೆ 5ರಿಂದ ಸಂಜೆ 5ರವರೆಗೆ ವಾಹನ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳು ಸೇರಿದಂತೆ ಎಲ್ಲಾ ಮಾದರಿ ವಾಹನಗಳ ಸಂಚಾರಕ್ಕೆ ಬದಲಿ ಮಾರ್ಗ ಕಲ್ಪಿಸುವುದರ ಜೊತೆಗೆ ಮತ ಎಣಿಕೆ ಕಾರ್ಯಕ್ಕೆ ನಿಯೋಜನೆಗೊಂಡಿರುವ ಸಿಬ್ಬಂದಿ, ಪೊಲೀಸರು, ಅಭ್ಯರ್ಥಿಗಳು, ಏಜೆಂಟರು, ಮಾಧ್ಯಮದವರ ವಾಹನ ನಿಲುಗಡೆಗೆ ಪ್ರತ್ಯೇಕ ಸ್ಥಳಗಳನ್ನು ನಿಗದಿಪಡಿಸ ಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಆದೇಶದಲ್ಲಿ ತಿಳಿಸಿದ್ದಾರೆ.





ಸಂಚಾರ ನಿರ್ಬಂಧ: ಕಲಾಮಂದಿರ ಜಂಕ್ಷನ್‌ನಿಂದ ಸೆಂಟ್‌ಜೋಸೆಫ್ ಜಂಕ್ಷನ್‌ವರೆಗೆ ಹುಣಸೂರು ರಸ್ತೆ, ಕೆಆರ್‌ಎಸ್ ರಸ್ತೆ ಜಂಕ್ಷನ್‌ನಿಂದ ಹುಣ ಸೂರು ರಸ್ತೆ ಜಂಕ್ಷನ್‌ವರೆಗೆ ವಾಲ್ಮೀಕಿ ರಸ್ತೆ ಹಾಗೂ ಮಾತೃ ಮಂಡಳಿ ವೃತ್ತದಿಂದ ವಾಲ್ಮೀಕಿ ರಸ್ತೆವರೆಗೆ ಆದಿಪಂಪ ರಸ್ತೆಯಲ್ಲಿ ಎಲ್ಲಾ ಮಾದರಿ ವಾಹನ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಕೆಎಸ್‌ಆರ್‌ಟಿಸಿ ಬಸ್ಸುಗಳು ಬದಲಿ ಮಾರ್ಗ: ಮೈಸೂರಿನಿಂದ ಹುಣಸೂರು ಕಡೆಗೆ ಸಂಚರಿಸುವ ಕೆಎಸ್‌ಆರ್‌ಟಿಸಿ ಬಸ್ಸುಗಳು ರಾಮಸ್ವಾಮಿ ವೃತ್ತ, ಮುಡಾ ಜಂಕ್ಷನ್(ಎಡಕ್ಕೆ ತಿರುವು) ಕೌಟಿಲ್ಯ ವೃತ್ತ, ಡಾ.ಪದ್ಮ ವೃತ್ತ, ವಿಎಂಡಿ ಜಂಕ್ಷನ್, ಬೋಗಾದಿ ರಸ್ತೆ, ರಿಂಗ್ ರಸ್ತೆ ಮೂಲಕ ಚಲಿಸಬೇಕು. ಹಾಗೆಯೇ ಮಡಿಕೇರಿ, ಹುಣಸೂರು, ಹಾಸನ ಕಡೆಯಿಂದ ಮೈಸೂರಿಗೆ ಬರುವ ಬಸ್ಸುಗಳು ಸೆಂಟ್ ಜೋಸೆಫ್ ಜಂಕ್ಷನ್‌ನಲ್ಲಿ ಎಡಕ್ಕೆ ತಿರುಗಿ ಟೆಂಪಲ್ ರಸ್ತೆ, ಕೆಆರ್‌ಎಸ್ ರಸ್ತೆ(ವಿವಿ ಪುರಂ ಸಿಗ್ನಲ್) ಜಂಕ್ಷನ್, ಆಕಾಶವಾಣಿ, ದಾಸಪ್ಪ ವೃತ್ತದ ಮೂಲಕ ಗ್ರಾಮಾಂತರ ಬಸ್ ನಿಲ್ದಾಣಕ್ಕೆ ಸಂಚರಿಸಬೇಕು.

ಇತರೆ ವಾಹನಗಳು: ಮೈಸೂರಿನಿಂದ ಹುಣಸೂರು ಕಡೆಗೆ ಹೋಗುವ ವಾಹನ ಗಳು ಮೆಟ್ರೋಪೋಲ್ ವೃತ್ತದಿಂದ ಡಿಸಿ ಕಚೇರಿ ಆರ್ಚ್‌ಗೇಟ್ ಜಂಕ್ಷನ್‌ನಲ್ಲಿ ಎಡ ತಿರುವು ಪಡೆದು ಕೃಷ್ಣಬುಲೇವಾರ್ಡ್ ರಸ್ತೆ, ಕೌಟಿಲ್ಯ ವೃತ್ತ, ವಿಎಂಡಿ ಜಂಕ್ಷನ್, ಬೋಗಾದಿ ರಸ್ತೆಯಲ್ಲಿ ಮುಂದೆ ಸಾಗಬೇಕು. ಹಾಗೆಯೇ ಹಾಸನ, ಮಡಿಕೇರಿ, ಹುಣಸೂರು ಕಡೆಯಿಂದ ಮೈಸೂರಿಗೆ ಆಗಮಿಸುವ ವಾಹನಗಳು ಸೆಂಟ್ ಜೋಸೆಫ್ ಜಂಕ್ಷನ್‌ನಲ್ಲಿ ಎಡಕ್ಕೆ ತಿರುಗಿ ಟೆಂಪಲ್ ರಸ್ತೆ, ಕೆಆರ್‌ಎಸ್ ರಸ್ತೆ ಜಂಕ್ಷನ್ ಮೂಲಕ ಮುಂದೆ ಸಾಗಬೇಕು.



ಬಿ.ರಮೇಶ್

ಪಾರ್ಕಿಂಗ್ ವ್ಯವಸ್ಥೆ: ಚುನಾವಣಾ **ಅಭ್ಯರ್ಥಿಗಳು, ಪಕ್ಷದ ಏಜೆಂಟರು ಹಾಗೂ ಮಾಧ್ಯಮದವರು** ದಾಸಪ್ಪ ವೃತ್ತ, ಕೆಆರ್‌ಎಸ್ ರಸ್ತೆಯ ವಿವೇಕಾನಂದ ಪ್ರತಿಮೆ ಜಂಕ್ಷನ್ ಬಳಿ ಎಡಕ್ಕೆ ತಿರುಗಿ, ರಾಮಮಂದಿರ, ವಾಲ್ಮೀಕಿ ರಸ್ತೆಯ ಲೀಲಾ ಚೆನ್ನಯ್ಯ ಕಲ್ಯಾಣ ಮಂಟಪ ಜಂಕ್ಷನ್‌ನಲ್ಲಿ ಬಲಕ್ಕೆ ತಿರುಗಿ ಆದಿಪಂಪ ರಸ್ತೆಯಲ್ಲಿ ತೆರಳಿ ಪಡುವಾರಹಳ್ಳಿ ಮಹದೇಶ್ವರ ದೇವಸ್ಥಾನ ಹಿಂಭಾಗದ ಮೈದಾನದಲ್ಲಿ ಕಾರುಗಳನ್ನು ಹಾಗೂ ಮಹಾರಾಣಿ ಕಾಲೇಜು ಹಾಸ್ಟೆಲ್ ಪಾರ್ಕಿಂಗ್ ಸ್ಥಳದಲ್ಲಿ ದ್ವಿಚಕ್ರ ವಾಹನಗಳನ್ನು ನಿಲುಗಡೆ ಮಾಡಬೇಕು. ಹುಣಸೂರು ರಸ್ತೆ ಮೂಲಕ ಆಗಮಿಸುವವರು ಸೆಂಟ್ ಜೋಸೆಫ್ ಜಂಕ್ಷನ್‌ನಲ್ಲಿ ಎಡಕ್ಕೆ ತಿರುಗಿ, ಟೆಂಪಲ್ ರಸ್ತೆ ಮಾತೃಮಂಡಳಿ ಜಂಕ್ಷನ್‌ನಲ್ಲಿ ಬಲಕ್ಕೆ ಸಾಗಿ ನಿಗದಿತ ಸ್ಥಳದಲ್ಲಿ ವಾಹನಗಳನ್ನು ಪಾರ್ಕ್ ಮಾಡಬೇಕು. ಮತ ಎಣಿಕೆ ಕರ್ತವ್ಯಕ್ಕೆ ನಿಯೋಜನೆಗೊಂಡ **ಅಧಿಕಾರಿ ಹಾಗೂ ಸಿಬ್ಬಂದಿ** ಪಡುವಾರಹಳ್ಳಿ ಬಸವೇಶ್ವರ ಛತ್ರದ ಮುಂಭಾಗದ ಮೈದಾನದಲ್ಲಿ ಹಾಗೂ ಎಲ್ಲಾ **ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ** ವಾಲ್ಮೀಕಿ ಜಂಕ್ಷನ್ ಬಳಿಯಿರುವ ಜಾಮ್ಮಾ ಮಸೀದಿ ಮುಂಭಾಗದ ಖಾಲಿ ಜಾಗದಲ್ಲಿ ವಾಹನಗಳನ್ನು ನಿಲ್ಲಿಸಬೇಕು.

ಹೆಚ್ಚುವರಿ ಪಾರ್ಕಿಂಗ್ ಸ್ಥಳಗಳು: ಹೆಚ್ಚುವರಿಯಾಗಿ ವಿಲೇಜ್ ಹಾಸ್ಟೆಲ್ ಮೈದಾನ, ಗೌತಮ್ ಹಾಸ್ಟೆಲ್, ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಮಹಾರಾಜ ಕಾಲೇಜು ಮೈದಾನ ಹಾಗೂ ಜೂನಿಯರ್ ಮಹಾರಾಜ ಕಾಲೇಜು ಮೈದಾನದಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ.

ಮುಂಗಾರು ಚುರುಕು: ಕೃಷಿ ಚಟುವಟಿಕೆ ಆರಂಭ

ಮೈಸೂರು, ಮೇ 11(ಎಂಕೆ)– ಜಿಲ್ಲೆಯಾದ್ಯಂತ ಪೂರ್ವ ಮುಂಗಾರು ಚುರುಕುಗೊಂಡಿದ್ದು, ಕೃಷಿ ಚಟುವಟಿಕೆಗಳು ಗರಿಗೆದರಿದೆ.

ಪ್ರಸಕ್ತ ವರ್ಷದಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗುತ್ತಿದ್ದು, ರೈತರ ಮೊಗದಲ್ಲಿ ಮಂದಹಾಸ ಮೂಡಿದೆ. ಎಲ್ಲೆಡೆ ಕೃಷಿ ಚಟುವಟಿಕೆ ಬಿರುಸುಗೊಂಡಿದೆ. ಭೂಮಿಯನ್ನು ಹದಗೊಳಿಸಿ ಬಿತ್ತನೆ ಮಾಡುವ ಕಾರ್ಯ ಭರದಿಂದ ಸಾಗಿದೆ.



ಕೃಷಿ ಇಲಾಖೆಗೆ ಕರ್ನಾಟಕ ರಾಜ್ಯ ಬೀಜ ನಿಗಮ ಹಾಗೂ ರಾಷ್ಟ್ರೀಯ ಬೀಜ ನಿಗಮದಿಂದ ಸರಬರಾಜಾಗಿರುವ ಉದ್ದು, ಹೆಸರುಕಾಳು, ಅಲಸಂದೆ ಹಾಗೂ ಸೂರ್ಯಕಾಂತಿ ಬಿತ್ತನೆ ಬೀಜವನ್ನು ಬೇಡಿಕೆಗೆ ಅನುಗುಣವಾಗಿ ವಿತರಣೆ ಮಾಡಲಾಗುತ್ತಿದೆ. ಹಾಗೆಯೇ ಮುಸುಕಿನ ಜೋಳ, ಹೊಗೆಸೊಪ್ಪು(ತಂಬಾಕು) ಸೇರಿದಂತೆ ಇನ್ನಿತರೆ ಬೆಳೆಗಳ ಬಿತ್ತನೆಗೆ ಭೂಮಿಯನ್ನು ಹದಗೊಳಿಸುವ ಕಾರ್ಯವೂ ನಡೆಯುತ್ತಿದೆ.

ವಾಡಿಕೆಗಿಂತ ಹೆಚ್ಚು ಮಳೆ: ಈ ವರ್ಷ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಜನವರಿಯಿಂದ ಇಲ್ಲಿಯವರೆಗೆ 151.3 ಮಿಲಿ ಮೀಟರ್ ಮಳೆಯಾಗಿದ್ದು, ವಾಡಿಕೆ ಮಳೆಗಿಂತ 25.2 ಮಿಲಿ ಮೀಟರ್ ಹೆಚ್ಚುವರಿ ಮಳೆಯಾಗಿದೆ. ಮೇ ತಿಂಗಳಿನಲ್ಲಿಯೇ(11 ದಿನಗಳ ಅವಧಿಯಲ್ಲಿ) 94.4 ಮಿ.ಮೀಟರ್ ಮಳೆಯಾಗಿದ್ದು, ತಿಂಗಳಿನ ವಾಡಿಕೆ ಮಳೆಗಿಂತ 56.8 ಮಿ.ಮೀ ಜಾಸ್ತಿ ಬಿದ್ದಿದೆ. ಹಾಗೆಯೇ 2022ರಲ್ಲಿಯೂ(ಮೇ 11ರವರೆಗೆ 180.8 ಮಿ.ಮೀ) ಉತ್ತಮ ಮಳೆಯಾಗಿತ್ತು.

ಕೃಷಿ ಚಟುವಟಿಕೆ ಬಿರುಸು: ಉತ್ತಮ ಮಳೆ ಹಿನ್ನೆಲೆ ಎಲ್ಲೆಡೆ ಕೃಷಿ ಚಟುವಟಿಕೆ ಬಿರುಸುಗೊಂಡಿದ್ದು, ಜಿಲ್ಲೆಯಲ್ಲಿ ಈಗಾಗಲೇ 42,605 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಕಾರ್ಯ ನಡೆದಿದೆ. ಹೆಚ್.ಡಿ.ಕೋಟೆ ತಾಲೂಕಿನಲ್ಲಿ 12,910 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಕಾರ್ಯ ನಡೆದಿದ್ದರೆ, ಹುಣಸೂರಿನಲ್ಲಿ 2870, ಕೆ.ಆರ್.ನಗರ 2365, ಮೈಸೂರು 635, ನಂಜನಗೂಡು 19,950, ಪಿರಿಯಾಪಟ್ಟಣ 3834 ಹಾಗೂ ಟಿ.ನರಸೀಪುರ ತಾಲೂಕಿನಲ್ಲಿ 375 ಹೆಕ್ಟೇರ್ ಪ್ರದೇಶದಲ್ಲಿ ಪೂರ್ವ ಮುಂಗಾರಿನ ಬಿತ್ತನೆ ಕಾರ್ಯ ನಡೆದಿದೆ.

ಬಿತ್ತನೆ ಬೀಜ ವಿತರಣೆ: ಕೃಷಿ ಇಲಾಖೆಯಿಂದ ರೈತರ ಬೇಡಿಕೆಗೆ ಅನುಗುಣವಾಗಿ ಬಿತ್ತನೆ ಬೀಜ ವಿತರಣೆ ಮಾಡಲಾಗುತ್ತಿದೆ. ಈವರೆಗೆ ಜಿಲ್ಲೆಯಲ್ಲಿ 44.1 ಕ್ವಿಂಟಾಲ್ ಉದ್ದು, 109 ಕ್ವಿಂಟಾಲ್ ಹೆಸರು ಕಾಳು, 378.1 ಕ್ವಿಂಟಾಲ್ ಅಲಸಂದೆ, 83 ಕ್ವಿಂಟಾಲ್ ಸೂರ್ಯಕಾಂತಿ ಸೇರಿ 614.2 ಕ್ವಿಂಟಾಲ್ ಬಿತ್ತನೆ ಬೀಜ ವಿತರಣೆ ಮಾಡಲಾಗಿದೆ.

> ಕಳೆದ ವರ್ಷದಂತೆಯೇ ಈ ಬಾರಿಯೂ ಜಿಲ್ಲೆಯಾದ್ಯಂತ ಉತ್ತಮ ಮಳೆಯಾಗುತ್ತಿದ್ದು, ಹೋಬಳಿ ಮಟ್ಟದಲ್ಲಿರುವ ರೈತ ಸಂಪರ್ಕ ಕೇಂದ್ರಗಳಲ್ಲಿ ಬಿತ್ತನೆ ಬೀಜ ದಾಸ್ತಾನು ಮಾಡಿಕೊಂಡು ರಿಯಾಯಿತಿ ದರದಲ್ಲಿ ವಿತರಣೆ ಮಾಡಲಾಗುತ್ತಿದೆ. ರೈತರು ತಮ್ಮ ಅಗತ್ಯತೆಗೆ ಅನುಗುಣವಾಗಿ ಬಿತ್ತನೆ ಬೀಜ ಪಡೆದುಕೊಳ್ಳಬೇಕು.
>
> - ಡಾ.ಬಿ.ಎಸ್.ಚಂದ್ರಶೇಖರ್, ಜಂಟಿ ನಿರ್ದೇಶಕ, ಕೃಷಿ ಇಲಾಖೆ

ಮಳೆ ಮುಂದುವರೆಯಲಿದೆ: ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಇನ್ನೂ ನಾಲ್ಕೈದು ದಿನಗಳ ಕಾಲ ನಿರಂತರ ಮಳೆಯಾಗಲಿದೆ. ಹತ್ತಿ ಬಿತ್ತನೆ ಹೆಚ್ಚಾಗಿ ನಡೆಯುತ್ತಿದ್ದು, ಅಗತ್ಯಕ್ಕಿಂತ ಹೆಚ್ಚಿನ ಮಳೆಯಾದರೆ ಬಿತ್ತನೆ ಕಾರ್ಯ ಹಾಗೂ ಈಗಾಗಲೇ ಬಿತ್ತನೆಯಾಗಿರುವ ಬೆಳೆಗಳಿಗೂ ತೊಂದರೆಯಾಗಲಿದೆ ರೈತರು ತಮ್ಮ ಜಮೀನಿನಲ್ಲಿ ಒಂದೇ ಕಡೆ ನೀರು ನಿಲ್ಲದಂತೆ ನೋಡಿಕೊಳ್ಳುವುದರಿಂದ ಅನುಕೂಲವಾಗಲಿದೆ ಎಂದು ನಾಗನಹಳ್ಳಿ ಸಾವಯವ ಕೃಷಿ ಸಂಶೋದನಾ ಸಂಸ್ಥೆಯ ಕೃಷಿ ವಿಜ್ಞಾನಿ ಪ್ರೊ.ಸಿ.ರಾಮಚಂದ್ರ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನವೋದ್ಯಮಗಳ ಯುಗ ಆರಂಭ

ಎಕ್ಸೆಲ್‌ಸಾಫ್ಟ್ ಟೆಕ್ನಾಲಜೀಸ್ ಸಿಇಓ ಡಿ.ಸುದನ್ವ ಅಭಿಮತ

ಮೈಸೂರು, ಮೇ 11(ಎಂಕೆ)– ವೇಗವಾಗಿ ಬೆಳೆಯುತ್ತಿರುವ ತಂತ್ರಜ್ಞಾನದಿಂದ ನವೋದ್ಯಮಗಳ ಯುಗ ಆರಂಭವಾಗಿದೆ ಎಂದು ಎಕ್ಸೆಲ್‌ಸಾಫ್ಟ್ ಟೆಕ್ನಾಲಜೀಸ್ ಸಹ ಸಂಸ್ಥಾಪಕ ಹಾಗೂ ಸಿಇಓ ಡಿ.ಸುದನ್ವ ಅಭಿಪ್ರಾಯಿಸಿದರು.



ಮೈಸೂರಿನಲ್ಲಿರುವ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯ (ಸಿಎಫ್‌ಟಿಆರ್‌ಐ)ದಲ್ಲಿ ಆಯೋಜಿಸಿದ್ದ 'ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನವೋದ್ಯಮ ಮತ್ತು ಉದ್ಯಮಸಾಹಸಿ ಎಂಬುದು ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿಯ ಕೊಡುಗೆಯಾಗಿದೆ ಎಂದರು.

80ರ ದಶಕದಲ್ಲಿ ನವೋದ್ಯಮ ಎಂಬುದು ಹೆಚ್ಚಿನ ಜನರಿಗೆ ತಿಳಿದಿರಲಿಲ್ಲ. ತಂತ್ರಜ್ಞಾನ ಬೆಳೆದಂತೆ ನವೋದ್ಯಮಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಜೀವನದ ಅವಿಭಾಜ್ಯ ಅಂಗವಾಗಿ ಮಾರ್ಪಟ್ಟಿದೆ. ಒಂದಲ್ಲಾ ಒಂದು ವಿಧದಲ್ಲಿ ತಂತ್ರಜ್ಞಾನ ನಮ್ಮೆಲ್ಲರನ್ನೂ ಆವರಿಸಿಕೊಂಡಿದೆ. ಬೆಳಿಗ್ಗೆಯಿಂದ ರಾತ್ರಿ ನಿದ್ರೆಗೆ ಜಾರುವವರೆಗೂ ಮೊಬೈಲ್, ಆನ್‌ಲೈನ್ ಶಾಪಿಂಗ್, ವಿದ್ಯಾಭ್ಯಾಸ ಸೇರಿದಂತೆ ಬಹುತೇಕ ಎಲ್ಲಾ ಚಟುವಟಿಕೆಗಳಲ್ಲಿಯೂ ತಂತ್ರಜ್ಞಾನ ಬಳಕೆ ಮಾಡಿಕೊಳ್ಳುತ್ತಿದ್ದೇವೆ ಎಂದರು.

ಸಣ್ಣ–ಸಣ್ಣ ಕೆಲಸಗಳಿಗಾಗಿ ಶುರುವಾದ ತಂತ್ರಜ್ಞಾನದ ಅವಲಂಬನೆ ಇಂದು ಬಿಟ್ಟಿರಲಾರದ ಮಟ್ಟದಲ್ಲಿದೆ ಮನೆ ಬಾಗಿಲಿಗೆ ಆಹಾರ ಪೂರೈಸುವ ಆ್ಯಪ್‌ಗಳವರೆಗೂ ತಂತ್ರಜ್ಞಾನವನ್ನೇ ಅವಲಂಬಿಸಿದ್ದೇವೆ. ಇದರಿಂದ ಫಾಸ್ಟ್ ಫುಡ್‌ಗಳು ಎಲ್ಲೆಡೆ ದೊರೆಯುತ್ತಿದ್ದು, ಸಾವಯವ ಆಹಾರ ಪದಾರ್ಥಗಳು ದುಬಾರಿಯಾಗುತ್ತಿವೆ ಎಂದು ಹೇಳಿದರು.

ದೇಶದಲ್ಲಿ ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನದ ಬಗ್ಗೆ ದೊಡ್ಡ ಚರ್ಚೆ ನಡೆಯುತ್ತಿದೆ. ಇದರ ಸಾಧಕ–ಬಾಧಕಗಳನ್ನು ಚರ್ಚಿಸುವ ದಿನವಿದು. ಮನುಕುಲಕ್ಕೆ ಒಳಿತಾಗುವ ತಂತ್ರಜ್ಞಾನ ದಿಂದ ಮೌಲ್ಯಯುತ ಕೆಲಸಗಳಾಗಲಿ ಎಂದು ಆಶಿಸಿದರಲ್ಲದೆ ಸಿಎಫ್‌ಟಿಆರ್‌ಐ ಸಂಸ್ಥೆಯಿಂದ ತಂತ್ರಜ್ಞಾನ ಖರೀದಿಸಿದ ಹಲವು ನವೋದ್ಯಮಿಗಳಿಗೆ ಪರವಾನಗಿ ಪ್ರಮಾಣಪತ್ರ ನೀಡಿ ಅಭಿನಂದಿಸಿದರು. ಸಿಎಫ್‌ಟಿಆರ್‌ಐ ಟಿಟಿಬಿಡಿ ವಿಭಾಗದ ಮುಖ್ಯಸ್ಥ ಬಿ.ವಿ.ಸತ್ಯೇಂದ್ರ ರಾವ್, ಮುಖ್ಯ ವಿಜ್ಞಾನಿ ಎನ್.ಕೆ.ರಸ್ತೋಗಿ ಉಪಸ್ಥಿತರಿದ್ದರು.

ಇಮ್ರಾನ್ ಬಂಧನ ಕಾನೂನುಬಾಹಿರ; ಕೂಡಲೇ ಬಿಡುಗಡೆಗೊಳಿಸಿ

ಪಾಕಿಸ್ತಾನ ಸುಪ್ರೀಂ ಕೋರ್ಟ್ ಆದೇಶ



ಇಸ್ಲಾಮಾಬಾದ್: ಮಾಜಿ ಪ್ರಧಾನಿ ಇಮ್ರಾನ್ ಖಾನ್ ಬಂಧನ ಕಾನೂನುಬಾಹಿರ ಎಂದಿರುವ ಪಾಕ್ ಸುಪ್ರೀಂ ಕೋರ್ಟ್, ತಕ್ಷಣವೇ ಅವರನ್ನು ಬಿಡುಗಡೆ ಮಾಡುವಂತೆ ಅಧಿಕಾರಿಗಳಿಗೆ ಆದೇಶಿಸಿದೆ ಎಂದು ಜಿಯೋ ಟಿವಿ ವರದಿ ಮಾಡಿದೆ.

ಇಮ್ರಾನ್ ಖಾನ್ ಬಂಧನವನ್ನು ಅವರ ಕಾನೂನು ತಂಡ ಪ್ರಶ್ನಿಸಿದ ನಂತರ ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ದೇಶದ ಸರ್ವೋಚ್ಚ ನ್ಯಾಯಾಲಯ ಈ ಹಿಂದೆ ಆದೇಶಿಸಿತ್ತು. ಇಮ್ರಾನ್ ಖಾನ್ ಬಂಧನದ ನಂತರ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಸರ್ಕಾರ ಸೇನೆಯ ನೆರವು ಪಡೆದಿತ್ತು.

ಈ ಸಂದರ್ಭದಲ್ಲಿ ಇಮ್ರಾನ್ ಖಾನ್ ಬೆಂಬಲಿಗರು ಹಾಗೂ ಪೊಲೀಸರೊಂದಿಗೆ ನಡೆದ ಘರ್ಷಣೆಯಲ್ಲಿ ಐವರು ಹತ್ಯೆಯಾಗಿದ್ದರು. ಮಿಲಿಟರಿ ಕಟ್ಟಡಗಳ ಮೇಲೆ ದಾಳಿಯಾಗಿತ್ತು. ಅಲ್ಲದೇ, ಸರ್ಕಾರದ ಇನ್ನಿತರ ಕಟ್ಟಡಗಳ ಮೇಲೆ ಬೆಂಕಿ ಹಚ್ಚಲಾಗಿತ್ತು. ಈ ಸಂಬಂಧ ಇಲ್ಲಿಯವರೆಗೂ ಸುಮಾರು 2,000 ಜನರನ್ನು ಬಂಧಿಸಲಾಗಿದೆ.

70 ವರ್ಷದ ಇಮ್ರಾನ್ ಖಾನ್ ಅವರನ್ನು ಪಾಕ್ ಸಂಸತ್ತಿನಲ್ಲಿ ಅವಿಶ್ವಾಸ ನಿರ್ಣಯ ಮಂಡಿಸುವ ಮೂಲಕ 2022 ಏಪ್ರಿಲ್ ನಲ್ಲಿ ಪ್ರಧಾನ ಮಂತ್ರಿ ಹುದ್ದೆಯಿಂದ ಉಚ್ಚಾಟಿಸಲಾಗಿತ್ತು. ಅಭಿಪ್ರಾಯ ಸಂಗ್ರಹಗಳ ಪ್ರಕಾರ ಅವರು ಪಾಕಿಸ್ತಾನದ ಅತ್ಯಂತ ಜನಪ್ರಿಯ ನಾಯಕರಾಗಿದ್ದಾರೆ. ಭೂ ವಂಚನೆ ಪ್ರಕರಣದಲ್ಲಿ ಭ್ರಷ್ಟಾಚಾರ ನಿಗ್ರಹ ದಳ ಇಮ್ರಾನ್ ಖಾನ್ ಅವರನ್ನು ಮಂಗಳವಾರ ಬಂಧಿಸಿತ್ತು. ಆದರೆ, ತಾನು ಯಾವುದೇ ತಪ್ಪು ಮಾಡಿಲ್ಲ ಎಂದು ಇಮ್ರಾನ್ ಖಾನ್ ಪರ ವಕೀಲರು ಸುಪ್ರೀಂ ಕೋರ್ಟ್‌ನಲ್ಲಿ ವಾದಿಸಿದರು.

ಮಕ್ಕಳ ಮೇಲೆ ಮಾನಸಿಕ ಒತ್ತಡ ಹೇರಬಾರದು

ಸಾಹಿತಿ ಡಾ.ಡಿ.ಕೆ.ರಾಜೇಂದ್ರ ಕಿವಿಮಾತು

ಮೈಸೂರು,ಮೇ 11(ಸಿಎನ್)– ಮಕ್ಕಳಲ್ಲಿರುವ ಆಸಕ್ತಿ ಅರಿತು ಮುಖ್ಯವಾಹಿನಿಯತ್ತ ಮುಖಮಾಡಲು ಪ್ರೋತ್ಸಾಹ ನೀಡಬೇಕು. ನಾಲ್ಕು ಗೋಡೆಗಳ ಮಧ್ಯೆ ಮಕ್ಕಳನ್ನು ಕಲಿಯಲು ಹೇಳಿ, ಅವರಿಗೆ ಅಂಕಗಳು ಎಂಬ ಮಾನಸಿಕ ಒತ್ತಡ ಹೇರಬಾರದು. ಬದಲಿಗೆ ಪೋಷಕರು ತಮ್ಮ ಮಕ್ಕಳ ಪ್ರತಿಭೆಯನ್ನು ಗುರುತಿಸಿ ಅವರ ಭವಿಷ್ಯ ರೂಪಿಸುವಲ್ಲಿ ಸಹಕಾರಿಯಾಗಬೇಕು ಎಂದು ಹಿರಿಯ ಸಾಹಿತಿ ಡಾ.ಡಿ.ಕೆ.ರಾಜೇಂದ್ರ ಸಲಹೆ ನೀಡಿದರು.



> ಮಕ್ಕಳಿಂದ ಜಾನಪದ ಗೀತೆ ಹಾಗೂ "ಕಂಸಾಯಣ" ಮತ್ತು ಗಡಿಬಿಡಿರಾಜ ಎಂಬ ನಾಟಕ ಪ್ರದರ್ಶನ ನಡೆಸಲಾಯಿತು. ಈ ವೇಳೆ 'ಕಲಿಸು ಗುರುವೇ ನೀ ಕಲಿಸು' ಎಂಬ ಹಾಡು ಸೇರಿದಂತೆ ಅನೇಕ ರಂಗಗೀತೆಗಳು ನೆರೆದಿದ್ದ ಪ್ರೇಕ್ಷಕರು ಹಾಗೂ ಪೋಷಕರ ಮನ ಸೆಳೆಯಿತು.

ನಗರದ ಕುವೆಂಪು ರಂಗಮಂದಿರದಲ್ಲಿ ಅದಮ್ಯ ರಂಗಶಾಲೆಯಿಂದ ಗುರುವಾರ ಆಯೋಜಿಸಲಾಗಿದ್ದ 'ಬಾಲಂಗೋಚಿ ಪುಟಾಣಿಗಳ ಪುಂಡಾಟ' ಮಕ್ಕಳ ಬೇಸಿಗೆ ಶಿಬಿರ ಸಮಾರೋಪ ಹಾಗೂ ಮಕ್ಕಳ ನಾಟಕ ಪ್ರದರ್ಶನ ಸಮಾರಂಭದಲ್ಲಿ ಡಾ.ಡಿ.ಕೆ.ರಾಜೇಂದ್ರ ಮಾತನಾಡಿದರು.

ಮಕ್ಕಳನ್ನು ವರ್ಷಪೂರ್ತಿ ಶಾಲೆಗೆ ಕಳುಹಿಸಿ ಅಂಕಗಳ ಬಗ್ಗೆ ಮಾತ್ರ ಗಮನ ಹರಿಸುತ್ತೇವೆ ಹೊರತು, ಅವರ ಆಸಕ್ತಿ ಏನೆಂಬುದನ್ನು ನಾವು ತಿಳಿಯುವುದಿಲ್ಲ ಹಾಗಾಗಿ ಪೋಷಕರು ಮಕ್ಕಳ ಪ್ರತಿಭೆ ಬಗ್ಗೆ ತಿಳಿಯಬೇಕು, ಮಕ್ಕಳ ಆಸಕ್ತಿ ಅರಿತು ಅವರಿಗೆ ಸೂಕ್ತ ಮಾರ್ಗದರ್ಶನ ನೀಡಬೇಕು. ಅವರನ್ನು ಪ್ರತಿಭಾವಂತರನ್ನಾಗಿ ರೂಪಿಸುವುದು ಪೋಷಕರ ದೊಡ್ಡ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ಪ್ರತೀವರ್ಷವೂ ಕೂಡ ಅದಮ್ಯ ರಂಗ ಶಾಲೆ, ಮಕ್ಕಳಿಗಾಗಿ ಇಂತಹ ವೇದಿಕೆ ನಿರ್ಮಿಸುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ದಕ್ಷ ಪದವಿ ಪೂರ್ವ ಕಾಲೇಜಿನ ಅಧ್ಯಕ್ಷರಾದ ಡಾ.ಪಿ.ಜಯಚಂದ್ರರಾಜು ಮಾತನಾಡಿ, ನಮ್ಮ ವಿದ್ಯಾಭ್ಯಾಸದ ದಿನಗಳಲ್ಲಿ ಇಂತಹ ಶಿಬಿರಗಳು ಇರಲಿಲ್ಲ. ಪೋಷಕರು ತಮ್ಮ ಮಕ್ಕಳನ್ನು ಇಂತಹ ಶಿಬಿರಗಳಿಗೆ ಸೇರಿಸುವುದರಿಂದ, ಮಕ್ಕಳಲ್ಲಿರುವ ಪ್ರತಿಭೆ ಏನೆಂಬುದು ತಿಳಿಯಬಹುದು. ನೃತ್ಯ, ಕಲೆ ಮತ್ತು ಕರಕುಶಲ, ಸಂಗೀತ, ಕೌಶಲ್ಯಗಳಂತಹ ವಿವಿಧ ಚಟುವಟಿಕೆಗಳನ್ನು ಕಲಿಯುವ ಮೂಲಕ ವಿದ್ಯಾರ್ಥಿಗಳು ಬೇಸಿಗೆ ರಜಾದಿನಗಳನ್ನು ಅರ್ಥಪೂರ್ಣವಾಗಿ ಕಳೆದಿದ್ದಾರೆ. ಇಂತಹ ಶಿಬಿರದಲ್ಲಿ ಪಡೆದ ತರಬೇತಿ, ಭವಿಷ್ಯದಲ್ಲಿ ಮಕ್ಕಳ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿದೆ ಎಂದರು.

ಸಮಾರಂಭದಲ್ಲಿ ಹಿರಿಯ ಸಾಹಿತಿ ಹಾಗೂ ಪ್ರಸಿದ್ಧ ವಿದ್ವಾಂಸರಾದ ಡಾ.ಡಿ.ಕೆ. ರಾಜೇಂದ್ರ, ದಕ್ಷ ಪದವಿ ಕಾಲೇಜಿನ ಅಧ್ಯಕ್ಷ ಡಾ.ಪಿ.ಜಯಚಂದ್ರರಾಜು, ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ಅಧ್ಯಕ್ಷೆ ಹೆಚ್.ಎಲ್.ಯಮುನಾ, ಅದಮ್ಯ ರಂಗಶಾಲೆ ಗೌರವ ಕಾರ್ಯದರ್ಶಿ ಸತೀಶ್ ಜವರೇಗೌಡ, ಕಾರ್ಯದರ್ಶಿ ಚಂದ್ರುಮಂಡ್ಯ, ಡಾ.ಬಿ.ಬಸವರಾಜು, ಟಿ.ಲೋಕೇಶ್, ಕೆ.ಎಸ್.ಸತೀಶ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಮನದಾನಕ್ಕೆ ಬಂದು ಮತಯಂತ್ರ ನಿಯಂತ್ರಣ ಘಟಕ ಉಪಕರಣ ಧ್ವಂಸ; ವ್ಯಕ್ತಿ ಬಂಧನ

ಹೂಟಗಳ್ಳಿಯಲ್ಲಿ ಘಟನೆ

ಮೈಸೂರು, ಮೇ 11(ಎಂಕೆ)– ಮತದಾನ ವೇಳೆ ವಿದ್ಯುನ್ಮಾನ ಮತಯಂತ್ರ (ಇವಿಎಂ) ನಿಯಂತ್ರಣ ಘಟಕ ಉಪಕರಣವನ್ನು ಧ್ವಂಸಗೊಳಿಸಿದ್ದ ವ್ಯಕ್ತಿಯನ್ನು ವಿಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಹೂಟಗಳ್ಳಿ ನಿವಾಸಿ ಶಿವಮೂರ್ತಿ(48) ಬಂಧಿತ ವ್ಯಕ್ತಿ. ಈತ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮತಗಟ್ಟೆ ಸಂಖ್ಯೆ–40ರಲ್ಲಿ ಮತದಾನ ಮಾಡುವವನಂತೆ ಆಗಮಿಸಿ ಏಕಾಏಕಿ ವಿದ್ಯುನ್ಮಾನ ಮತಯಂತ್ರ ನಿಯಂತ್ರಣ ಘಟಕ ಉಪಕರಣವನ್ನು ನೆಲಕ್ಕೆ ಬಿಸಾಡಿ ಧ್ವಂಸಗೊಳಿಸಿದ್ದಾನೆ.

ಇದನ್ನು ಗಮನಿಸಿದ ಮತಗಟ್ಟೆ ಅಧಿಕಾರಿಗಳು ತಕ್ಷಣ ಆತನನ್ನು ಹಿಡಿದು ಹೊರಗಡೆ ಕಳುಹಿಸಿದ ಬಳಿಕ ನಿಯಂತ್ರಣ ಘಟಕ ಉಪಕರಣವನ್ನು ಬದಲಾಯಿಸಿದ್ದಾರೆ. ಮತದಾನ ಯಾವುದೇ ಅಡಚಣೆಯಿಲ್ಲದೆ ಮುಂದುವರೆದಿದೆ.

ಮಾನಸಿಕ ಖಿನ್ನತೆ: ವಿದ್ಯುನ್ಮಾನ ಮತಯಂತ್ರ ನಿಯಂತ್ರಣ ಘಟಕ ಉಪಕರಣವನ್ನು ಧ್ವಂಸಗೊಳಿಸಿದ್ದ ಶಿವಮೂರ್ತಿ ಮಾನಸಿಕ ಖಿನ್ನತೆಗೆ ಒಳಗಾಗಿದ್ದು, ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ ಬಳಿಕ ತಿಳುವಳಿಕೆ ನೀಡಿ, ಬಿಡುಗಡೆ ಮಾಡಲಾಗಿದೆ ಎಂದು ವಿಜಯನಗರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಹಾಸ್ಟೆಲ್‌ಗೆ ಅನಧಿಕೃತ ಭೇಟಿ; ವಿದ್ಯಾರ್ಥಿಗಳ ಜೊತೆ ಸಂವಾದ: ರಾಹುಲ್‌ಗೆ ನೋಟೀಸ್

ನವದೆಹಲಿ, ಮೇ 11– ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ದೆಹಲಿ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿದ್ಯಾರ್ಥಿಗಳ ಹಾಸ್ಟೆಲ್‌ಗೆ ಕಳೆದ ವಾರ ಹಠಾತ್ ಭೇಟಿ ನೀಡಿ, ಅಲ್ಲಿನ ವಿದ್ಯಾರ್ಥಿಗಳ ಜೊತೆ ಭೋಜನ ಸವಿದು ಬಳಿಕ ಕೆಲಹೊತ್ತು ಸಂವಾದ ನಡೆಸಿದ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯ ರಾಹುಲ್ ಗಾಂಧಿಗೆ ನೋಟೀಸ್ ಜಾರಿ ಮಾಡಿದೆ.


ಎರಡು ಪುಟಗಳ ನೋಟೀಸ್ ಜಾರಿ ಮಾಡಿದ ವಿಶ್ವವಿದ್ಯಾಲಯದ ಪ್ರಾಂಶುಪಾಲರಾದ ಕೆ.ಪಿ.ಸಿಂಗ್, ಝಡ್ ಪ್ಲಸ್ ಭದ್ರತೆ ಹೊಂದಿರುವ ರಾಷ್ಟ್ರೀಯ ಪಕ್ಷದ ನಾಯಕರಿಂದ ಇಂತಹ ವರ್ತನೆ ಶೋಭೆ ತರುವಂತದ್ದಲ್ಲ ಅಲ್ಲದೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದಲೂ ಈ ರೀತಿಯ ಭೇಟಿ ಅಪಾಯಕಾರಿಯಾಗಿದೆ, ಇನ್ನು ಮುಂದಿನ ದಿನಗಳಲ್ಲಿ ಈ ರೀತಿಯ ತಪ್ಪುಗಳು ಪುನರಾವರ್ತನೆಯಾಗಬಾರದು ಎಂದು ಹೇಳಿ ನೋಟೀಸ್ ನೀಡಿದೆ.

ವಿದ್ಯಾರ್ಥಿಗಳ ಪೋಷಕರು ಹಾಗೂ ಹೊರಗಿನ ವ್ಯಕ್ತಿಗಳು ಹಾಸ್ಟೆಲ್ ಆವರಣದಲ್ಲಿ ಶೈಕ್ಷಣಿಕ ವಿಚಾರ ಹಾಗೂ ಕೌನ್ಸಿಲಿಂಗ್ ಚಟುವಟಿಕೆಗಳನ್ನು ಹೊರತುಪಡಿಸಿ ಯಾವುದೇ ಚಟುವಟಿಕೆಯಲ್ಲಿ ಪಾಲ್ಗೊಳ್ಳಬಾರದು ಎಂದು ವಿಶ್ವವಿದ್ಯಾಲಯ ಸೂಚನೆ ನೀಡಿದೆ.

ನಿಂತಲ್ಲಿ, ಕುಂತಲ್ಲೆಲ್ಲಾ ಎಲೆಕ್ಷನ್ ರಿಸಲ್ಟ್ ಬಗ್ಗೆಯೇ ಚರ್ಚೆ!

ಅವರಂತೂ ಗೆದ್ದೇ ಗೆಲ್ತಾರೆ, ಇವರಂತೂ ಸೋಲ್ತಾರೆ...

ಮೈಸೂರು, ಮೇ 11(ಎಸ್‌ಬಿಡಿ)– ಭಾರೀ ಕುತೂಹಲ ಸೃಷ್ಟಿಸಿರುವ ವಿಧಾನಸಭಾ ಚುನಾವಣಾ ಫಲಿತಾಂಶದ ಬಗ್ಗೆ ಎಲ್ಲೆಂದರಲ್ಲಿ ಬಿಸಿ ಬಿಸಿ ಚರ್ಚೆ ನಡೆಯುತ್ತಿದೆ.



ಟೀ ಅಂಗಡಿಗಳು, ಹೋಟೆಲ್, ಬಾರ್ ಅಂಡ್ ರೆಸ್ಟೋರೆಂಟ್, ಪಾರ್ಕ್, ಆಟೋ ನಿಲ್ದಾಣ, ಬಸ್–ರೈಲ್ವೆ ನಿಲ್ದಾಣ, ಜಗುಲಿ, ಅರಳಿ ಕಟ್ಟೆ, ಕಚೇರಿಗಳು, ಹೀಗೆ ಜನ ಸೇರುವ ಸ್ಥಳದಲ್ಲೆಲ್ಲಾ ಅಭ್ಯರ್ಥಿಗಳ ಸೋಲು–ಗೆಲುವಿನ ಲೆಕ್ಕಾಚಾರ ಜೋರಾಗಿದೆ. ಅಲ್ಲದೆ ಕುಟುಂಬ ಸದಸ್ಯರು ಟಿವಿ ವೀಕ್ಷಣೆ ನಡುವೆ ಚುನಾವಣೆ ಬಗ್ಗೆ ವಿಶ್ಲೇಷಣೆ ನಡೆಸುತ್ತಿದ್ದಾರೆ. ಸ್ನೇಹಿತರು, ಪರಿಚಿತರ ಮೊಬೈಲ್ ಸಂಭಾಷಣೆಯಲ್ಲೂ ಇದೇ ಪ್ರಮುಖ ವಿಚಾರವಾಗಿದೆ. ಒಟ್ಟಾರೆ ಎಲ್ಲೆಂದರಲ್ಲಿ ಚುನಾವಣಾ ಫಲಿತಾಂಶದ್ದೇ ಮಾತು.

ಮೈಸೂರು ನಗರದ ಮೂರು ಸೇರಿದಂತೆ ಜಿಲ್ಲೆಯ ಒಟ್ಟು 11 ಕ್ಷೇತ್ರಗಳಲ್ಲಿ ಯಾವ ಯಾವ ಅಭ್ಯರ್ಥಿಗಳು ಗೆಲ್ಲುತ್ತಾರೆ. ಎಷ್ಟು ಮತಗಳಿಂದ ಗೆಲ್ಲಬಹುದು. ನೆರೆ ಜಿಲ್ಲೆಗಳಾದ ಚಾಮರಾಜನಗರ, ಮಂಡ್ಯ, ಕೊಡಗು, ಹಾಸನದ ಕ್ಷೇತ್ರಗಳಲ್ಲಿ ಯಾರು ವಿಜಯಶಾಲಿಗಳಾಗಬಹುದು. ರಾಜ್ಯದಲ್ಲಿ ಒಟ್ಟಾರೆ ಯಾವ ಪಕ್ಷ ಎಷ್ಟು ಸ್ಥಾನಗಳನ್ನು ಪಡೆಯಬಹುದು ಎಂಬ ಲೆಕ್ಕಾಚಾರದಲ್ಲಿ ತಲ್ಲೀನರಾಗಿದ್ದಾರೆ

ಕ್ಷೇತ್ರದ ಮತದಾರರ ಭಾವನೆ, ಮತದಾನ ದಿನದ ವಾತಾವರಣ, ಮತ ಚಲಾವಣೆ ಪ್ರಮಾಣ, ಯುವ ಮತದಾರರ ಸಂಖ್ಯೆ, ಮಹಿಳಾ ಮತದಾರರ ಒಲವು, ಪಕ್ಷಗಳ ಪ್ರಣಾಳಿಕೆಯಲ್ಲಿದ್ದ ಕಾರ್ಯಕ್ರಮಗಳ ಪರಿಣಾಮ, ಹೀಗೆ ಎಲ್ಲಾ ಅಂಶಗಳ ಆಧಾರದಲ್ಲೂ ಚರ್ಚೆ ನಡೆಸುತ್ತಿದ್ದಾರೆ. ಆ ಕ್ಷೇತ್ರದ ಫಲಿತಾಂಶ ಈಗಾಗಲೇ ಎಲ್ಲರಿಗೂ ತಿಳಿದಿದ್ದು, ಅಧಿಕೃತ ಪ್ರಕಟ ಬಾಕಿ ಇದೆ. ಈ ಕ್ಷೇತ್ರದಲ್ಲಿ ಜಿದ್ದಾಜಿದ್ದಿನ ಹೋರಾಟ ನಡೆದಿದ್ದು, ಯಾರೇ ಆದರೂ ಒಂದೆರಡು ಸಾವಿರ ಮತಗಳ ಅಂತರದಲ್ಲಿ ಗೆಲ್ಲಬಹುದಷ್ಟೆ. ಈ ಬಾರಿ ಯಾವ ಕ್ಷೇತ್ರದಲ್ಲೂ ಸುಲಭ ಜಯ ಸಾಧ್ಯವಿಲ್ಲ. ಅವರಂತೂ ಗೆದ್ದೇ ಗೆಲ್ಲುತ್ತಾರೆ. ಇವರ ಸೋಲು ನಿಶ್ಚಿತ, ಇಂತಹ ವಿಭಿನ್ನ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ.

ಕೆಲವರು ತಾವು ಬೆಂಬಲಿಸುವ ಪಕ್ಷದ ಅಭ್ಯರ್ಥಿ ಗೆಲುತ್ತಾರೆಂದು ವಾದಿಸಿದರೆ, ಮತ್ತಷ್ಟು ಮಂದಿ ವಾಸ್ತವ ನೆಲೆಗಟ್ಟಿನಲ್ಲಿ ಚರ್ಚಿಸುತ್ತಿದ್ದಾರೆ. ಮನೆ ಮನೆಯಲ್ಲೂ ರಾಜಕೀಯದ ಗುಂಗು ಆವರಿಸಿದೆ. ಮಹಿಳೆಯರೂ ಕೂಡ ಧಾರಾವಾಹಿ ವೀಕ್ಷಣೆಗೂ ಬ್ರೇಕ್ ಹಾಕಿ ಚುನಾವಣೆ ಸಂಬಂಧ ಚರ್ಚೆಯಲ್ಲಿ ಭಾಗಿಯಾಗುತ್ತಿದ್ದಾರೆ. ಏನೇ ಹೇಳಿದರೂ ಇವರೇ ಗೆಲ್ಲುವುದು, ಈ ಪಕ್ಷವೇ ಅಧಿಕಾರಕ್ಕೆ ಬರುವುದು ಎಂದು ತಮ್ಮದೇ ಆದ ಲೆಕ್ಕಾಚಾರದಲ್ಲಿ ಅಭಿಪ್ರಾಯ ಮಂಡಿಸುವುದು ಕಂಡು ಬರುತ್ತಿದೆ.

ಇನ್ನು ರಾಜಕೀಯದ ಬಗ್ಗೆ ಅತೀವ ಆಸಕ್ತಿವುಳ್ಳವರ ದಿನಚರಿಯೇ ವ್ಯತ್ಯಯವಾಗಿದೆ. ಸಮಾನ ಮನಸ್ಕರು ಸಿಕ್ಕರಂತೂ ಊಟ, ನಿದ್ದೆಯನ್ನೂ ಮರೆತು ಫಲಿತಾಂಶದ ಲೆಕ್ಕಾಚಾರದಲ್ಲಿ ಮುಳುಗಿದ್ದಾರೆ. ಮತದಾನ ಮುಕ್ತಾಯವಾದ ಬೆನ್ನಲ್ಲೇ ಮಾಧ್ಯಮಗಳಲ್ಲಿ ಬಿತ್ತರವಾದ ವಿವಿಧ ಸಂಸ್ಥೆಗಳ ಸಮೀಕ್ಷಾ ವರದಿಗಳನ್ನು ಆಧರಿಸಿ ವಿಮರ್ಶಾತ್ಮಕ ಚರ್ಚೆ ನಡೆಸುತ್ತಿದ್ದಾರೆ. ಇವು ಯಾವ ಸಂದರ್ಭದ ಸಮೀಕ್ಷಾ ವರದಿ ಆಗಿರಬಹುದು, ಇದಕ್ಕೆ ಭಿನ್ನವಾದ ಫಲಿತಾಂಶ ಬರಬಹುದಾ, ಯಾವ ಆಧಾರದಲ್ಲಿ ಸಮೀಕ್ಷೆ ನಡೆಸಲಾಗಿದೆ ಎಂಬ ಸಂಶೋಧನೆಗೂ ಇಳಿದಿದ್ದಾರೆ.

ಏನೇ ಆದರೂ ಈ ಬಾರಿ ಕಾಂಗ್ರೆಸ್ ಸರ್ಕಾರ ರಚನೆ ಮಾಡುತ್ತದೆ, ಇಲ್ಲ ಬಿಜೆಪಿ ಅಷ್ಟು ಸುಲಭವಾಗಿ ಬಿಟ್ಟು ಕೊಡುವುದಿಲ್ಲ, ಎರಡೂ ಪಕ್ಷಗಳಿಗೂ ಬಹುಮತ ಸಿಗದೆ ಜೆಡಿಎಸ್ ಬೆಂಬಲವೇ ನಿರ್ಣಾಯಕವಾಗುತ್ತದೆ ಎಂಬ ವಿಭಿನ್ನ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಒಟ್ಟಾರೆ ಇದೆಲ್ಲದಕ್ಕೂ ಮೇ 13ರ ಚುನಾವಣಾ ಫಲಿತಾಂಶದಿಂದ ಉತ್ತರ ಸಿಗಲಿದ್ದು, ಇದಕ್ಕಾಗಿ ಎಲ್ಲರೂ ಕಾತುರರಾಗಿದ್ದಾರೆ.

ಸ್ಪರ್ಧೆ ಒಂದೆಡೆ; ಮತದಾನ ಮಾಡಿದ್ದೆ ಮತ್ತೊಂದೆಡೆ!

ಮೈಸೂರು, ಮೇ 11(ಎಸ್‌ಬಿಡಿ)– ಮನೆ ಮನೆಗೆ ತಿರುಗಿ ಮತ ಯಾಚಿಸಿದ ಹಲವು ಅಭ್ಯರ್ಥಿಗಳಿಗೆ ತಮ್ಮ ಮತವನ್ನು ತಾವೇ ಪಡೆಯಲು ಸಾಧ್ಯವಾಗಿಲ್ಲ.

ತಾವು ಸ್ಪರ್ಧಿಸಿದ ವಿಧಾನಸಭಾ ಕ್ಷೇತ್ರ ಹಾಗೂ ಮತದಾನದ ಹಕ್ಕು ಪಡೆದಿರುವ ಕ್ಷೇತ್ರ ಬೇರೆ ಬೇರೆಯಾಗಿರುವ ಕಾರಣ ತಮ್ಮ ಮತವನ್ನು ಬೇರೊಂದು ಕ್ಷೇತ್ರದಲ್ಲಿ ಚಲಾಯಿಸಿದ್ದಾರೆ.

ಮೈಸೂರಿನ ಚಾಮರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶಾಸಕ ಎಲ್.ನಾಗೇಂದ್ರ ಜಯನಗರ ನಿವಾಸಿ. ಅದು ಕೆ.ಆರ್.ಕ್ಷೇತ್ರ ವ್ಯಾಪ್ತಿಗೆ ಬರಲಿದ್ದು, ಹಾಗಾಗಿ ಅವರು ಅಲ್ಲಿ ಮತ ಚಲಾಯಿಸಿದ್ದಾರೆ. ಕೃಷ್ಣರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಕೆ.ಸೋಮಶೇಖರ್ ಚಾಮರಾಜ ಕ್ಷೇತ್ರದಲ್ಲಿ ಮತದಾನ ಮಾಡಿದ್ದಾರೆ. ನರಸಿಂಹರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸತೀಶ್ ಸಂದೇಶ್‌ಸ್ವಾಮಿ ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕವೀಶ್ ಗೌಡ ಚಾಮರಾಜ ಕ್ಷೇತ್ರದಲ್ಲಿ ಮತ ಚಲಾಯಿಸಿದ್ದಾರೆ.

ತಿ.ನರಸೀಪುರದ ಕಾಂಗ್ರೆಸ್ ಅಭ್ಯರ್ಥಿ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಜೆಡಿಎಸ್ ಅಭ್ಯರ್ಥಿ ಅಶ್ವಿನ್ ಕುಮಾರ್ ನೆರೆಯ ವರುಣ ಕ್ಷೇತ್ರದಲ್ಲಿ ಮತದಾನ ಮಾಡಿದ್ದಾರೆ. ವರುಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಚಾಮರಾಜನಗರದಲ್ಲಿ, ಜೆಡಿಎಸ್ ಅಭ್ಯರ್ಥಿ ಡಾ.ಭಾರತಿ ಶಂಕರ್ ನರಸಿಂಹರಾಜ ಕ್ಷೇತ್ರದಲ್ಲಿ ಮತ ಚಲಾಯಿಸಿದ್ದಾರೆ.

ನಂಜನಗೂಡಿನ ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ ಗುಂಡ್ಲುಪೇಟೆಯಲ್ಲಿ, ಬಿಜೆಪಿ ಅಭ್ಯರ್ಥಿ ಹಾಲಿ ಶಾಸಕ ಹರ್ಷವರ್ಧನ್ ಬೆಂಗಳೂರಿನ ಹೆಬ್ಬಾಳ ಕ್ಷೇತ್ರದಲ್ಲಿ, ಪಿರಿಯಾಪಟ್ಟಣದ ಬಿಜೆಪಿ ಅಭ್ಯರ್ಥಿ ಸಿ.ಹೆಚ್.ವಿಜಯಶಂಕರ್ ಚಾಮುಂಡೇಶ್ವರಿ ಕ್ಷೇತ್ರದಲ್ಲಿ, ಹೆಚ್.ಡಿ.ಕೋಟೆ ಕಾಂಗ್ರೆಸ್ ಅಭ್ಯರ್ಥಿ ಹಾಲಿ ಶಾಸಕ ಸಿ.ಅನಿಲ್ ಕುಮಾರ್ ಹುಣಸೂರಿನಲ್ಲಿ, ಹೆಚ್.ಡಿ.ಕೋಟೆ ಬಿಜೆಪಿ ಅಭ್ಯರ್ಥಿ ಕೆ.ಎ.ಕೃಷ್ಣಯ್ಯ ಅವರು ಕುಣಿಗಲ್ ವಿಧಾನಸಭಾ ಕ್ಷೇತ್ರದ ಮತ ಚಲಾವಣೆ ಮಾಡಿದ್ದಾರೆ.

ಚುನಾವಣೆ ಮುಗಿತು.... ಈಗ ಸೋಲು-ಗೆಲುವಿನ ಲೆಕ್ಕಾಚಾರ

ಮಡಿಕೇರಿ, ಮೇ 11– ಕೊಡಗು ಜಿಲ್ಲೆಯಲ್ಲಿ ವಿಧಾನ ಸಭಾ ಚುನಾವಣೆ ಶಾಂತ ರೀತಿಯಲ್ಲಿ ಮುಕ್ತಾಯ ವಾಗಿದ್ದು, ಇದೀಗ ಸೋಲು ಗೆಲುವಿನ ಲೆಕ್ಕಾಚಾರ ಆರಂಭವಾಗಿದೆ. ಮೇ 13ರಂದು ನಡೆಯುವ ಮತ ಎಣಿಕೆಯಲ್ಲಿ ಯಾರು ವಿಜಯ ಮಾಲೆ ಧರಿಸಲಿದ್ದಾರೆ ಎಂಬುದು ಬಹಿರಂಗವಾಗಲಿದ್ದು, ಈ ನಡುವೆಯೇ ಜಿಲ್ಲೆಯಲ್ಲಿ 'ಹೈ ವೋಲ್ಟೇಜ್' ರಾಜಕೀಯ ಚರ್ಚೆಗಳು ಕೇಳಿ ಬರುತ್ತಿದೆ.

ಇನ್ನು ಜಿಲ್ಲೆಯ ಚುನಾವಣಾ ಅಖಾಡದಲ್ಲಿ ಕೊನೆಯ ಕ್ಷಣದಲ್ಲಿ ಎರಡೂ ವಿಧಾನ ಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಈ ಎರಡು ರಾಷ್ಟ್ರೀಯ ಪಕ್ಷಗಳ ನಡುವೆ ನೇರ ಸ್ಪರ್ಧೆ ಏರ್ಪಟ್ಟಿತ್ತು. ಈ ಹಿನ್ನೆಲೆಯಲ್ಲಿ ಫಲಿತಾಂಶದ ಕುರಿತು ಇದೀಗ ತೀವ್ರ ಕುತೂಹಲ ಮೂಡಿಸುವಂತೆ ಮಾಡಿದೆ.

ಮಡಿಕೇರಿ ಕ್ಷೇತ್ರದಲ್ಲಿ ಮೊದಲಿಗೆ ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ನಡುವೆ ತ್ರಿಕೋನ ಸ್ಪರ್ಧೆ ಕಂಡು ಬಂದಿತ್ತು. ಮತದಾನದ ಹಿಂದಿನ ದಿನ ನಡೆದ ರಾಜಕೀಯ ಬೆಳವಣಿಗೆಗಳಿಂದ ಕೆಲವು ಮತಗಳು ಯಾವ ಅಭ್ಯರ್ಥಿ ಕಡೆಗೆ ವಾಲಿದೆ ಎಂಬುದು ಸದ್ಯಕ್ಕೆ ನಿಗೂಢವಾಗಿದೆ.

ವಿರಾಜಪೇಟೆ ಕ್ಷೇತ್ರದಲ್ಲಿ ಬಿಜೆಪಿಯ ಕೆ.ಜೆ. ಬೋಪಯ್ಯ ಮತ್ತು ಕಾಂಗ್ರೆಸ್‌ನ ಎ.ಎಸ್. ಪೊನ್ನಣ್ಣ ನಡುವೆ ನೇರ ಸ್ಪರ್ಧೆ ಏರ್ಪಟ್ಟಿತ್ತು. ಇಲ್ಲಿ 3ನೇ ಸ್ಥಾನ ಜೆಡಿಎಸ್ ಪಾಲಾಗಿದ್ದು, ವಿರಾಜಪೇಟೆ ಕ್ಷೇತ್ರ ಒಂದರ್ಥದಲ್ಲಿ ತೀವ್ರ ಪೈಪೋಟಿಯ ಕಣವಾಗಿ ಮೊದಲಿನಿಂದಲೇ ಮಾರ್ಪಟ್ಟಿತ್ತು.

ಗೆಲುವು ನಮ್ಮದೇ: ಚುನಾವಣೆಗೂ ಮುನ್ನ ಮತ್ತು



ಚುನಾವಣೋತ್ತರವಾಗಿ ನೇರ ಸ್ಪರ್ಧೆ ಏರ್ಪಟಿದ್ದ ಎರಡೂ ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳು ಹಾಗೂ ಪಕ್ಷಗಳ ಕಾರ್ಯಕರ್ತರು ಈ ಬಾರಿ ಗೆಲುವು ನಮ್ಮದೇ ಎಂದು ಈ ಕ್ಷಣದವರೆಗೂ ಹೇಳಿ ಕೊಳ್ಳುತ್ತಿದ್ದಾರೆ. ಗೆಲುವಿನ ಅಂತರವೂ ಹೆಚ್ಚಿರಲಿದೆ ಎಂದು ಅಭ್ಯರ್ಥಿಗಳು ಘೋಷಿಸಿಕೊಳ್ಳುತ್ತಿದ್ದಾರೆ. ಆದರೆ ಎರಡೂ ಕ್ಷೇತ್ರದ ಅಭ್ಯರ್ಥಿಗಳ ಹೃದಯ ಬಡಿತ ಡಿ.ಜೆ. ಧ್ವನಿವರ್ಧಕದ ರೀತಿಯಲ್ಲಿ ಬಡಿದುಕೊಳ್ಳುತ್ತಿರಬಹುದು ಎಂದು ಮತದಾರರು ಚರ್ಚಿಸುತ್ತಿದ್ದಾರೆ.

ಸಮೀಕ್ಷೆಗೂ ನಿಲುಕದ್ದು: ಇನ್ನು ಕೊಡಗು ಜಿಲ್ಲೆಯಲ್ಲಿ ಯಾವ ಪಕ್ಷದ ಅಭ್ಯರ್ಥಿ ವಿಜಯ ಸಾಧಿಸಬಹುದು ಎಂದು ಸದ್ಯಕ್ಕೆ ಯಾರಿಗೂ ಊಹಿಸಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಎರಡೂ ರಾಷ್ಟ್ರೀಯ ಪಕ್ಷಗಳ ಪ್ರಭಾವಿ ಸ್ಪರ್ಧಾಳುಗಳು ಕಾರಣವಾಗಿದ್ದು, ಇವರೇ ಗೆಲುವು ಸಾಧಿಸಲಿದ್ದಾರೆ ಎಂದು ಎಲ್ಲೂ ನಿಖರವಾಗಿ, ಯಾವುದೇ ಸಮೀಕ್ಷೆಗಳಿಗೆ ಹೇಳಲು ಸಾಧ್ಯವಾಗುತ್ತಿಲ್ಲ. ಈ ಹಿಂದೆ ನಡೆದ ಚುನಾವಣೆಗಳಲ್ಲಿ ಮೇಲ್ನೋಟಕ್ಕೆ ಇಂತಹ ಪಕ್ಷದ ಅಭ್ಯರ್ಥಿ ಇಂತಿಷ್ಟು ಮತಗಳ ಅಂತರದಲ್ಲಿ ಗೆಲ್ಲಲಿದ್ದಾರೆ ಎಂದು ಅಂದಾಜಿಸಬಹುದಿತ್ತು. ಆದರೆ ಈ ಬಾರಿಯ ಚುನಾವಣೆ ಭಾರೀ ಜಿದ್ದಾಜಿದ್ದಿನಿಂದ ಕೂಡಿದ್ದು, ಗೆಲುವಿನ ಲೆಕ್ಕಾಚಾರ ಅಸಾಧ್ಯವಾಗಿ ಪರಿಣಮಿಸಿದೆ. ಮಾತ್ರವಲ್ಲದೇ, ಮತದಾರ ಕೂಡ ಎಲ್ಲಿಯೂ ರಹಸ್ಯ ಬಿಟ್ಟುಕೊಡದೇ ಗೌಪ್ಯತೆ ಕಾಪಾಡಿ ಕೊಂಡು 'ಪ್ರಜಾಪ್ರಭುತ್ವದ ಹಬ್ಬಾಚರಣೆ' ನಡೆಸಿರುವುದು ಮತ್ತೊಂದು ಕಾರಣವೆಂದರೆ ತಪ್ಪಾಗಲಾರದು.

ಮಡಿಕೇರಿ ಕ್ಷೇತ್ರದ ಅಭ್ಯರ್ಥಿಗಳು

ಅಮೀನ್ ಮೋಹಿಸಿನ್(ಎಸ್ಡಿಪಿಐ), ಮುತ್ತಪ್ಪ ಎನ್.ಎಂ.(ಜೆಡಿಎಸ್), ಕೆ.ಬಿ.ರಾಜು(ಆರ್‌ಪಿಐ ಕರ್ನಾಟಕ), ಜಿ.ಜಿ.ಹೇಮಂತ್ ಕುಮಾರ್ (ಪಕ್ಷೇತರ), ಅಪ್ಪಚ್ಚುರಂಜನ್ ಎಂ.ಪಿ.(ಬಿಜೆಪಿ), ಡಾ.ಮಂಥರ್ ಗೌಡ (ಕಾಂಗ್ರೆಸ್), ಎಚ್.ಎಂ. ಸೋಮಪ್ಪ (ಸಿಪಿಐ), ದಿವಿಲ್ ಕುಮಾರ್ ಎ.ಎ.(ಬಿಎಸ್‌ಪಿ), ಎಂ.ಖಲೀಲ್(ಪಕ್ಷೇತರ), ರಶೀದ ಬೇಗಂ(ಐಎಂಪಿ), ಶ್ರೀನಿವಾಸ ರೈ ಬಿ.ಕೆ. (ಕೆಪಿಜೆಪಿ), ಬೋಪಣ್ಣ ಕೆ.ಪಿ.(ಎಎಪಿ), ಹರೀಶ್ ಆಚಾರ್ಯ(ಪಕ್ಷೇತರ), ಸಜೀರ್ ಮಜೀದ್ ನೆಲಾಟ್ (ಕೆಆರ್‌ಎಸ್),ಶೃತಿ ಕೆ.ಪಿ.(ಪಕ್ಷೇತರ).

ವಿರಾಜಪೇಟೆ ಕ್ಷೇತ್ರದ ಅಭ್ಯರ್ಥಿಗಳು

ಕೆ.ಜಿ.ಬೋಪಯ್ಯ (ಬಿಜೆಪಿ), ಎಂ.ಎ. ನಾಸೀರ್ (ಪಕ್ಷೇತರ), ಎ.ಎಸ್.ಪೊನ್ನಣ್ಣ (ಕಾಂಗ್ರೆಸ್), ಮನ್ಸೂರ್ ಅಲಿ ಎಂ.ಎ.(ಜೆಡಿಎಸ್), ಸಿ.ಎಸ್. ರವೀಂದ್ರ (ಎಎಪಿ), ಕೆ.ಎಸ್.ಮನು (ಸರ್ವೋ ದಯ ಕರ್ನಾಟಕ ಪಕ್ಷ), ದರ್ಶನ್ ಶೌರಿ ಪಿ.ಕೆ. (ಪಕ್ಷೇತರ), ಮಸೂದ್ ಫೌಜ್ದಾರ್ (ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ), ಸಜುವಿ.ಎ. (ಕರ್ನಾಟಕ ರಾಷ್ಟ್ರ ಸಮಿತಿ).



ಸ್ಟ್ರಾಂಗ್ ರೂಂನಲ್ಲಿ 'ಭದ್ರ'

ಜಿಲ್ಲೆಯ ಎರಡೂ ವಿಧಾನ ಸಭಾ ಕ್ಷೇತ್ರಗಳ ಮತ ಪೆಟ್ಟಿಗೆ ನಗರದ ಸಂತ ಜೋಸೆಫರ ಶಾಲೆಯಲ್ಲಿ ತೆರೆಯಲಾಗಿರುವ ಸ್ಟ್ರಾಂಗ್ ರೂಂನಲ್ಲಿ ಭದ್ರವಾಗಿಡಲಾಗಿದೆ. ಈ ಭದ್ರತಾ ಕೊಠಡಿಯಲ್ಲಿ ಮತಪೆಟ್ಟಿಗೆ ಮಾತ್ರವಲ್ಲದೇ ಅಭ್ಯರ್ಥಿಗಳ ರಾಜಕೀಯ ಭವಿಷ್ಯ ಕೂಡ ಭದ್ರವಾಗಿದೆ. ಸ್ಟ್ರಾಂಗ್ ರೂಂನ ಭದ್ರತೆಗಾಗಿ ಶಸ್ತ್ರ ಸಜ್ಜಿತ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ, ಇಂಡೋ–ಟಿಬೆಟ್ ಬಾರ್ಡರ್ ಪೊಲೀಸ್, ಕೊಡಗು ಜಿಲ್ಲಾ ಪೊಲೀಸರನ್ನು ದಿನದ 24 ಗಂಟೆಗಳ ಕಾಲ ಭದ್ರತೆಗಾಗಿ ನಿಯೋಜನೆ ಮಾಡಲಾಗಿದೆ. ಮೇ.13ರಂದು ನಡೆಯುವ ಮತ ಎಣಿಕೆ ಸಂದರ್ಭ ಮಾತ್ರವೇ ಜಿಲ್ಲಾ ಚುನಾವಣಾ ಆಯೋಗದ ಅಧಿಕಾರಿಗಳು ಸ್ಟ್ರಾಂಗ್ ರೂಂನ ಬಾಗಿಲು ತೆಗೆದು ಮತ ಪೆಟ್ಟಿಗೆಗಳನ್ನು ಹೊರ ತೆಗೆಯಲಿದ್ದಾರೆ.

ಮತದಾನ ವಿವರ: ಕೊಡಗು ಜಿಲ್ಲೆಯಲ್ಲಿ ಬುಧವಾರ ನಡೆದ ಚುನಾವಣೆಯಲ್ಲಿ ಒಟ್ಟು ಶೇ.74.74ರಷ್ಟು ಮತದಾನವಾಗಿದೆ. ಜಿಲ್ಲೆಯಲ್ಲಿ 4,56,313 ಮತದಾರರಿದ್ದು, ಈ ಪೈಕಿ 3,41,046 ಮತದಾರರು ಮತ ಚಲಾಯಿಸಿದ್ದಾರೆ.

ಮಡಿಕೇರಿ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,32,148 ಮತದಾರರಲ್ಲಿ 1,75,009 ಮಂದಿ ಮತದಾನ ಮಾಡಿದ್ದು ಶೇ.75.39ರಷ್ಟು ಮತ ಲಭಿಸಿದೆ. ವಿರಾಜಪೇಟೆ ಕ್ಷೇತ್ರದಲ್ಲಿ ಒಟ್ಟು 2,24,165 ಮತದಾರರಿದ್ದು, 1,66,037 ಮತದಾರರು ಮತ ಚಲಾಯಿಸಿದ್ದು, ಶೇ.74.07ರಷ್ಟು ಮತದಾನವಾಗಿದೆ.

ಮುಖ ಹಾಕದ ಮತದಾರರು: ಕೊಡಗಿನ ಒಟ್ಟು ಮತದಾರರಲ್ಲಿ 1,15,267 ಮಂದಿ ಮತಗಟ್ಟೆಯತ್ತ ಮುಖ ಮಾಡದೆ ಮೌನವಾಗಿ ಉಳಿದಿದ್ದಾರೆ. ಈ ಬಾರಿ ಜಿಲ್ಲಾಡಳಿತ, ಸ್ವೀಪ್ ಸಮಿತಿ ಜಿಲ್ಲೆಯಾದ್ಯಂತ ಹತ್ತಾರು ಮತದಾನ ಜಾಗೃತಿಯ ಕಾರ್ಯಕ್ರಮಗಳನ್ನು ಆಯೋಜಿಸಿ, ಮತದಾನ ಮಾಡುವಂತೆ ಪ್ರೇರೇಪಣೆಯನ್ನು ನೀಡಿ ಜನ ಮೆಚ್ಚುಗೆಗೆ ಪಾತ್ರವಾಗಿದೆ. ಅದರಲ್ಲೂ ಮತದಾನವನ್ನು ವಿಶೇಷವಾಗಿಸಲು ಸಖಿ ಮತಗಟ್ಟೆ, ಸಾಂಪ್ರದಾಯಿಕ ಮತಗಟ್ಟೆ, ಸೆಲ್ಫಿ ಕೇಂದ್ರ ಮೊದಲಾಗಿ ತನ್ನ ಇತಿಮಿತಿಯಲ್ಲಿ ಗರಿಷ್ಠ ಪ್ರಯತ್ನಗಳನ್ನು ನಡೆಸಿದೆ, ಹೀಗಿದ್ದೂ ದೊಡ್ಡ ಸಂಖ್ಯೆಯ ಮತದಾರ ಈ ಎಲ್ಲ ಪ್ರಯತ್ನಗಳನ್ನು ದಿವ್ಯ ನಿರ್ಲಕ್ಷ್ಯದಿಂದ ಕಂಡಿರುವುದು ಮಾತ್ರ ಅಕ್ಷಮ್ಯ ಎಂದರೆ ತಪ್ಪಾಗಲಾರದು.

ಸಿದ್ದಾಪುರ ಪಟ್ಟಣದಲ್ಲಿ ಕಾಣಿಸಿಕೊಂಡ ಕಾಡಾನೆ

ಬಸ್ ನಿಲ್ದಾಣ ಸೇರಿದಂತೆ ಪಟ್ಟಣದಲ್ಲಿ ಓಡಾಟ, ಆತಂಕಗೊಂಡ ಗ್ರಾಮಸ್ಥರು

ಸಿದ್ದಾಪುರ, ಮೇ 11– ಕಾಡಿನಲ್ಲಿ ಇರಬೇಕಾದ ಆನೆಗಳು ಇದೀಗ ನಾಡಿನತ್ತ ಮುಖ ಮಾಡಿವೆ. ಸಿದ್ದಾಪುರ ಪಟ್ಟಣದ ಬಸ್ ನಿಲ್ದಾಣದ ಸುತ್ತಮುತ್ತ ಆನೆಯೊಂದು ಕಾಣಿಸಿಕೊಂಡಿದ್ದು, ಗ್ರಾಮಸ್ಥರನ್ನು ಆತಂಕಕ್ಕೀಡು ಮಾಡಿದೆ.

ಬುಧವಾರ ರಾತ್ರಿ 11 ಗಂಟೆ ಸಮಯದಲ್ಲಿ ಕಾಡಾನೆಯೊಂದು ರಾಜಾರೋಷವಾಗಿ ಪಟ್ಟಣದ ಬಸ್ ನಿಲ್ದಾಣಕ್ಕೆ ಬಂದು ಪಂಚಾಯಿತಿಯಿಂದ ಚೀಲಗಳಲ್ಲಿ ಸಂಗ್ರಹಿಸಿ ಇಡಲಾಗಿದ್ದ ತ್ಯಾಜ್ಯದ ಬಳಿ ತೆರಳಿ ಚೀಲವನ್ನು ದಂತದಿಂದ ತಿವಿದು ಚೆಲ್ಲಾಪಿಲ್ಲಿ ಮಾಡಲು ಯತ್ನಿಸಿದೆ. ಈ ವೇಳೆ ಸ್ಥಳೀಯ ಆಟೋ ಚಾಲಕ ಜಲೀಲ್ ಸೇರಿದಂತೆ ಮತ್ತಿತರರು ಕಾಡಾನೆ ಕಂಡು ಭಯಭೀತರಾಗಿದ್ದಾರೆ.

ಕಾಡಾನೆ ಕರಡಿಗೋಡು ರಸ್ತೆ ಮಾರ್ಗಕ್ಕೆ ತೆರಳಲು ಮುಂದಾಗುತ್ತಿದ್ದ ಸಂದರ್ಭದಲ್ಲಿ ಸ್ಥಳೀಯರಿಗೆ ಮಾಹಿತಿ ನೀಡಿದ್ದಾರೆ. ಕೂಡಲೇ ಜಮಾಯಿಸಿದ ಸ್ಥಳೀಯರು ಕಿರುಚಾಟ ಮಾಡಿದ್ದಾರೆ. ಇದರಿಂದ ಆಕ್ರೋಶಗೊಂಡ ಕಾಡಾನೆ ದಾಳಿ ಮಾಡಲು ಯತ್ನಿಸಿದೆ. ಆಗ ಎಲ್ಲರೂ ಓಡಿ ಪಾರಾಗಿದ್ದಾರೆ. ಗ್ರಾಮ ಪಂಚಾಯಿತಿ ಮುಂಭಾಗದಲ್ಲಿರುವ ಮುಸ್ತಫಾ ಎಂಬುವರ ಮನೆ ಬಳಿ ತೆರಳಿದ ಕಾಡಾನೆ ಕಾಂಪೌಂಡಿಗೆ ಹಾನಿ ಮಾಡಲು ಯತ್ನಿಸಿದೆ. ಮನೆಯವರು ಹೊರಬರುತ್ತಿದ್ದಂತೆ ಆಕ್ರೋಶಗೊಂಡ ಕಾಡಾನೆ ಅಲ್ಲಿಂದ ಜಾಗ ಖಾಲಿ ಮಾಡಿ, ಮತ್ತೆ ಹಿಂತಿರುಗಿ ಬಸ್ ನಿಲ್ದಾಣದ ಮೂಲಕ ರಸ್ತೆ ಮಾರ್ಗವಾಗಿ ಕಾಫಿ ತೋಟದೊಳಗೆ ನುಗ್ಗಿದೆ. ಕಾಡಾನೆ ಸಂಚಾರದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲಾಗಿದೆ. ಆಟೋ ಚಾಲಕ ಜಲೀಲ್ ಸೇರಿದಂತೆ ಮತ್ತು ಇತರರ ಸಮಯಪ್ರಜ್ಞೆಯಿಂದ ಭಾರಿ ಅನಾಹುತ ತಪ್ಪಿದಂತಾಗಿದೆ.

ಸ್ಥಳೀಯರ ಆಕ್ರೋಶ: ತ್ಯಾಜ್ಯ ವಿಲೇವಾರಿಗೆ ಸೂಕ್ತ ಜಾಗ ಕಂಡುಕೊಳ್ಳಲಾಗದ ಗ್ರಾಮ ಪಂಚಾಯಿತಿ ಸಿದ್ದಾಪುರ ಬಸ್ ನಿಲ್ದಾಣ ಸೇರಿದಂತೆ ಹಲವೆಡೆ ತ್ಯಾಜ್ಯದ ರಾಶಿ ತುಂಬಿ ತುಳುಕುತ್ತಿದ್ದು ತ್ಯಾಜ್ಯದ ದುರ್ವಾಸನೆಯಿಂದ ಸ್ಥಳೀಯರು ನೆಮ್ಮದಿಯಾಗಿ ಜೀವನ ನಡೆಸಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಬೀದಿನಾಯಿಗಳ ಹಾವಳಿಯೊಂದಿಗೆ ಕಾಡುಪ್ರಾಣಿಗಳು ಪಟ್ಟಣಕ್ಕೆ ಬರಲು ಮುಂದಾಗಿದೆ. ತಿಂಗಳುಗಳಿಂದ ಲೋಡುಗಟ್ಟಲೆ ತ್ಯಾಜ್ಯದ ರಾಶಿ ಬಸ್ ನಿಲ್ದಾಣದ ಬದಿಯಲ್ಲಿ ತುಂಬಿತುಳುಕುತ್ತಿದ್ದು ದುರ್ವಾಸನೆಯಿಂದ ಕೂಡಿದೆ.

ಸಿದ್ದಾಪುರ ಪಟ್ಟಣ ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲೂ ಬಹುತೇಕ ಬೀದಿ ದೀಪಗಳು ಉರಿಯದೆ ಕೆಟ್ಟುಹೋಗಿದೆ. ಸಿದ್ದಾಪುರ ಸುತ್ತಮುತ್ತಲ ವ್ಯಾಪ್ತಿಯಲ್ಲಿ ಕಾಡುಪ್ರಾಣಿಗಳ ಹಾವಳಿ ಮಿತಿ ಮೀರಿದ್ದರೂ ವಿದ್ಯುತ್ ದೀಪಗಳನ್ನು ದುರಸ್ತಿಪಡಿಸುವಲ್ಲಿ ಗ್ರಾಮ ಪಂಚಾಯಿತಿ ವಿಫಲವಾಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಸಿದ್ದಾಪುರ ಬಸ್ ನಿಲ್ದಾಣದ ಬಳಿ ಆರೆಂಜ್ ಕೌಂಟಿ ರೆಸಾರ್ಟ್ ಸಂಸ್ಥೆ ವತಿಯಿಂದ ಲಕ್ಷಾಂತರ ಖರ್ಚು ಮಾಡಿ ಹೈ ಮಾಸ್ಟ್ ಲೈಟನ್ನು ಅಳವಡಿಸಲಾಗಿದ್ದು, ಇದೀಗ ಸರಿಯಾಗಿ ಉರಿಯುತ್ತಿಲ್ಲ. ಗ್ರಾಮದಲ್ಲಿ ಕತ್ತಲು ಆವರಿಸಿಕೊಂಡಿದ್ದರು. ಗ್ರಾಮ ಪಂಚಾಯತಿ ಲೈಟುಗಳ ದುರಸ್ತಿಗೂ ಮುಂದಾಗುತ್ತಿಲ್ಲ ಎಂದು ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ವಿ.ಕೆ ಬಸೀರ್ ಆರೋಪಿಸಿದ್ದಾರೆ. ಸ್ಥಳಕ್ಕೆ ಅರಣ್ಯ ಇಲಾಖೆ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಆಟವಾಡುತ್ತಿದ್ದ ಮಗು ಬಾವಿಗೆ ಬಿದ್ದು ಸಾವು



ಗೋಣಿಕೊಪ್ಪ, ಮೇ 11– ಕೋಟೂರು ಗ್ರಾಮದ ಮನೆಯಂಗಳದಲ್ಲಿ ಆಟವಾಡುತ್ತಿದ್ದಾಗ ಆಕಸ್ಮಿಕವಾಗಿ ಬಾವಿಗೆ ಬಿದ್ದು ಮೂರು ವರ್ಷದ ಮಗು ಸಾವಿಗೀಡಾಗಿದೆ. ಪೆಮ್ಮಂಡ ರೋಶನ್, ಇಸು ದಂಪತಿ ಪುತ್ರಿ ಸಿಯಾನ್ ಮೃತ ದುರ್ದೈವಿ.

ಬುಧವಾರ ಸಂಜೆ ಬಲೂನ್ ಆಟವಾಡುತ್ತಿದ್ದ ಸಂದರ್ಭ ಬಲೂನ್ ಮನೆಯ ಸಮೀಪವಿದ್ದ ಬಾವಿಗೆ ಬಿದ್ದಿದೆ. ಇದನ್ನು ತೆಗೆಯಲು ಪ್ರಯತ್ನಿಸುತ್ತಿದ್ದ ಸಂದರ್ಭ ಬಾವಿಗೆ ಜಾರಿ ಬಿದ್ದು ಸಾವಿಗೀಡಾದಳು. ಮನೆಯ ಒಳಗೆ ಇದ್ದ ಪಾಲಕರಿಗೆ ವಿಷಯ ತಿಳಿದು ಹುಡುಕುವಾಗ ಬಾವಿಯಲ್ಲಿ ಮೃತದೇಹ ಪತ್ತೆಯಾಯಿತು.

ಕುಟುಂಬಸ್ಥರ ಆಕ್ರಂದನ ಕರುಳು ಹಿಂಡುವಂತಿತ್ತು. ಬೀರ್ಯ ಕೊಡವ ಸಿನೆಮಾದಲ್ಲಿ ಸಿಯಾನ್ ಪಾತ್ರ ಮಾಡಿದ್ದು, ಈ ಬಗ್ಗೆ ಸಾರ್ವಜನಿಕವಾಗಿ ಸಂತಾಪ ವ್ಯಕ್ತಪಡಿಸಿದ್ದಾರೆ.

ಹಾವು ಕಚ್ಚಿ ಗೃಹಿಣಿ ಸಾವು



ಗೋಣಿಕೊಪ್ಪ, ಮೇ 11– ಅತ್ತೂರು ಗ್ರಾಮದಲ್ಲಿ ಹಾವು ಕಚ್ಚಿ ಗೃಹಿಣಿ ಸಾವನ್ನಪ್ಪಿದ್ದಾರೆ. ಗ್ರಾಮದ ವಾಸಿ ಶುಭಲಕ್ಷ್ಮಿ (68) ಮೃತರು. ಗುರುವಾರ ಬೆಳಗ್ಗೆ ಮನೆಯ ಸಮೀಪ ಹಾವು ಕಚ್ಚಿದ ನಂತರ ಮೈಸೂರು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದಾಗ ತಿತಿಮತಿ ಸಮೀಪ ಸಾವಿಗೀಡಾದರು. ನಂತರ ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಶವ ಪರೀಕ್ಷೆ ನಡೆಸಲಾಯಿತು.

ಗೂಡ್ಸ್ ವಾಹನ–ಇನೋವಾ ನಡುವೆ ಡಿಕ್ಕಿ: ಹಲವರಿಗೆ ಗಾಯ



ವಿರಾಜಪೇಟೆ, ಮೇ 11– ಎರಡು ವಾಹನಗಳ ನಡುವೆ ಸಂಭವಿಸಿದ ಅಪಘಾತದಿಂದ ಕಾರಿನಲ್ಲಿದ್ದವರು ಗಾಯಗೊಂಡಿರುವ ಘಟನೆ ವಿರಾಜಪೇಟೆ ಹೊರವಲಯ ಕೊಮ್ಮೆತೋಡು ಗ್ರಾಮದಲ್ಲಿ ನಡೆದಿದೆ. ವಿರಾಜಪೇಟೆ–ಸಿದ್ದಾಪುರ ಮುಖ್ಯರಸ್ತೆಯ ಕೊಮ್ಮೆತೋಡು ಬಳಿಯ ಸಂತ ಮರಿಯ ಚರ್ಚ್ ಮುಂಭಾಗದ ತಿರುವಿನಲ್ಲಿ ವಿರಾಜಪೇಟೆಯಿಂದ ಸಿದ್ದಾಪುರಕ್ಕೆ ತೆರಳುತ್ತಿದ್ದ ಗೂಡ್ಸ್ ವಾಹನ ಮತ್ತು ಸಿದ್ದಾಪುರದಿಂದ ವಿರಾಜಪೇಟೆ ನಗರಕ್ಕೆ ಆಗಮಿಸುತ್ತಿದ್ದ ಟೊಯೋಟಾ ಇನೋವಾ ಕಾರಿನ ನಡುವೆ ಡಿಕ್ಕಿ ಸಂಭವಿಸಿದೆ. ಕಾರಿನಲ್ಲಿದ್ದವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಗಾಯಾಳುಗಳನ್ನು ಅಮ್ಮತ್ತಿ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿದೆ.

ಸದಾನಂದ ನಿಧನ



ಕುಶಾಲನಗರ, ಮೇ 11– ಪಟ್ಟಣದ ನಿವಾಸಿ ಉದ್ಯಮಿ ಸದಾನಂದ ಅವರು ಗುರುವಾರ ನಿಧನರಾದರು. ಮೃತರು ಪತ್ನಿ ಸೇರಿದಂತೆ ಇಬ್ಬರು ಪುತ್ರ ಹಾಗೂ ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಸಂಸ್ಕಾರ ಮಾರುಕಟ್ಟೆ ರಸ್ತೆಯಲ್ಲಿರುವ ಹಿಂದೂ ರುದ್ರಭೂಮಿಯನ್ನು ನಡೆಯಿತು. ಕುಶಾಲನಗರ ಆರ್ಯ ವೈಶ್ಯ ಮಂಡಳಿ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಮೃತರ ಆತ್ಮಕ್ಕೆ ಶಾಂತಿ ತೋರಿದ್ದಾರೆ.

ಚಾ.ನಗರ ಜಿಲ್ಲೆಯಲ್ಲಿ ಶೇ 81.48ರಷ್ಟು ಮತದಾನ



ಚಾಮರಾಜನಗರ, ಮೇ 11– ವಿಧಾನಸಭೆ ಸಾರ್ವತ್ರಿಕ ಚುನಾವಣೆಗೆ ಚಾಮರಾಜನಗರ ಜಿಲ್ಲೆಯಲ್ಲಿ ಶೇ. 81.48ರಷ್ಟು ಮತದಾನವಾಗಿದೆ.

ಜಿಲ್ಲೆಯಲ್ಲಿ ಒಟ್ಟು 8,61,489 ಮತದಾರರಿದ್ದು, ಈ ಪೈಕಿ 7,01,977ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ. ಹನೂರು ವಿಧಾನಸಭಾ ಕ್ಷೇತ್ರದಲ್ಲಿ ಶೇ. 80.02ರಷ್ಟು, ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ ಶೇ. 76.75ರಷ್ಟು, ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಶೇ. 81.95 ರಷ್ಟು ಹಾಗೂ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಶೇ. 87.33ರಷ್ಟು ಮತದಾನವಾಗಿದೆ.

ಚಾಮರಾಜನಗರ: ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ 1,02,588 ಪುರುಷರು, 1,06,891 ಮಹಿಳೆಯರು, 15 ಮಂದಿ ಇತರರು ಸೇರಿ ಒಟ್ಟು 2,09,494 ಮತದಾರರಿದ್ದಾರೆ. ಬುಧವಾರ ಕ್ಷೇತ್ರದ 239 ಮತಗಟ್ಟೆಗಳಲ್ಲಿ ನಡೆದ ಮತದಾನದಲ್ಲಿ 85,478 ಪುರುಷರು, 86,200 ಮಹಿಳೆಯರು 5 ಇತರರು ಸೇರಿ ಒಟ್ಟು 1,71,683 ಮಂದಿ ಮತ ಚಲಾವಣೆ ಮಾಡಿದ್ದಾರೆ.

ಗುಂಡ್ಲುಪೇಟೆ: ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ 1,05,020 ಪುರುಷರು, 1,08,797 ಮಹಿಳೆಯರು, 19 ಮಂದಿ ಇತರರು ಸೇರಿ ಒಟ್ಟು 2,13,836 ಮತದಾರರಿದ್ದಾರೆ. ಬುಧವಾರ ಕ್ಷೇತ್ರದ 249 ಮತಗಟ್ಟೆಗಳಲ್ಲಿ ನಡೆದ ಮತದಾನದಲ್ಲಿ 92,632 ಪುರುಷರು, 94,111 ಮಹಿಳೆಯರು ಸೇರಿ ಒಟ್ಟು 1,86,743 ಮಂದಿ ಮತ ಚಲಾವಣೆ ಮಾಡಿದ್ದಾರೆ.

ಹನೂರು: ಹನೂರು ವಿಧಾನಸಭಾ ಕ್ಷೇತ್ರದಲ್ಲಿ 1,11,960 ಪುರುಷರು, 1,09,581 ಮಹಿಳೆಯರು, 16 ಮಂದಿ ಇತರರು ಸೇರಿ ಒಟ್ಟು 2,21,557 ಮತದಾರರಿದ್ದಾರೆ. ಬುಧವಾರ ಕ್ಷೇತ್ರದ 253 ಮತಗಟ್ಟೆಗಳಲ್ಲಿ ನಡೆದ ಮತದಾನದಲ್ಲಿ 89,400 ಪುರುಷರು, 87,896 ಮಹಿಳೆಯರು, 3 ಇತರರು ಸೇರಿ ಒಟ್ಟು 1,77,299 ಮಂದಿ ಮತ ಚಲಾವಣೆ ಮಾಡಿದ್ದಾರೆ.

ಕೊಳ್ಳೇಗಾಲ: ಕೊಳ್ಳೇಗಾಲ ಮೀಸಲು ವಿಧಾನಸಭಾ ಕ್ಷೇತ್ರದಲ್ಲಿ 1,06,979 ಪುರುಷರು, 1,09,604 ಮಹಿಳೆಯರು, 19 ಮಂದಿ ಇತರರು ಸೇರಿ ಒಟ್ಟು 2,16,602 ಮತದಾರರಿದ್ದಾರೆ. ಬುಧವಾರ ಕ್ಷೇತ್ರದ 241 ಮತಗಟ್ಟೆಗಳಲ್ಲಿ ನಡೆದ ಮತದಾನದಲ್ಲಿ 83,233 ಪುರುಷರು, 83,013 ಮಹಿಳೆಯರು, 6 ಇತರರು ಸೇರಿ ಒಟ್ಟು 1,66,252 ಮಂದಿ ಮತ ಚಲಾವಣೆ ಮಾಡಿದ್ದಾರೆ.

ಈ ಬಾರಿ ಶೇಕಡವಾರು ಮತದಾನ ಗಮನಿಸಿದಾಗ ಗುಂಡ್ಲುಪೇಟೆಯಲ್ಲಿ ಅತಿ ಹೆಚ್ಚು (ಶೇ 87.33) ಮತದಾನವಾಗಿದೆ. ಕೊಳ್ಳೇಗಾಲದಲ್ಲಿ ಅತಿ ಕಡಿಮೆ (ಶೇ 76.75) ಮತದಾನವಾಗಿದ್ದು, ಉಳಿದಂತೆ ಚಾಮರಾಜನಗರದಲ್ಲಿ ಶೇ 81.95, ಹನೂರಿನಲ್ಲಿ ಶೇ 80.02ರಷ್ಟು ಮತದಾನವಾಗಿದೆ.

ಹೃದಯದ ಬಡಿತ ಹೆಚ್ಚಿಸಿರುವ ಚಾ.ನಗರ ಚುನಾವಣಾ ಫಲಿತಾಂಶ

ಬೂತ್‌ಮಟ್ಟದಲ್ಲಿ ಗೆಲುವಿನ ಲೆಕ್ಕಾಚಾರ, ದೇವಸ್ಥಾನಗಳ ಭೇಟಿ

ಚಾಮರಾಜನಗರ, ಮೇ 11– ವಿಧಾನಸಭಾ ಚುನಾವಣೆಯ ಮತದಾನ ಪ್ರಕ್ರಿಯೆ ಮುಕ್ತಾಯಗೊಂಡ ಬೆನ್ನಲ್ಲೇ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಕಣದಲ್ಲಿದ್ದ ಒಟ್ಟು 61 ಅಭ್ಯರ್ಥಿಗಳಲ್ಲಿ ಫಲಿತಾಂಶದ ಹೃದಯ ಬಡಿತ ಹೆಚ್ಚಾಗಿದೆ.

ಮತದಾರರು ಹಾಗೂ ಪಕ್ಷಗಳ ಕಾರ್ಯಕರ್ತರಲ್ಲಿ ತಮ್ಮ ಅಭ್ಯರ್ಥಿಗಳ ಸೋಲು– ಗೆಲುವಿನ ಲೆಕ್ಕಾಚಾರ ನಡೆಯುತ್ತಿದ್ದು, ಜಿಲ್ಲೆಯ ಗ್ರಾಮೀಣ ಪ್ರದೇಶಗಳು ಸೇರಿದಂತೆ ಬೆಟ್ಟಿಂಗ್ ನಡೆಯುತ್ತಿದೆ. ಪ್ರಮುಖವಾಗಿ ಚಾಮರಾಜನಗರ ಹಾಗೂ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರಗಳ ಫಲಿತಾಂಶ ತೀವ್ರ ಕುತೂಹಲ ಮೂಡಿಸಿದ್ದು, ಪ್ರಸ್ತುತ ಎಲ್ಲರ ಚಿತ್ತ ಮೇ 13ರ ಮತ ಎಣಿಕೆಯತ್ತ ಕೇಂದ್ರಿಕೃತಗೊಂಡಿದೆ. ಜಿಲ್ಲಾಡಳಿತ ಮತ ಎಣಿಕೆಗೆ ಎಲ್ಲಾ ರೀತಿಯ ಸಿದ್ಧತೆಯನ್ನು ಮಾಡಿಕೊಂಡಿದ್ದು, ನಗರದ ಹೊರವಲಯದ ಬೇಡರಪುರದಲ್ಲಿರುವ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಎಣಿಕೆ ಕಾರ್ಯ ನಡೆಯಲಿದೆ.

ತಣ್ಣಗಾದ ಚುನಾವಣೆ ಕಾವು: ಕಳೆದ ಒಂದೂವರೆ ತಿಂಗಳಿನಿಂದ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಬಿಸಿಯೇರಿದ್ದ ಚುನಾವಣೆ ಕಾವು ತಣ್ಣಗಾಗಿದೆ. ಮತಯಂತ್ರದೊಳಗೆ ಭದ್ರವಾಗಿರುವ ಜನಾದೇಶ ಪ್ರಕಟಗೊಳ್ಳಲು ಇನ್ನೂ ಕೆಲವೇ ಗಂಟೆಗಳು ಉಳಿದಿದ್ದು, ರಾಜಕೀಯ ವಿಶ್ಲೇಷಕರು ತಮ್ಮದೇ ಆದ ರೀತಿಯಲ್ಲಿ ಲೆಕ್ಕಾಚಾರ ಮಾಡುತ್ತಿದ್ದಾರೆ.

ಬಿಸಿಲಿನ ಬೇಗೆಗಿಂತಲೂ ಅಧಿಕವಾಗಿ ಜಿಲ್ಲೆಯಲ್ಲಿ ಚುನಾವಣೆ ಕಾವು ಏರಿತು. ಮತದಾರರ ಮನ ಸೆಳೆಯಲು ಎಲ್ಲಾ ಪಕ್ಷಗಳ ಅಭ್ಯರ್ಥಿಗಳು ಹಾಗೂ ಮುಖಂಡರು ನಾನಾ ಕಸರತ್ತು ನಡೆಸಿದ್ದರು. ಆರೋಪ–ಪ್ರತ್ಯಾರೋಪ ಹಾಗೂ ಹೊಸ ಭರವಸೆಗಳನ್ನು ನೀಡುವುದು, ಸಿನಿಮಾ ನಟರು, ರಾಜಕೀಯ ಪಕ್ಷಗಳ ಪ್ರಮುಖ ನಾಯಕರ ಆಗಮನ, ಮನೆ–ಮನೆಗೂ ಅಭ್ಯರ್ಥಿಗಳ ಭೇಟಿ ಈಗೇ ಹಲವು ರೀತಿಯ ಮತದಾರರ ಸೆಳೆಯಲು ಅಭ್ಯರ್ಥಿಗಳು ಅನುಸರಿಸಿದ್ದ ಎಲ್ಲಾ ತಂತ್ರಗಳು ಮುಕ್ತಾಯವಾಗಿದೆ.

ದೇವಸ್ಥಾನಗಳ ಭೇಟಿ: ಮತದಾನ ಮುಕ್ತಾಯಗೊಂಡ ಬೆನ್ನಲ್ಲೇ ಅಭ್ಯರ್ಥಿಗಳು ಜಿಲ್ಲೆಯ ಪ್ರಮುಖ ದೇವಾಲಯಗಳಿಗೆ ಭೇಟಿ ನೀಡುವ ಮೂಲಕ ದೇವರ ಮೊರೆ ಹೋಗಿದ್ದಾರೆ. ಕೆಲವು ಅಭ್ಯರ್ಥಿಗಳು ಹಾಗೂ ಅವರ ಬೆಂಬಲಿಗರು ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಮಾಡಿಸುತ್ತಿದ್ದಾರೆ.

ಬೂತ್ ಮಟ್ಟದಲ್ಲಿ ಲೆಕ್ಕಾಚಾರ: ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಿಗೆ ಬುಧವಾರ ಮತದಾನ ಅಂತ್ಯಗೊಳ್ಳುತ್ತಿದ್ದಂತೆ ಈಗ ಬೂತ್‌ಮಟ್ಟದಲ್ಲಿ ನಡೆದಿರುವ ಶೇಕಡವಾರು ಮತ ಚಲಾವಣೆಯ ಲೆಕ್ಕವಿಟ್ಟುಕೊಂಡು ತಾಳೆ ಹಾಕುವ ಕೆಲಸದಲ್ಲಿ ರಾಜಕೀಯ ಪಕ್ಷಗಳ ಮುಖಂಡರು ಮಗ್ನರಾಗಿದ್ದಾರೆ.

ಇಡೀ ದಿನ ಕ್ಷೇತ್ರದ ಮತಗಟ್ಟೆಗಳಲ್ಲಿ ಕಾಣಿಸಿಕೊಂಡ ಮತದಾರರನ್ನೇ ನೋಡಿ ಲೆಕ್ಕ ಹಾಕುವ ಕೆಲಸವೂ ನಡೆದಿದೆ. ತಮ್ಮ ಪಕ್ಷದ ಮತದಾರರೆಂದು ಗುರುತಿಸಿಕೊಂಡಿರುವ ರಾಜಕೀಯ ಪಕ್ಷಗಳಿಗೆ ಶೇ. 60ರಿಂದ 70ರಷ್ಟು ಲೆಕ್ಕ ಸಿಗುವುದೇ ಇಲ್ಲಿಂದ. ಇನ್ನುಳಿದ ಲೆಕ್ಕವನ್ನು ಚಲಾವಣೆಯಾದ ಮತಗಳ ಆಧಾರದ ಮೇಲೆ ಹಾಕುತ್ತಾರೆ. ಹೀಗಾಗಿ ಬೂತ್‌ಮಟ್ಟದಲ್ಲಿ ಬೆಳಗ್ಗೆಯಿಂದ ಸಂಜೆಯವರೆಗೂ ಮತದಾರರ ಪಟ್ಟಿ ಹಿಡಿದು ಕುಳಿತಿದ್ದ ಪಕ್ಷದ ಕಾರ್ಯಕರ್ತರು ಕೊಡುವ ಲೆಕ್ಕದ ಮೇಲೆ ಅರ್ಥಿಗಳು ಸೋಲು–ಗೆಲುವಿನ ಲೆಕ್ಕ ಹಾಕುತ್ತಾರೆ.

ಜೊತೆಗೆ ತಟಸ್ಥ ಮತದಾರರೆಂದು ಗುರುತಿಸಿಕೊಂಡಿರುವರ ಸ್ಪಂದನೆ ಯಾವ ಪಕ್ಷ ಯಾವ ಅಭ್ಯರ್ಥಿ ಪರವಾಗಿತ್ತೆಂಬುದನ್ನು ಅವರದೇ ಆದ ಮೂಲಗಳು ಕೊಡುವ ವರದಿಗಳ ಆಧಾರದ ಮೇಲೆ ಅಭ್ಯರ್ಥಿಗಳು ಲೆಕ್ಕಾಚಾರ ಮಾಡುತ್ತಾರೆ. ಈ ರೀತಿ ನಾನಾ ಲೆಕ್ಕಾಚಾರಗಳು ಶುಕ್ರವಾರದ ಸಂಜೆವರೆಗೂ ನಡೆಯುತ್ತಲೇ ಇರುತ್ತವೆ.

19 ವರ್ಷಗಳ ರಾಜಕೀಯ ವನವಾಸ ಅಂತ್ಯವಾಗುವ ವಿಶ್ವಾಸ: ಎಆರ್‌ಕೆ



ಚಾಮರಾಜನಗರ, ಮೇ 11– ಈ ಬಾರಿಯ ಚುನಾವಣೆಯಲ್ಲಿ ಎಲ್ಲಾ ವರ್ಗದ ಜನರು ನನ್ನನ್ನು ಬೆಂಬಲಿಸಿರುವುದರಿಂದ ಗೆಲ್ಲುವ ವಿಶ್ವಾಸ ಇದೆ ಎಂದು ಕೊಳ್ಳೇಗಾಲ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎ.ಆರ್. ಕೃಷ್ಣಮೂರ್ತಿ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಸಮೀಪದ ಬೇಡರಪುರದಲ್ಲಿರುವ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸ್ಥಾಪಿಸಲಾಗಿರುವ ಮತ ಎಣಿಕೆ ಕೇಂದ್ರಕ್ಕೆ ಗುರುವಾರ ಭೇಟಿ ನೀಡಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಈ ಬಾರಿಯ ಚುನಾವಣೆಯಲ್ಲಿ ಗೆಲುವು ಸಾಧಿಸುವ ಮೂಲಕ ನನ್ನ 19ವರ್ಷಗಳ ರಾಜಕೀಯ ವನವಾಸ ಅಂತ್ಯವಾಗುವ ವಿಶ್ವಾಸ ಇದೆ. ಕೊಳ್ಳೇಗಾಲ ಕ್ಷೇತ್ರದ ಮತದಾರರು ಈ ಬಾರಿ ನನ್ನನ್ನು ಆಶೀರ್ವಾದಿಸಲಿದ್ದಾರೆ ಎಂಬ ವಿಶ್ವಾಸ ನನ್ನಲಿದೆ ಎಂದು ತಿಳಿಸಿದರು.

2004ರ ಚುನಾವಣೆಯಲ್ಲಿ ನಾನು ಕೇವಲ ಒಂದು ಮತದ ಅಂತರದಿಂದ ಸೋತು ನಂತರ ನಾಲ್ಕು ವಿಧಾನಸಭೆ ಹಾಗೂ ಎರಡು ಲೋಕಸಭೆ ಚುನಾವಣೆಯಲ್ಲಿ ಸೋತಿದ್ದೇನೆ. ಈ ಬಾರಿ ಬಿಎಸ್ ಪಿ ಹಾಗೂ ಜೆಡಿಎಸ್ ಬಂಡಾಯ ಅಭ್ಯರ್ಥಿಗಳ ಬೆಂಬಲ ಸಿಕ್ಕಿದೆ. ಎಲ್ಲಾ ವರ್ಗದ ಜನರು ಬೆಂಬಲಿಸಿದ್ದಾರೆ. ಹೀಗಾಗಿ, ಗೆಲ್ಲುವ ವಿಶ್ವಾಸ ಹೊಂದಿರುವುದಾಗಿ ಎಆರ್‌ಕೆ ತಿಳಿಸಿದರು.

ನಾಳೆ ಮತ ಎಣಿಕೆ: ಜಿಲ್ಲಾಡಳಿತ ಸಕಲ ಸಜ್ಜು

ಚಾಮರಾಜನಗರ, ಮೇ 11– ಜಿಲ್ಲೆಯಲ್ಲಿ ನಡೆದ ನಾಲ್ಕು ವಿಧಾನಸಭಾ ಕ್ಷೇತ್ರಗಳ ಚುನಾವಣಾ ಮತಎಣಿಕೆ ಕಾರ್ಯವು ಮೇ 13 ರಂದು ನಡೆಯಲಿದ್ದು ಇದಕ್ಕಾಗಿ ಜಿಲ್ಲಾಡಳಿತದ ವತಿಯಿಂದ ಸಕಲ ಸಿದ್ಧತೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ತಿಳಿಸಿದ್ದಾರೆ.

ಜಿಲ್ಲೆಯ ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ ಹಾಗೂ ಹನೂರು ವಿಧಾನಸಭಾ ಕ್ಷೇತ್ರಗಳಿಗೆ ಮತದಾನ ನಡೆದಿದೆ. ಈ ನಾಲ್ಕು ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ಕಾರ್ಯವು ಮೇ 13 ರಂದು ನಗರದ ಹೊರವಲಯದ ಬೇಡರಪುರದಲ್ಲಿರುವ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆಯಲಿದೆ. ಮತ ಎಣಿಕೆ ಕಾರ್ಯ ಬೆಳಗ್ಗೆ 8 ಗಂಟೆಗೆ ಆರಂಭವಾಗಲಿದೆ.

ಅಂಚೆ ಮತಪತ್ರಗಳ(ಪೋಸ್ಟಲ್ ಬ್ಯಾಲೆಟ್) ಎಣಿಕೆ ಕಾರ್ಯವು 2 ಟೇಬಲ್‌ಗಳಲ್ಲಿ ನಡೆಯಲಿದೆ. ಇಟಿಪಿಬಿಎಸ್ ಮತ ಎಣಿಕೆಗೆ 1 ಟೇಬಲ್ ಇರಲಿದೆ. ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ 18 ಸುತ್ತಿನಲ್ಲಿ ಹಾಗೂ ಹನೂರು ವಿಧಾನಸಭಾ ಕ್ಷೇತ್ರದ ಮತ ಎಣಿಕೆ 19 ಸುತ್ತುಗಳಲ್ಲಿ ನಡೆಯಲಿದೆ. ಪ್ರತಿ ವಿಧಾನಸಭಾ ಕ್ಷೇತ್ರದ ಮತ ಎಣಿಕೆಯು 14 ಟೇಬಲ್(ಮೇಜು)ಗಳಲ್ಲಿ ನಡೆಯಲಿದೆ. ಪ್ರತಿ ಟೇಬಲ್‌ಗೆ ತಲಾ ಓರ್ವ ಮತ ಎಣಿಕೆ ಮೇಲ್ವಿಚಾರಕರು, ಮತ ಎಣಿಕೆದಾರರು ಹಾಗೂ ಓರ್ವ ಮೈಕ್ರೋ ಅಬ್ಸರ್‌ವರ್ ಇರಲಿದ್ದಾರೆ.

ಮತ ಎಣಿಕೆ ಅಧಿಕಾರಿ ಸಿಬ್ಬಂದಿಗೆ ಈಗಾಗಲೇ ಎರಡು ಹಂತದ ತರಬೇತಿ ನೀಡಲಾಗಿದೆ. ಮತ ಎಣಿಕೆ ಕೇಂದ್ರದಲ್ಲಿ ವಿಧಾನಸಭಾ ಕ್ಷೇತ್ರವಾರು ಮತ ಎಣಿಕೆಗೆ ಅಗತ್ಯವಿರುವ ಮೇಜುಗಳು, ಪ್ರತಿ ಸುತ್ತಿನ ಮತ ಎಣಿಕೆ ಕಾರ್ಯ ಪೂರ್ಣಗೊಂಡ ಬಳಿಕ ಮತ ಎಣಿಕೆಯ ವಿವರ ನೀಡಲು ಅಗತ್ಯ ಕಂಪ್ಯೂಟರ್, ಇಂಟರ್‌ನೆಟ್ ಸೇರಿದಂತೆ ಸಂಪರ್ಕ ಸಾಧನಗಳ ವ್ಯವಸ್ಥೆ ಮಾಡಲಾಗಿದೆ. ಮಾಧ್ಯಮ ಕೇಂದ್ರ ಸಹ ತೆರೆಯಲಾಗಿದೆ.

ಮತ ಎಣಿಕೆ ಸ್ಥಳದಲ್ಲಿ ಅಭ್ಯರ್ಥಿಗಳು ಹಾಗೂ ಅವರ ಪರ ಏಜೆಂಟ್‌ರವರು ಕುಳಿತುಕೊಳ್ಳಲು ಆಸನಗಳ ವ್ಯವಸ್ಥೆ ಮಾಡಲಾಗಿದೆ. ಮತ ಎಣಿಕೆ ಕೇಂದ್ರ ಪ್ರವೇಶಿಸಲು ಈ ಎಲ್ಲರಿಗೂ ಪಾಸ್‌ಗಳನ್ನು ವಿತರಿಸಲಾಗಿದೆ. ಮತ ಎಣಿಕೆ ಕೇಂದ್ರದಲ್ಲಿ ಮತ ಎಣಿಕೆ ಅಧಿಕಾರಿ ಸಿಬ್ಬಂದಿಗೆ ಉಪಹಾರ ವ್ಯವಸ್ಥೆ ಮಾಡಲಾಗಿದೆ. ಅಭ್ಯರ್ಥಿಗಳು ಹಾಗೂ ಅವರ ಏಜೆಂಟರಿಗೆ ಮತ ಎಣಿಕೆ ಕೇಂದ್ರದಲ್ಲಿ ಹಣ ಪಾವತಿಸಿ ಉಪಹಾರ, ಕಾಫಿ, ಚಹಾ ಪಡೆಯಲು ಖಾಸಗಿ ತಾತ್ಕಾಲಿಕ ಉಪಹಾರ ಗೃಹ ತೆರೆಯಲಾಗಿದೆ.

ಮತ ಎಣಿಕೆ ಕೇಂದ್ರಕ್ಕೆ ಬರುವ ಅಧಿಕಾರಿ, ಸಿಬ್ಬಂದಿ, ಅಭ್ಯರ್ಥಿಗಳು, ಏಜೆಂಟರಿಗೆ ವಾಹನ ನಿಲುಗಡೆಗಾಗಿ ಸ್ಥಳಾವಕಾಶ ಮಾಡಲಾಗಿದೆ. ಬೆಳಗ್ಗೆ ಎಂಟು ಗಂಟೆಗೆ ಮತ ಎಣಿಕೆ ಕಾರ್ಯ ಪ್ರಾರಂಭಗೊಳ್ಳಲಿದ್ದು ಇದಕ್ಕೂ ಮೊದಲೇ ಎಲ್ಲರೂ ಹಾಜರಿರಬೇಕು. ಮತ ಎಣಿಕೆ ಪ್ರವೇಶಕ್ಕಾಗಿ ನೀಡಲಾಗಿರುವ ಪಾಸುಗಳನ್ನು ಹಾಜರುಪಡಿಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಯವರಾದ ಡಿ.ಎಸ್. ರಮೇಶ್ ಅವರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಮೊಬೈಲ್ ನಿಷೇಧ

ಚಾಮರಾಜನಗರ, ಮೇ 11– ವಿಧಾನಸಭಾ ಕ್ಷೇತ್ರಗಳ ಚುನಾವಣೆಯ ಮತ ಎಣಿಕೆ ಕಾರ್ಯವು ನಗರದ ಹೊರವಲಯದ ಬೇಡರಪುರ ದಲ್ಲಿರುವ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆಯಲಿದ್ದು, ಮತ ಎಣಿಕೆ ಕೇಂದ್ರ ಪ್ರವೇಶಿಸುವುವವರಿಗೆ ಮೊಬೈಲ್ ತರುವುದನ್ನು ನಿಷೇಧಿಸಲಾಗಿದೆ.

ಮತ ಎಣಿಕೆ ಕೇಂದ್ರಕ್ಕೆ ಮೊಬೈಲ್ ಸೇರಿದಂತೆ ಯಾವುದೇ ಎಲೆಕ್ಟ್ರಾನಿಕ್ ಉಪಕರಣ, ಸಂಪರ್ಕ ಸಾಧನಗಳನ್ನು ತರುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ತಿಳಿಸಿದ್ದಾರೆ.

ಭದ್ರತಾ ಕೊಠಡಿ ಸೇರಿದ ಮತಯಂತ್ರ



ಚಾಮರಾಜನಗರ, ಮೇ 11– ಚಾಮರಾಜನಗರ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳ 982 ಮತಗಟ್ಟೆಗಳಲ್ಲಿ ಬುಧವಾರ ಮತದಾನ ಪೂರ್ಣಗೊಂಡ ಬಳಿಕ ಎಲ್ಲಾ ವಿದ್ಯುನ್ಮಾನ ಮತಯಂತ್ರಗಳು ಮತ್ತು ವಿವಿ ಪ್ಯಾಟ್‌ಗಳನ್ನು ತಂದು ಚಾಮರಾಜನಗರದ ಹೊರ ವಲಯದ ಬೇಡರಪುರದಲ್ಲಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಭದ್ರತಾ ಕೊಠಡಿಗಳಲ್ಲಿ ಭಾರಿ ಭದ್ರತೆಯಲ್ಲಿ ಇರಿಸಲಾಗಿದೆ.

ಬುಧವಾರ ಬೆಳಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಮತದಾನ ನಡೆಯಿತು. ಕ್ಷೇತ್ರದ ಒಟ್ಟು 8,61,489 ಮತದಾರರ ಪೈಕಿ 7,03,835 ಮಂದಿ ಮತ ಚಲಾಯಿಸಿದ್ದಾರೆ. ಒಟ್ಟು ಶೇಕಡ 81.70ರಷ್ಟು ದಾಖಲೆಯ ಮತದಾನವಾಗಿದೆ. 982 ಮತಗಟ್ಟೆಗಳಲ್ಲಿ ನಡೆದ ಮತದಾನಕ್ಕೆ 1483 ಬ್ಯಾಲೆಟ್ ಯೂನಿಟ್ (ಬಿಯು), 1177 ಕಂಟ್ರೋಲ್ ಯೂನಿಟ್ (ಸಿಯು), 1274 ವಿವಿ ಪ್ಯಾಟ್ ಹಂಚಿಕೆ ಮಾಡಲಾಗಿತ್ತು. ಮತದಾನ ಪೂರ್ಣಗೊಂಡ ಬಳಿಕ ಮತಗಟ್ಟೆ ಸಿಬ್ಬಂದಿ ಮತಗಟ್ಟೆ ಏಜೆಂಟರ ಸಮ್ಮುಖದಲ್ಲಿ ಇವಿಎಂ ಮತ್ತು ವಿವಿ ಪ್ಯಾಟ್‌ಗಳನ್ನು ಮೊಹರು ಮಾಡಿದರು. ಬಳಿಕ ಅವುಗಳನ್ನು ಆಯಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಮಸ್ಟರಿಂಗ್ ಕೇಂದ್ರಗಳಿಗೆ ತಂದು ಡಿಮಸ್ಟರಿಂಗ್ ಪ್ರಕ್ರಿಯೆ ನಡೆಸಲಾಯಿತು. ದೂರದ ಮತಗಟ್ಟೆಗಳಿಂದ ಮತಯಂತ್ರಗಳು ಬಂದು ತಲಪುವುದು ವಿಳಂಬವಾಯಿತು. ಇದರಿಂದಾಗಿ ಡಿಮಸ್ಟರಿಂಗ್ ಪ್ರಕ್ರಿಯೆ ಮುಗಿಯುವಾಗ ಮಧ್ಯರಾತ್ರಿ ಕಳೆದಿತ್ತು.

ಭಾರಿ ಭದ್ರತೆ: ಡಿಮಸ್ಟರಿಂಗ್ ಕೇಂದ್ರಗಳಿಂದ ಬಿಗಿ ಪೊಲೀಸ್ ಭದ್ರತೆಯಲ್ಲಿ ಮತಯಂತ್ರ ಮತ್ತು ವಿವಿ ಪ್ಯಾಟ್‌ಗಳನ್ನು ಚಾಮರಾಜನಗರದ ಹೊರವಲಯದ ಬೇಡರಪುರದಲ್ಲಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿಗೆ ತಂದು ಭದ್ರತಾ ಕೊಠಡಿಯಲ್ಲಿ ಇರಿಸಲಾಗಿದ್ದು, ಪೊಲೀಸರ ಸರ್ಪಗಾವಲಿನ ವ್ಯವಸ್ಥೆ ಮಾಡಲಾಗಿದೆ.

ಎಣಿಕೆ ಕೇಂದ್ರದ ನಾಲ್ಕು ಕೊಠಡಿಗಳಲ್ಲಿ ಮತಯಂತ್ರಗಳನ್ನು ಇರಿಸಲಾಗಿದ್ದು, ಮೂರು ಪಾಳಯದಲ್ಲಿ ಪೊಲೀಸರು ಬಂದೋಬಸ್ತ್ ಕೈಗೊಂಡಿದ್ದಾರೆ. ಮೇ 13ರಂದು ಮತ ಎಣಿಕೆ ನಡೆಯಲಿದ್ದು, ಜಿಲ್ಲೆಯ ನಾಲ್ಕು ಕ್ಷೇತ್ರಗಳಿಂದ ಸ್ಪರ್ಧಿಸಿರುವ ಒಟ್ಟು61 ಅಭ್ಯರ್ಥಿಗಳ ಭವಿಷ್ಯ ನಿರ್ಧಾರವಾಗಲಿದೆ.

ಮೂರನೇ ಪುಟದಿಂದ

ಜೆಡಿಎಸ್ ದೋಸ್ತಿಗೆ ಬಿಜೆಪಿ ತರಾತುರಿ

ರಚನೆ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು. ಅಂದು ಕುಮಾರಸ್ವಾಮಿ ಅವರನ್ನೇ ಮುಖ್ಯಮಂತ್ರಿಯನ್ನಾಗಿ ಮಾಡಲಾಗಿತ್ತು. ಇನ್ನೊಂದೆಡೆ ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರ ಹಿಡಿಯಲು ಹರಸಾಹಸ ನಡೆಸಿದೆ. ತಮಗೆ 120ರಿಂದ 130 ಸ್ಥಾನಗಳು ಲಭ್ಯವಾಗಲಿವೆ ಎಂಬ ಲೆಕ್ಕಾಚಾರದಲ್ಲಿ ಆ ಪಕ್ಷದ ನಾಯಕರು ಒಂದು ವೇಳೆ ಕೊರತೆಯಾದಲ್ಲಿ ಜೆಡಿಎಸ್ ಸಹಕಾರ ಪಡೆಯಲು ಚಿಂತನೆ ನಡೆಸಿದ್ದಾರೆ. ಕರ್ನಾಟಕದಲ್ಲಿ ಪಕ್ಷ ಮೇಲುಗೈ ಸಾಧಿಸಲಿದೆ ಎಂಬ ಮಾಹಿತಿ ಬರುತ್ತಿದ್ದಂತೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಉಸ್ತುವಾರಿ ಹೊಣೆ ಹೊತ್ತ ರಣದೀಪ್‌ಸಿಂಗ್ ಸುರ್ಜೇವಾಲ, ರಾಜ್ಯಕ್ಕೆ ದಿಢೀರನೆ ಆಗಮಿಸಿ, ಇಲ್ಲಿನ ಮುಖಂಡರೊಟ್ಟಿಗೆ ನಿರಂತರ ಚರ್ಚೆಯಲ್ಲಿ ತೊಡಗಿಸಿಕೊಂಡಿದ್ದಾರೆ. ನಗರಕ್ಕೆ ಬರುತ್ತಿದ್ದಂತೆ ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರ ಮನೆಗೆ ತೆರಳಿದ ಸುರ್ಜೇವಾಲ ಸುಮಾರು ಒಂದೂವರೆ ಗಂಟೆಗೂ ಹೆಚ್ಚು ಕಾಲ ಮುಖಾಮುಖಿ ಚರ್ಚೆ ನಡೆಸಿದರು. ಆನಂತರ ಕೆಪಿಸಿಸಿ ಅಧ್ಯಕ್ಷ ಶಿವಕುಮಾರ್ ಅವರನ್ನು ಕರೆಸಿಕೊಂಡು ಸಮಾಲೋಚನೆ ಮಾಡಿದರು. ಇದಕ್ಕೂ ಮುನ್ನ ಶಿವಕುಮಾರ್ ತಮ್ಮ ತೋಟದ ಮನೆಯಲ್ಲೇ ಕುಳಿತು, ಅಧಿಕಾರ ಹಿಡಿಯಲು ರಾಜಕೀಯ ಲೆಕ್ಕಾಚಾರ, ತಮ್ಮ ಸಹೋದರ ಸುರೇಶ್ ಜೊತೆಗೂಡಿ, ಕೆಲವರನ್ನು ಸಂಪರ್ಕಿಸಿ, ಸಮಾಲೋಚನೆ ಮಾಡಿದರು.

ಅಷ್ಟೇ ಅಲ್ಲ, ಪಕ್ಷೇತರರಾಗಿ ವಿಧಾನಸಭೆಗೆ ಆರು ಮಂದಿ ಆಯ್ಕೆಗೊಳ್ಳಬಹುದೆಂಬ ವರದಿಯ ಹಿನ್ನೆಲೆಯಲ್ಲಿ ಅವರನ್ನೂ ಸಂಪರ್ಕಿಸಿ ಬೆಂಬಲ ಕೋರಿದ್ದಾರೆ.

ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಪಕ್ಷೇತರರು ವಿಧಾನಸಭೆಗೆ ಆಯ್ಕೆಗೊಂಡರೆ ಅಂತಹವರನ್ನು ತಕ್ಷಣವೇ ಬೆಂಗಳೂರಿಗೆ ಕರೆತರಲು ನಾಲ್ಕು ಹೆಲಿಕ್ಯಾಪ್ಟರ್‌ಗಳನ್ನು ಸಿದ್ಧಪಡಿಸಿದ್ದು, ಇದಕ್ಕಾಗಿ ಒಂದು ತಂಡವನ್ನೇ ರಚಿಸಿದ್ದಾರೆ.

ವ್ಯಕ್ತಿಗೆ ಸಿಡಿಲು ಬಡಿದು ಸಾವು

ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಮಾದರಹಳ್ಳಿ ಸಮೀಪದ ಹರಳಹಳ್ಳಿ ಸರ್ಕಲ್ ಬಳಿ ಗುರುವಾರ ಸಂಜೆ ಸಂಭವಿಸಿದೆ. ತಾಲೂಕಿನ ವೈದ್ಯನಾಥಪುರ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿ ಮಧು (35) ಸಿಡಿಲಿಗೆ ಬಲಿಯಾದವರಾಗಿದ್ದು, ಇವರು ಪತ್ನಿಯನ್ನು ತಾಲೂಕಿನ ಕಾಡುಕೊತ್ತನಹಳ್ಳಿ ಗ್ರಾಮಕ್ಕೆ ಬಿಟ್ಟು ವಾಪಸ್ ಬರುವಾಗ ಜೋರಾಗಿ ಮಳೆ ಶುರುವಾದ ಪರಿಣಾಮ ಹೆಲ್ಮೆಟ್ ಹಾಕಿಕೊಂಡೆ ಮರದ ನೆರಳಿನಲ್ಲಿ ಆಸರೆ ಪಡೆದಿದ್ದರು. ಇದೇ ಸಂದರ್ಭದಲ್ಲಿ ಮೊಬೈಲ್‌ನಲ್ಲಿ ಯಾರೊಂದಿಗೂ ಮಾತನಾಡುವಾಗ ಸಿಡಿಲು ಬಡಿದ ಪರಿಣಾಮ ಅವರು ಸಾವನ್ನಪ್ಪಿದ್ದು, ಮೊಬೈಲ್ ಸಹ ಛಿದ್ರವಾಗಿದೆ. ಎರಡು ವರ್ಷದ ಹಿಂದೆ ಮದುವೆಯಾಗಿದ್ದ ಮಧು ಅವರಿಗೆ 9 ತಿಂಗಳ ಮಗು ಇದೆ. ಘಟನಾ ಸ್ಥಳಕ್ಕೆ ಕೆ.ಎಂ.ದೊಡ್ಡಿ ಇನ್ಸ್‌ಪೆಕ್ಟರ್ ಆನಂದ ಭೇಟಿ ನೀಡಿ, ಪರಿಶೀಲಿಸಿದರು.

ಇನ್ನು ಬಿರುಗಾಳಿ ಸಹಿತ ಮಳೆಗೆ ಸಿಡಿಲಿನ ಶಬ್ದ ಜೋರಾಗಿ ಅಬ್ಬರಿಸಿದ ಪರಿಣಾಮ ಮದ್ದೂರು ಪಟ್ಟಣದ ಶಿವಪುರ ನಿವಾಸಿ ಗೌರಮ್ಮ (60) ಮನೆಯಲ್ಲಿ ಕುಸಿದು ಬಿದ್ದಿದ್ದಾರೆ. ತಕ್ಷಣ ಅವರನ್ನು ಆಸ್ಪತ್ರೆಗೆ ರವಾನಿಸಿದರಾದರೂ ಮಾರ್ಗ ಮಧ್ಯೆ ಸಾವನ್ನಪ್ಪಿದ್ದಾರೆ. ಮದ್ದೂರು ತಾಲೂಕಿನ ಮಾಲಗಾರನಹಳ್ಳಿ, ಕೋಡಿಹಳ್ಳಿಯಲ್ಲಿ ಭಾರೀ ಮಳೆಗೆ ವಿದ್ಯುತ್ ಕಂಬಗಳು ನೆಲಕ್ಕುರುಳಿದರೆ, ಮನೆಯ ಮೇಲ್ಚಾವಣಿ ಮುರಿದಿದೆ. ಜೊತೆಗೆ ವಿದ್ಯುತ್ ವ್ಯತ್ಯಯ ಸಹ ಸಂಭವಿಸಿದೆ.

ಬೆಂ-ಮೈ ರಸ್ತೆಯಲ್ಲಿ ಸಂಚಾರ ವ್ಯತ್ಯಯ: ಇದಲ್ಲದೇ ಮದ್ದೂರು ಪಟ್ಟಣದ ಬೆಂಗಳೂರು- ಮೈಸೂರು ರಾಷ್ಟ್ರೀಯ ಹೆದ್ದಾರಿಯ ಡಾ.ಬಿ.ಆರ್.ಅಂಬೇಡ್ಕರ್ ಭವನದ ಬಳಿ ಬೃಹತ್ ಮರವೊಂದು ಉರುಳಿಬಿದ್ದ ಪರಿಣಾಮ ಸರ್ವೀಸ್ ರಸ್ತೆಯಲ್ಲಿ ಸಂಚಾರಕ್ಕೆ ಅಡ್ಡಿಯಾಗಿದೆ. ಎಕ್ಸ್‌ಪ್ರೆಸ್ ವೇ ಸೇತುವೆ ಮೇಲಿಂದ ಮಳೆ ನೀರು ಸರ್ವೀಸ್ ರಸ್ತೆಗೆ ಅಪಾರ ಪ್ರಮಾಣದಲ್ಲಿ ಹರಿದು ಬರುತ್ತಿರುವ ಕಾರಣ ದ್ವಿಚಕ್ರ ಹಾಗೂ ಕಾರು ಸವಾರರು ಸಂಚರಿಸಲು ಸಮಸ್ಯೆಯಾಗಿದೆ. ಇದಲ್ಲದೇ ಚನ್ನಪಟ್ಟಣ, ರಾಮನಗರದಲ್ಲೂ ಭಾರೀ ಮಳೆಯಿಂದ ಬೆಂಗಳೂರು- ಮೈಸೂರು ರಾಷ್ಟ್ರೀಯ ಹೆದ್ದಾರಿಗೆ ನೀರು ತುಂಬಿಕೊಂಡು ವಾಹನ ಸವಾರರು ಸಂಚರಿಸಲು ಪರದಾಡುತ್ತಿದ್ದಾರೆ.

ಉಪ್ಪು ಮುಟ್ಟಿ ಪ್ರಮಾಣ

ಮೂಲ ಕಾಂಗ್ರೆಸ್ಸಿಗರಲ್ಲಿ ನನಗೆ ಬೆಂಬಲವಾಗಿ ನಿಂತವರಲ್ಲಿ ಪ್ರಮುಖರು ರಾಕೇಶ್ ಪಾಪಣ್ಣ. ಇವರಲ್ಲದೆ, ಹಲವರು ಕಾಂಗ್ರೆಸ್ ಮುಖಂಡರು ಬೆಂಬಲವಾಗಿ ನಿಂತರು ಎಂದು ಕೆಲವರ ಹೆಸರು ಹೇಳಿದರು. ಸಿದ್ದರಾಮಯ್ಯ ಸಾಹೇಬರಿಗೆ ವಾಸ್ತವಾಂಶ ಗೊತ್ತಿಲ್ಲ. ಮರೀಗೌಡ, ಉದ್ಬೂರು ಕೃಷ್ಣ, ಕೋಟೆಹುಂಡಿ ಮಹದೇವ್, ಕೋಟೆಹುಂಡಿ ಗೋಪಾಲ್, ರಮ್ಮನಹಳ್ಳಿಯ ಪೈಲ್ವಾನ್ ಶಿವು ಸೇರಿದಂತೆ ಹಲವರು ಸಿದ್ದರಾಮಯ್ಯರಲ್ಲಿ ನನ್ನ ಬಗ್ಗೆ ಚಾಡಿ ಹೇಳಿದ್ದಾರೆ. ಆಗ ಸಿದ್ದರಾಮಯ್ಯನವರಿಗೆ ಬೇಸರವಾಗಿ ನನ್ನ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿರಬಹುದು. ಸಿದ್ದರಾಮಯ್ಯನವರೊಂದಿಗೆ ಮಾತನಾಡಲು ನನಗೆ ಸಮಯ ಆಗಿಲ್ಲ. ಮತ ಎಣಿಕೆ ಆದ ಬಳಿಕ ಭೇಟಿ ಮಾಡುತ್ತೇನೆ ಎಂದರು. ಕಾಂಗ್ರೆಸ್‌ನಿಂದ ಶ್ರೀರಾಂಪುರ ಪತ್ತಿನ ಸಹಕಾರ ಸಂಘದ ನಿರ್ದೇಶಕ ಸ್ಥಾನ ಪಡೆದ ಕೋಟೆಹುಂಡಿ ಗೋಪಾಲ್, ಎಂಸಿಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ಜೆಡಿಎಸ್‌ಗೆ ಓಟ್ ಮಾಡಿದ. ಈತ ನನ್ನ ವಿರುದ್ಧ ನಿನ್ನೆ ಚಾಡಿ ಹೇಳಿದ್ದಾನೆ. ರಮ್ಮನಹಳ್ಳಿಯಲ್ಲಿ ಪೈಲ್ವಾನ್ ಶಿವು ಎಲ್ಲಾ ಉಪಯೋಗ ನಮ್ಮಿಂದ ಪಡೆದು, ನಿನ್ನೆ ನಾನು ರಮ್ಮನಹಳ್ಳಿಗೆ ಹೋದಾಗ, ಬಿಜೆಪಿಯವರು ಕೊಟ್ಟ ಹಣ ಹಂಚಿಕೆ ಮಾಡುತ್ತಿದ್ದ. ಈತನೂ ನಿನ್ನೆ ಸಿದ್ದರಾಮಯ್ಯರಲ್ಲಿ ನನ್ನ ವಿರುದ್ಧ ದೂರು ಹೇಳಿದ್ದಾನೆ ಎಂದು ಕಿಡಿಕಾರಿದರು.

ನಾನು ಭಾರೀ ಮತಗಳ ಅಂತರದಲ್ಲಿ ಗೆಲ್ಲಲು ಸಾಧ್ಯವಾಗದಿದ್ದರೂ 1ರಿಂದ 2 ಸಾವಿರ ಮತಗಳ ಅಂತರದ ಗೆಲುವನ್ನು ಕ್ಷೇತ್ರದ ಜನತೆ ನೀಡಲಿದ್ದಾರೆ. ಮೂಲ ಕಾಂಗ್ರೆಸ್‌ನ ಕೆಲವರ ಚಾಡಿ ಮಾತುಗಳಿಗೆ ಸಿದ್ದರಾಮಯ್ಯನವರು ಮನ್ನಣೆ ನೀಡಬಾರದು. ಅವರನ್ನು ಕೈ ಮುಗಿದು ಕೇಳಿಕೊಳ್ಳುತ್ತೇನೆ. ಸತ್ಯಾಸತ್ಯತೆ ಪರಿಶೀಲಿಸಿ ಅವರು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು. ಮೇ 9ರಂದು ಏನೂ ಒಂದು ಸ್ವಲ್ಪ ಎಡವಟ್ಟು ಆಯಿತು. ಯಾರನ್ನೋ ನಂಬಿದ್ದೆವು. ಅವರು ಕೈಗೆ ಸಿಗಲಿಲ್ಲ. ನಾವು ನಾಲ್ಕು ಮಂದಿ ಅಣ್ಣತಮ್ಮಂದಿರು ಮನೆಯಲ್ಲೇ ಇದ್ದು ಸಮಸ್ಯೆ ಬಗೆಹರಿಸುವಲ್ಲಿ ನಿರತರಾಗಿದ್ದೆವು. ಆದರೆ ಅಂದು ಇಡೀ ಕ್ಷೇತ್ರದಲ್ಲಿ ನನ್ನ ವಿರುದ್ಧ 500ರಿಂದ 600 ಮಂದಿಯಿಂದ ಅಪಪ್ರಚಾರ ಮಾಡಿಸಲಾಯಿತು. ಜೆಡಿಎಸ್ ಕಾರ್ಯಕರ್ತರಿಗೆ ಸಿಕ್ಕಿದ್ದೇ ಸಾಕಾಯಿತು. ಅವರೂ ಅಪಪ್ರಚಾರದಲ್ಲಿ ತೊಡಗಿದರು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಸಿದ್ದರಾಮಯ್ಯವರು ಒಂದು ಅವಕಾಶ ಮಾಡಿಕೊಟ್ಟರು. ಕಾಂಗ್ರೆಸ್ ಬಿಟ್ಟು ಹೋಗಲ್ಲ. ಗೆದ್ದರು, ಸೋತರೂ ಕಾಂಗ್ರೆಸ್‌ನಲ್ಲೇ ಇರುತ್ತೇನೆ ಎಂದು ಹೇಳಿದರು.

ಬುಕ್ ಮಾಡಿಕೊಳ್ಳುವ ಜಾಯಮಾನ ನನ್ನದಲ್ಲ

ನೂರಕ್ಕೆ ನೂರು ಎಡವಿದ್ದಾರೆ. ಅನುಮಾನವೇ ಇಲ್ಲ. ಸಿದ್ದರಾಮಯ್ಯನವರಿಗೆ ಈ ಕ್ಷೇತ್ರಕ್ಕೆ ಯಾವ ಅಭ್ಯರ್ಥಿ ಆಯ್ಕೆ ಮಾಡಬೇಕೆಂದು ಗೊತ್ತಾಗಿಲ್ಲ. ತಾಪಂನಲ್ಲಿ ಅಪ್ಪ-ಮಗ ಸೋತಿದ್ದಾರೆ. ಅಲ್ಲದೆ, ಡೈರಿ ಮತ್ತು ಎಪಿಎಂಸಿಯಲ್ಲಿ ಸೋತವರನ್ನು ರಾಷ್ಟ್ರೀಯ ಪಕ್ಷಕ್ಕೆ ಕರೆತಂದ 15 ದಿನದಲ್ಲಿ ಅಭ್ಯರ್ಥಿ ಮಾಡಿದರು ಸಿದ್ದರಾಮಯ್ಯ. ಅವರಿಗೆ ಚಾಮುಂಡೇಶ್ವರಿ ಕ್ಷೇತ್ರ ಗೊತ್ತಾ? ಗೊತ್ತಿದ್ದರೆ ನಿಲ್ಲಿಸುತ್ತಿದ್ದರೆ ಎಂದು ಪ್ರಶ್ನಿಸಿದರು.

ಮಾವಿನಹಳ್ಳಿ ಸಿದ್ದೇಗೌಡರಿಗೆ ಯಾವ ಓಟು ಇದೆ ಎಂದು ನಾನು ಬುಕ್ ಮಾಡಲಿ. ಅವನ ಊರಲ್ಲೇ ಓಟಿಲ್ಲ. ನನ್ನ ಜೊತೆ 10 ವರ್ಷಗಳಿಂದ ಇದ್ದ ಈ ಪಂಚ ಪಾಂಡವರು ಜಿ.ಟಿ.ದೇವೇಗೌಡರನ್ನು ನಾವೇ ಗೆಲ್ಲಿಸಿದ್ದು ಎನ್ನುತ್ತಿದ್ದರು ಎಂದು ಕಿಡಿಕಾರಿದರು.

ಪ್ರಸ್ತುತದ ಚಾಮುಂಡೇಶ್ವರಿ ಕ್ಷೇತ್ರದ ಪರಿಸ್ಥಿತಿ ಸಿದ್ದರಾಮಯ್ಯನವರಿಗೆ ಗೊತ್ತಿಲ್ಲ. ಚಾಮುಂಡೇಶ್ವರಿ ಉಪಚುನಾವಣೆಯಲ್ಲಿ ನಾನು ಒಂದು ಹಳ್ಳಿಗೂ ಪ್ರಚಾರಕ್ಕೆ ಹೋಗಿರಲಿಲ್ಲ. ಈ ಚುನಾವಣೆಯಲ್ಲಿ ಸಿದ್ದರಾಮಯ್ಯ ವಿರುದ್ಧವಾಗಿ ನಾನು ಪ್ರಚಾರ ಮಾಡಲಿಲ್ಲ. ಮಾಡಿದ್ದರೆ ಸೋಲುತ್ತಿದ್ದರು ಎಂದು ತಿಳಿಸಿದರು.

ತಮ್ಮ ಪರವಾಗಿ ದುಡಿದ ಬಗ್ಗೆ ಒಮ್ಮೆ ಹೇಳಿಲ್ಲ: ನನ್ನ ಮಗನನ್ನು ನಿಲ್ಲಿಸುತ್ತಿದ್ದೆ ಎಂದು ಸಿದ್ದರಾಮಯ್ಯ ನಿನ್ನೆ ಹೇಳುತ್ತಾರೆ. ಮರೀಗೌಡ, ಸತ್ಯಪ್ಪನ ಮಗ, ಕೃಷ್ಣಕುಮಾರ್ ಇರಲಿಲ್ಲವೇ? ಅವರನ್ನಾದರೂ ನಿಲ್ಲಿಸಿದ್ದರೆ ಗೌರವಯುತವಾಗಿಯಾದರೂ ಸೋಲುತ್ತಿದ್ದರು. ಆದರೆ ಇಂತಹವರನ್ನು ಆಯ್ಕೆ ಮಾಡಿದ್ದು ಸಿದ್ದರಾಮಯ್ಯನವರೇ. ಅವರಿಗಾಗಿ ನಾನು 25 ವರ್ಷ ದುಡಿದಿದ್ದೇನೆ. ಅದನ್ನೇ ಅವರು ಒಂದು ದಿನ ಹೇಳಿಕೊಂಡಿಲ್ಲ. ನಾವೆಲ್ಲಾ ಸೇರಿ ಅವರು ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಲು ಸಹಾಯ ಮಾಡಿದೆವು. ಅವರು ಗೆದ್ದ ಮೇಲೆ 1987ರಲ್ಲಿ ಜಿಲ್ಲಾ ಪರಿಷತ್‌ನಲ್ಲಿ ನಾನು ಸ್ಪರ್ಧಿಸಿದಾಗ ಸಹಕಾರ ನೀಡಿದರು. 20 ವರ್ಷ ಕಾಲ ಪರಸ್ಪರ ಸಹಕಾರದಲ್ಲಿದ್ದೆವು ಎಂದು ಹೇಳಿದರು. ಚಾಮುಂಡೇಶ್ವರಿ ಆಶೀರ್ವಾದದಿಂದ ನಾನು ಪ್ರಚಾರಕ್ಕೆ ಹೋದಂತಹ ಸಂದರ್ಭದಲ್ಲಿ ಪ್ರತಿಯೊಂದು ಗ್ರಾಮದಲ್ಲೂ ಪೂರ್ಣಕುಂಭದೊಂದಿಗೆ ಜನ ಸ್ವಾಗತ ಮಾಡಿದರು. ಈ ಬಾರಿ ಚುನಾವಣೆಯಲ್ಲಿ ಜನರು ಭಾರೀ ಉತ್ಸಾಹದಿಂದ ಜಿ.ಟಿ.ದೇವೇಗೌಡರನ್ನು ಗೆಲ್ಲಿಸಬೇಕೆಂದು ಸಜ್ಜಾಗಿದ್ದಾರೆ. ಕಳೆದ ಬಾರಿಗಿಂತ ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸ್ಟ್ರಾಂಗ್ ರೂಂಗಳಿಗೆ ಭಾರೀ ಭದ್ರತೆ

ದಿನ ಕೇಂದ್ರಕ್ಕೆ ಹೆಚ್ಚುವರಿ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಸುತ್ತ ಬ್ಯಾರಿಕೇಡ್ ಅಳವಡಿಸಿ ಜನರು ಪ್ರವೇಶಿಸದಂತೆ ನಿರ್ಬಂಧಿಸಲಾಗುವುದು. ಜಿಲ್ಲೆಯ ಎಲ್ಲಾ 11 ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ಕಾರ್ಯ ಒಂದೇ ಕಡೆ ನಡೆಯುವುದರಿಂದ ಹೆಚ್ಚು ಮಂದಿ ಜನ ಜಮಾಯಿಸುವ ಕಾರಣ ನಿಯಂತ್ರಿಸಲು ಅಶ್ವಾರೋಹಿ ದಳದ ಸಿಬ್ಬಂದಿಗಳನ್ನೂ ಬಂದೋಬಸ್ತ್‌ಗೆ ಬಳಸಿಕೊಳ್ಳಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದರು. ಇವಿಎಂಗಳಿರುವ ಸ್ಟ್ರಾಂಗ್ ರೂಂಗೆ ಹೆಚ್ಚುವರಿ ಸಿಸಿ ಕ್ಯಾಮರಾಗಳನ್ನು ಅಳವಡಿಸಿ ತೀವ್ರ ನಿಗಾ ವಹಿಸಲಾಗುತ್ತಿದೆ. ಪ್ರವೇಶ ದ್ವಾರದಲ್ಲಿ ಮೆಟಲ್ ಡೋರ್ ಡಿಟೆಕ್ಟರ್ ಹಾಕಿ ತಪಾಸಣೆ ಮಾಡುತ್ತಿದ್ದು, ನಿಯೋಜಿತ ಚುನಾವಣಾ ಸಿಬ್ಬಂದಿ, ಭದ್ರತಾ ಪೊಲೀಸರು, ಪಾಸ್ ಹೊಂದಿರುವವರನ್ನು ಹೊರತುಪಡಿಸಿ ಬೇರೆ ವ್ಯಕ್ತಿಗಳನ್ನು ಮತ ಎಣಿಕಾ ಕೇಂದ್ರಕ್ಕೆ ಪ್ರವೇಶಿಸದಂತೆ ಕಟ್ಟೆಚ್ಚರ ವಹಿಸಲಾಗುತ್ತಿದೆ ಎಂದ ಅವರು, ಇಡೀ ಮತ ಎಣಿಕಾ ಕೇಂದ್ರ ಸಿಐಎಸ್‌ಎಫ್ ವಶದಲ್ಲಿದ್ದು, ಮತ ಎಣಿಕೆಗೆ ನಿಯೋಜನೆಗೊಂಡಿರುವ ಅಧಿಕಾರಿ, ಸಿಬ್ಬಂದಿಗಳೂ ಲಿಖಿತ ರೂಪದಲ್ಲಿ ಕಾರಣ ತಿಳಿಸಿ ಒಳಗೆ ಪ್ರವೇಶಿಸಬೇಕಾಗಿದೆ ಎಂದು ರಮೇಶ್ ತಿಳಿಸಿದರು.

ಮುಗಿದ ಮತ ಸಮರ: ರಿಲ್ಯಾಕ್ಸ್ ಮೂಡ್‌ನಲ್ಲಿ ಅಭ್ಯರ್ಥಿಗಳು

ಬೆಂಗಳೂರಿಗೆ ತೆರಳಿದ ಸಿದ್ದರಾಮಯ್ಯ, ಸೋಮಣ್ಣ, ಮೊಮ್ಮಕ್ಕಳೊಂದಿಗೆ ಕ್ರಿಕೆಟ್ ಆಡಿದ ಜಿಟಿಡಿ, ಹಲವರು ಟೆಂಪಲ್ ರನ್



ಜಿ.ಟಿ.ದೇವೇಗೌಡರು ಮೊಮ್ಮಕ್ಕಳೊಂದಿಗೆ ಮನೆಯಲ್ಲೇ ಕ್ರಿಕೆಟ್ ಆಡಿ ಖುಷಿಯಿಂದ ಕಾಲ ಕಳೆದರು.



ವಿ.ಕವೀಶ್‌ಗೌಡ ವಿಜಯನಗರದ ಮೂರನೇ ಹಂತದಲ್ಲಿರುವ ಮೃತ್ಯುಂಜಯ ದೇವಾಲಯದಲ್ಲಿ ದೇವರ ದರ್ಶನ ಪಡೆದರು.



ಕೆಲ ಮುಖಂಡರೊಂದಿಗೆ ಕೃಷ್ಣರಾಜ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ಕಾಲ ಕಳೆದರು



ತಮ್ಮ ಪೆಟ್ರೋಲ್ ಬಂಕ್‌ನಲ್ಲಿ ಎಂದಿನಂತೆ ಕಾರ್ಯ ನಿರತ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಮೇಶ್

ಮೈಸೂರು,ಮೇ 11(ಎಂಟಿವೈ)- ಕಳೆದ ಎರಡು ತಿಂಗಳಿಂದ ಕ್ಷೇತ್ರ ಸುತ್ತುತ್ತಾ ಮತಯಾಚನೆಯಲ್ಲಿ ತೊಡಗಿ ಒತ್ತಡಕ್ಕೆ ಒಳಗಾಗಿದ್ದ ಮೂರು ಪಕ್ಷಗಳ ಅಭ್ಯಥಿಗಳು ಮತದಾನದ ನಂತರ ಕೆಲವು ಅಭ್ಯರ್ಥಿಗಳು ದೈವದ ಮೊರೆ ಹೋಗಿದ್ದರೆ, ಮತ್ತೆ ಕೆಲವು ಅಭ್ಯರ್ಥಿಗಳು ಕುಟುಂಬದ ಸದಸ್ಯರೊಂದಿಗೆ ದಿನದೂಡುವ ಮೂಲಕ ರಿಲ್ಯಾಕ್ಸ್ ಮೂಡ್‌ನಲ್ಲಿ ಮಗ್ನರಾಗಿದ್ದರು.

ರಾಜ್ಯ ಮಾತ್ರವಲ್ಲದೇ ರಾಷ್ಟ್ರ ರಾಜಕಾರಣ ಗಮನ ಸೆಳೆದಿದ್ದ ಕರ್ನಾಟಕ ವಿಧಾನಸಭಾ ಚುನಾವಣೆಯನ್ನು ಆಡಳಿತಾರೂಢ ಬಿಜೆಪಿ, ಪ್ರತಿಪಕ್ಷವಾದ ಕಾಂಗ್ರೆಸ್ ಹಾಗೂ ಪ್ರಾದೇಶಿಕ ಪಕ್ಷವಾದ ಜೆಡಿಎಸ್ ಪಕ್ಷಗಳು ಚುನಾವಣೆಯನ್ನು ಗಂಭೀರ ಹಾಗೂ ಪ್ರತಿಷ್ಠೆಯಾಗಿ ಸ್ವೀಕರಿಸಿತ್ತು. ಹೆಚ್ಚು ಸ್ಥಾನ ಗಳಿಸಲೇಬೇಕೆಂದು ಮೂರು ಪಕ್ಷಗಳು ಯಾತ್ರೆ, ಸಭೆ, ಸಮಾರಂಭ ಸೇರಿದಂತೆ ವಿವಿಧ ರ್‍ಯಾಲಿ ನಡೆಸಿ, ಮತದಾರರ ಮನವೊಲಿಸಿಕೊಳ್ಳಲು ಪ್ರಯತ್ನಿಸಿದ್ದರು.

ಬುಧವಾರ (ಮೇ 10)ವಷ್ಟೇ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಬಹುತೇಕ ಶಾಂತಿಯುತ ಮತದಾನ ನಡೆದಿತ್ತು. 11 ವಿಧಾನಸಭಾ ಕ್ಷೇತ್ರಗಳಿಂದ ಜಿಲ್ಲೆಯಲ್ಲಿ ಒಟ್ಟು ಶೇ.75.12ರಷ್ಟು ಮತದಾನ ನಡೆದಿತ್ತು. ಜಿಲ್ಲೆಯಲ್ಲಿ ಪ್ರಮುಖ ಮೂರು ಪಕ್ಷಗಳೂ ಸೇರಿದಂತೆ 143 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿ ಅಗ್ನಿಪರೀಕ್ಷೆಗೆ ಒಳಗಾಗಿದ್ದರು.

ಪ್ರತಿದಿನ ಪಾದಯಾತ್ರೆ, ರೋಡ್ ಶೋ, ಸಭೆ, ಸಮಾರಂಭ, ಮುಖಂಡರ ಭೇಟಿ, ಕಾರ್ಯಕರ್ತರೊಂದಿಗೆ ಸಭೆ ನಡೆಸುವ ಮೂಲಕ ವಿವಿಧ ಚಟುವಟಿಕೆಯಲ್ಲಿ ತೊಡಗಿರುತ್ತಿದ್ದ ಅಭ್ಯರ್ಥಿಗಳು ಗುರುವಾರ ಕೊಂಚ ನಿರಾಳರಾಗಿದ್ದರು. ಯಾವುದೇ ಒತ್ತಡಕ್ಕೆ ಒಳಗಾಗದೇ ಚುನಾವಣಾ ಮೂಡ್‌ನಿಂದ ಹೊರಬಂದು ರಿಲ್ಯಾಕ್ಸ್ ಮೂಡಿಗೆ ಜಾರಿದರು.

ಬೆಂಗಳೂರಿಗೆ ತೆರಳಿದ ನಾಯಕರು: ರಾಜ್ಯದ ಹೈವೋಲ್ಟೇಜ್ ಕ್ಷೇತ್ರಗಳಲ್ಲಿ ಒಂದಾಗಿರುವ ವರುಣ ಕ್ಷೇತ್ರದ ಎದುರಾಳಿಗಳಾಗಿದ್ದ ಕಾಂಗ್ರೆಸ್ ಅಭ್ಯರ್ಥಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಬಿಜೆಪಿ ಅಭ್ಯರ್ಥಿ ಸಚಿವ ವಿ.ಸೋಮಣ್ಣ ಗುರುವಾರ ಬೆಳಗ್ಗೆ ಮೈಸೂರಿಂದ ಬೆಂಗಳೂರಿಗೆ ಪ್ರಯಾಣಿಸಿದರು. ಜಿದ್ದಾಜಿದ್ದಿನ ಸ್ಪರ್ಧೆಗೆ ಸಾಕ್ಷಿಯಾಗಿದ್ದ ಉಭಯ ನಾಯಕರು ರಾತ್ರಿ ಮೈಸೂರಲ್ಲೇ ವಾಸ್ತವ್ಯ ಹೂಡಿದ್ದರು. ಮತದಾನದ ಬಳಿಕ ಕ್ಷೇತ್ರದ ಮುಖಂಡರೊಂದಿಗೆ ಸಮಾಲೋಚನೆ ನಡೆಸಿ ಕೆಲ ಅಂಕಿ ಅಂಶ ಕಲೆ ಹಾಕಿದರು. ಬಳಿಕ ಸಿದ್ದರಾಮಯ್ಯ ತಮ್ಮ ಮೈಸೂರಿನ ನಿವಾಸದಿಂದ ಬೆಂಗಳೂರಿನತ್ತ ಪ್ರಯಾಣ ಬೆಳೆಸಿದರು. ಚುನಾವಣೋತ್ತರ ಸಮೀಕ್ಷೆಯಲ್ಲಿ ಕಾಂಗ್ರೆಸ್‌ಗೆ ಹೆಚ್ಚು ಸ್ಥಾನ ಲಭಿಸುವ ಮಾಹಿತಿ ಬಹಿರಂಗೊಂಡ ಹಿನ್ನೆಲೆಯಲ್ಲಿ ಬೆಂಗಳೂರಲ್ಲಿ ಪಕ್ಷದ ಮುಖಂಡರೊಂದಿಗೆ ಸಭೆ ನಡೆಸಿ, ಚರ್ಚಿಸುವಲ್ಲಿ ಸಿದ್ದರಾಮಯ್ಯ ಮಗ್ನರಾಗಿದ್ದರು.

ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ, ವರುಣ ಹಾಗೂ ಚಾಮರಾಜನಗರದ ಕೆಲ ಬಿಜೆಪಿ ಮುಖಂಡರೊಂದಿಗೆ ಸಭೆ ನಡೆಸಿ ಕೆಲ ಮಾಹಿತಿ ಸಂಗ್ರಹಿಸಿ ಬೆಂಗಳೂರಿಗೆ ತೆರಳಿದರು. ಬಳಿಕ ಕುಟುಂಬದ ಸದಸ್ಯರೊಂದಿಗೆ ಕೆಲ ಸಮಯ ಕಳೆದರು. ಬಳಿಕ ಎಂದಿನಂತೆ ಗೋವಿಂದರಾಜನಗರ ಕ್ಷೇತ್ರದ ಮುಖಂಡರೊಂದಿಗೆ ಚುನಾವಣೆ ಸಂಬಂಧ ಸಭೆ ನಡೆಸಿ ಮಾತಕತೆ ನಡೆಸಿ ದಿನದೂಡಿದರು. ನಂತರ ಸೋಮಣ್ಣ ಕೆಲವು ದೇವಾಲಯಗಳಿಗೂ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು.

ಶಿರಡಿಗೆ : ಕೆ.ಆರ್.ನಗರದ ಶಾಸಕ ಹಾಗೂ ಜೆಡಿಎಸ್ ಅಭ್ಯರ್ಥಿ ಸಾ.ರಾ.ಮಹೇಶ್ ಚುನಾವಣಾ ಒತ್ತಡ ನಿವಾರಣೆಯೊಂದಿಗೆ ಫಲಿತಾಂಶದಲ್ಲಿ ಜೆಡಿಎಸ್ ಪರ ಒಲವು ವ್ಯಕ್ತವಾಗಲೆಂದು ಪ್ರಾರ್ಥಿಸುವ ನಿಟ್ಟಿನಲ್ಲಿ ಕುಟುಂಬದ ಸದಸ್ಯರೊಂದಿಗೆ ಶಿರಡಿಗೆ ಪ್ರಯಾಣಿಸಿದ್ದಾರೆ. ಶಿರಡಿ ಸಾಯಿಬಾಬಾ ದರ್ಶನವಾದ ಬಳಿಕ ಶುಕ್ರವಾರ ಸಂಜೆ ಮೈಸೂರಿಗೆ ವಾಪಸಾಗಲಿದ್ದಾರೆ.

> **ಮೈಸೂರು ಜಿಲ್ಲೆಯಲ್ಲಿ 11 ಕ್ಷೇತ್ರಗಳಲ್ಲಿ ವಿವಿಧ ಪಕ್ಷದ ವತಿಯಿಂದ ಸ್ಪರ್ಧಿಸಿರುವ ಅಭ್ಯರ್ಥಿಗಳು ಚುನಾವಣಾ ಒತ್ತಡದಿಂದ ಹೊರಬರಲು ಕುಟುಂಬದ ಸದಸ್ಯರು, ದೇವಾಲಯಕ್ಕೆ ಭೇಟಿ ಸೇರಿದಂತೆ ವಿವಿಧ ಚಟುವಟಿಕೆಗಳಲ್ಲಿ ಸಕ್ರಿಯರಾಗಿ ತೊಡಗಿಸಿಕೊಂಡರು. ಈಗ ಎಲ್ಲರ ಚಿತ್ತ ಶನಿವಾರ ಮತ ಎಣಿಕೆಯತ್ತ ನೆಟ್ಟಿದೆ.**

ಮಕ್ಕಳು, ಮೊಮ್ಮಕ್ಕಳೊಂದಿಗೆ ಕಾಲ ಕಳೆದ ಜಿಟಿಡಿ: ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ, ಶಾಸಕ ಜಿ.ಟಿ.ದೇವೇಗೌಡ ಕಳೆದ ಎರಡು ತಿಂಗಳಿಂದ ಎಡೆಬಿಡದೆ ಚಾಮುಂಡೇಶ್ವರಿ ಹಾಗೂ ಹುಣಸೂರು ವಿಧಾನಸಭಾ ಕ್ಷೇತ್ರದಲ್ಲಿ ಬಿರುಸಿನ ಪ್ರಚಾರದಲ್ಲಿ ತೊಡಗಿದ್ದರು. ಮತದಾನ ಮುಗಿದ ಹಿನ್ನೆಲೆಯಲ್ಲಿ ಗುರುವಾರ ಬೆಳಗ್ಗಿನಿಂದ ಸಂಜೆವರೆಗೂ ತಮ್ಮ ನಿವಾಸದಲ್ಲೇ ಪತ್ನಿ, ಮಕ್ಕಳು, ಮೊಮ್ಮಕ್ಕಳೊಂದಿಗೆ ಆಡುತ್ತಾ ದಿನದೂಡಿದರು. ತಮ್ಮ ಮೂವರು ಮೊಮ್ಮಕ್ಕಳೊಂದಿಗೆ ಮನೆಯಲ್ಲೇ ಕ್ರಿಕೆಟ್ ಆಡುತ್ತಾ ಹಸನ್ಮುಖಿಯಾಗಿ ಚುನಾವಣಾ ಒತ್ತಡ ನಿವಾರಿಸಿಕೊಂಡರು.

ಕುಟುಂಬದೊಂದಿಗೆ ಕಾಲ ಕಳೆದರು: ಕೆ.ಆರ್.ನಗರದ ಕಾಂಗ್ರೆಸ್ ಅಭ್ಯರ್ಥಿ ಡಿ.ರವಿಶಂಕರ್ ತಮ್ಮ ನಿವಾಸದಲ್ಲಿ ತಂದೆ ದೊಡ್ಡಸ್ವಾಮಿ ಗೌಡ, ಪತ್ನಿ, ಮಕ್ಕಳ ಜೊತೆ ಸಮಯ ಕಳೆದರು. ಬಳಿಕ ಕ್ಷೇತ್ರದ ವಿವಿಧ ಗ್ರಾಮಗಳಿಂದ ಆಗಮಿಸಿದ ಹಿತೈಷಿಗಳೊಂದಿಗೆ ಚರ್ಚಿಸಿದರು.

ಕೆ.ಆರ್.ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಚಾಮರಾಜ ಮೊಹಲ್ಲಾದಲ್ಲಿರುವ ತಮ್ಮ ನಿವಾಸದಲ್ಲಿ ಮಕ್ಕಳು ಹಾಗೂ ಕುಟುಂಬದ ಸದಸ್ಯರೊಂದಿಗೆ ಇದ್ದು ದಿನ ಕಳೆದರು. ರಾಜಕೀಯ ಜಂಜಾಟದಿಂದ ಬಿಡುವು ಮಾಡಿಕೊಂಡು ಮನೆಯಲ್ಲೇ ಕುಟುಂಬದ ಸದಸ್ಯರ ಜತೆ ಕಾಲಕಳೆದರು.

ಎನ್.ಆರ್.ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಶಾಸಕ ತನ್ವೀರ್ ಸೇಠ್ ಉದಯಗಿರಿಯಲ್ಲಿರುವ ನಿವಾಸದಲ್ಲಿ ಪತ್ನಿ, ಮಗ, ಮಗಳೊಂದಿಗೆ ಹರಟೆಯಲ್ಲಿ ತೊಡಗಿ ಸಂತೋಷದಿಂದ ದಿನ ಕಳೆದರು. ಮನೆಗೆ ಬಂದ ಮುಖಂಡರೊಂದಿಗೆ ಮಾತನಾಡುತ್ತಾ ರಿಲ್ಯಾಕ್ಸ್ ಮೂಡ್‌ನಲ್ಲಿದ್ದರು.

ದೈವದ ಮೊರೆ: ಎನ್.ಆರ್.ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಂದೇಶ್ ಸ್ವಾಮಿ, ಪತ್ನಿ ಗೀತಾ ಅವರೊಂದಿಗೆ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ರಾಘವೇಂದ್ರಸ್ವಾಮಿ ಮಠಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಿದರು. ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಕವೀಶ್‌ಗೌಡ ವಿಜಯನಗರದ ಮೂರನೇ ಹಂತದಲ್ಲಿರುವ ಮೃತ್ಯುಂಜಯ ದೇವಾಲಯಕ್ಕೆ ತೆರಳಿ ದರ್ಶನ ಪಡೆದರು.

ಕೆ.ಆರ್.ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀವತ್ಸ ಬಿಜೆಪಿ ಕಚೇರಿಯಲ್ಲಿ ಪಕ್ಷದ ಕೆಲ ಮುಖಂಡರೊಂದಿಗೆ ಮಾತುಕತೆ ನಡೆಸಿದರು. ಜೆಡಿಎಸ್ ಅಭ್ಯರ್ಥಿ ಕೆವಿ.ಮಲ್ಲೇಶ್ ತಮ್ಮ ಕಚೇರಿಯಲ್ಲಿ ಪತ್ರಿಕೆ ಓದುವ ಮೂಲಕ ದಿನ ಕಳೆದರು. ಎನ್.ಆರ್.ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಅಬ್ದುಲ್ ಖಾದರ್ ಶಾಹಿದ್ ಕೆಸರೆಯಲ್ಲಿರುವ ತಮ್ಮ ನಿವಾಸದಲ್ಲಿ ಕುಟುಂಬದ ಸದಸ್ಯರೊಂದಿಗೆ ದಿನ ಕಳೆದರು.

ವೃತ್ತಿ ಜೀವನ ಆರಂಭ: ಚಾಮರಾಜ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಮೇಶ್ ಚುನಾವಣಾ ರಾಜಕೀಯದಿಂದ ಹೊರಬಂದು ತಮ್ಮ ಮಾಲೀಕತ್ವದ ದಿವಾನ್ಸ್ ರಸ್ತೆಯಲ್ಲಿ 'ವಿಜಯ ಸರ್ವೀಸ್ ಸ್ಟೇಷನ್' ಪೆಟ್ರೋಲ್ ಬಂಕ್‌ನಲ್ಲಿ ಮೇಲ್ವಿಚಾರಣೆ ಕಾರ್ಯ ಆರಂಭಿಸಿದ್ದಾರೆ. ಈ ಬಾರಿ ಚಾಮರಾಜ ಕ್ಷೇತ್ರದಲ್ಲಿ ತ್ರಿಕೋನ ಸ್ಪರ್ಧೆ ನಡೆಯಲಿದ್ದು, ಇದರ ಲಾಭ ಜೆಡಿಎಸ್‌ಗೆ ದೊರೆಯಲಿದೆ. ಚಾಮರಾಜ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿರುವ ನನ್ನನ್ನು ಕ್ಷೇತ್ರದ ಜನ 5 ಸಾವಿರ ಮತಗಳ ಅಂತರದಿಂದ ಗೆಲ್ಲಿಸುತ್ತಾರೆ ಎಂಬ ವಿಶ್ವಾಸ ನನ್ನದಾಗಿದೆ. ನನಗೆ ಯಾವುದೇ ಟೆನ್ಷನ್ ಇಲ್ಲ. ಮತದಾನದ ಮರು ದಿನ ನಾನು ನನ್ನ ವೃತ್ತಿ ಮುಂದುವರೆಸಿದ್ದೇನೆ ಎಂದರು.



ಕುಟುಂಬ ಸದಸ್ಯರೊಂದಿಗೆ ಕಾಲ ಕಳೆದ ಚಾಮರಾಜ ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್ ಗೌಡ



ಕುಟುಂಬದವರೊಂದಿಗೆ ಕಾಲ ಕಳೆಯುತ್ತಿರುವ ಎಂ.ಕೆ.ಸೋಮಶೇಖರ್



ಕುಟುಂಬದವರೊಂದಿಗೆ ರಿಲ್ಯಾಕ್ಸ್ ಮೂಡ್‌ನಲ್ಲಿ ತನ್ವೀರ್ ಸೇಠ್



ಕುಟುಂಬದೊಂದಿಗೆ ಎನ್.ಆರ್.ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಅಬ್ದುಲ್ ಖಾದರ್ ಶಾಹಿದ್



ಗುರುರಾಯರ ದರ್ಶನ ಪಡೆದ ಸಂದೇಶ್ ಸ್ವಾಮಿ



ನಂಜುಂಡೇಶ್ವರನ ದರ್ಶನ ಪಡೆದ ಮಾಜಿ ಸಚಿವ ಹೆಚ್.ಡಿ.ರೇವಣ್ಣ




ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ಗೆ ತಾಯಿಯ ಆಶೀರ್ವಾದ



'ಖುಷಿ' ಚಿತ್ರದ ಡ್ಯುಯೆಟ್ ಹಾಡು ಬಿಡುಗಡೆ

ಟಾಲಿವುಡ್‌ನ ಸೆನ್ಸೇಷನಲ್ ಸ್ಟಾರ್ ವಿಜಯ್ ದೇವರಕೊಂಡ ಜನುಮ ದಿನದ ವಿಶೇಷವಾಗಿ, ಅವರ ಮುಂದಿನ ಚಿತ್ರ ಖುಷಿಯ ಮೊದಲಹಾಡು ಬಿಡುಗಡೆಯಾಗಿದೆ. ವಿ.ನಾಗೇಂದ್ರಪ್ರಸಾದ್ ಸಾಹಿತ್ಯ ಬರೆದಿರುವ ನನ್ನ ರೋಜಾ ನೀನೇ ಎಂಬ ಮೆಲೋಡಿ ಟ್ರ್ಯಾಕ್ ಇದಾಗಿದ್ದು, ಕೇಳುಗರನ್ನು ಇಂಪ್ರೆಸ್ ಮಾಡುತ್ತಿದೆ. ಈ ಹಾಡಿಗೆ ಅಬ್ದುಲ್ ವಹಾಬ್ ಧ್ವನಿಯಾಗುವುದರ ಜೊತೆಗೆ ಟ್ಯೂನ್ ಹಾಕಿದ್ದಾರೆ. ಈ ಚಿತ್ರದಲ್ಲಿ ವಿಜಯ್ ದೇವರಕೊಂಡ ಲವರ್‌ಬಾಯ್ ಆಗಿ ಕಾಣಿಸಿಕೊಂಡಿದ್ದು, ಸಮಂತಾ ನಾಯಕಿಯಾಗಿ ಅಭಿನಯಿಸಿದ್ದಾರೆ. ಕಾಶ್ಮೀರದ ಸುಂದರ ಪರಿಸರದಲ್ಲಿ ಈ ಹಾಡನ್ನು ಚಿತ್ರೀಕರಿಸಲಾಗಿದೆ. ಪ್ಯಾನ್ ಇಂಡಿಯಾ ಮಟ್ಟದಲ್ಲಿ ತಯಾರಾದ ಖುಷಿ, ತೆಲುಗು, ಕನ್ನಡ, ಹಿಂದಿ, ಮಲಯಾಳಂ ಹಾಗೂ ತಮಿಳು ಭಾಷೆಯಲ್ಲಿಯೂ ತೆರೆಗೆ ಬರಲಿದೆ. ಮೈತ್ರಿ ಮೂವಿ ಬ್ಯಾನರ್ ಅಡಿಯಲ್ಲಿ ಅದ್ದೂರಿಯಾಗಿ ನಿರ್ಮಿಸಿರುವ ಈ ಚಿತ್ರಕ್ಕೆ ಮಜಿಲಿ ಹಿಟ್ ನಿರ್ದೇಶಕ ಶಿವ ನಿರ್ವಾಣ ಆಕ್ಷನ್ ಕಟ್ ಹೇಳಿದ್ದಾರೆ. ಈ ಚಿತ್ರವನ್ನು ನವೀನ್ ಯೆರ್ನೇನಿ ಮತ್ತು ಯಲಮಂಚಿಲಿ ಜಂಟಿಯಾಗಿ ನಿರ್ಮಿಸುತ್ತಿದ್ದಾರೆ. ರೊಮ್ಯಾಂಟಿಕ್ ಲವ್ ಎಂಟರ್‌ಟೈನರ್ ಕಥಾಹಂದರ ಹೊಂದಿರುವ ಈ ಚಿತ್ರ ಸೆ. ಒಂದರಂದು ವಿಶ್ವಾದ್ಯಂತ ರಿಲೀಸ್ ಆಗಲಿದೆ. ಜಯರಾಮ್, ಮುರಳಿ ಶರ್ಮಾ, ಲಕ್ಷ್ಮೀ, ಅಲಿ, ವಿನ್ನಿಲ್ಲಾ ಕಿಶೋರ್, ರೋಹಿನಿ ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಹೇಷಂ ವಾಹೆಬ್ ಅವರ ಸಂಗೀತ, ಜಿ ಮುರಳಿ ಅವರ ಛಾಯಾಗ್ರಹಣ, ಪ್ರವೀಣ್ ಪುಡಿ ಅವರ ಸಂಕಲನ ಈ ಚಿತ್ರಕ್ಕಿದೆ.



ಐಶ್ವರ್ಯಾಗೌಡ 'ಎಂಗೇಜ್‌ಮೆಂಟ್'

ಪ್ರವೀಣ ಚಿತ್ರದ ಮೂಲಕ ಗಮನ ಸೆಳೆದ ನಟಿ ಐಶ್ವರ್ಯಾಗೌಡ, ಈಗ 'ಎಂಗೇಜ್ಮೆಂಟ್' ಎಂಬ ಪ್ಯಾನ್ ಇಂಡಿಯಾ ಚಿತ್ರಕ್ಕೆ ನಾಯಕಿಯಾಗಿ ಆಯ್ಕೆಯಾಗಿದ್ದಾರೆ. ನಿಖಿಲ್‌ಕುಮಾರ್ ಅಭಿನಯದ ಜಾಗ್ವಾರ್ ಚಿತ್ರದ ಮೂಲಕ ಚಿತ್ರರಂಗಕ್ಕೆ ಬಂದ ಐಶ್ವರ್ಯಾ, ಇತ್ತೀಚೆಗೆ ಪ್ರವೀಣ ಚಿತ್ರದಲ್ಲಿ ನಾಯಕಿಯಾಗಿ ನಟಿಸಿದರು. ಆ ನಂತರ ರಾಜು ಬೋನಗಾನಿ ನಿರ್ದೇಶನದ ರೇವ್‌ಪಾರ್ಟಿ ಚಿತ್ರದಲ್ಲಿ ದ್ವಿತೀಯ ನಾಯಕಿಯಾಗಿದ್ದರು. ಇಂದಿನ ಯುವಜನತೆ ಹೇಗೆ ಮಾದಕ ವ್ಯಸನಕ್ಕೆ ಬಲಿಯಾಗುತ್ತಿದ್ದಾರೆ ಎಂಬುದನ್ನು ಹೇಳುವ ಚಿತ್ರ ಇದಾಗಿದ್ದು, ಆ ಚಿತ್ರದ ಬಿಡುಗಡೆಗೂ ಮೊದಲೇ, ಇನ್ನೊಂದು ಪ್ಯಾನ್‌ಇಂಡಿಯಾ ಚಿತ್ರ ಎಂಗೇಜ್ಮೆಂಟ್‌ಗೆ ನಾಯಕಿಯಾಗಿ ಆಯ್ಕೆಯಾಗಿದ್ದಾರೆ. ಈ ಕುರಿತು ಮಾತನಾಡುವ ಐಶ್ವರ್ಯಾ, ನನಗೆ ಚಿಕ್ಕಂದಿನಿಂದಲೂ ನಟನೆಯ ಬಗ್ಗೆ ತುಂಬ ಆಸಕ್ತಿ. ಜಾಗ್ವಾರ್, ಪ್ರವೀಣ, ನನಗೆ ರೇವ್‌ಪಾರ್ಟಿ ನಂತರ ಈ ಚಿತ್ರದಲ್ಲಿ ನಟಿಸುವ ಅವಕಾಶ ಸಿಕ್ಕಿತು. ನಿರ್ದೇಶಕ ಬೋನಗಾನಿ ಅವರು ತಮ್ಮ ಎಂಗೇಜ್ಮೆಂಟ್ ಚಿತ್ರದಲ್ಲಿ ನಾಯಕಿಯಾಗುವ ಅವಕಾಶವನ್ನು ನೀಡಿದ್ದಾರೆ ಎಂದು ಹೇಳುತ್ತಾರೆ. ಸದ್ಯ ಈ ಚಿತ್ರದ ಪ್ರೀ ಪ್ರೊಡಕ್ಷನ್ ಕೆಲಸಗಳು ಭರದಿಂದ ನಡೆಯುತ್ತಿದ್ದು, ಸದ್ಯದಲ್ಲೇ ಚಿತ್ರೀಕರಣ ಪ್ರಾರಂಭವಾಗಲಿದೆ.


ಕ್ಯಾರಾವ್ಯಾನ್ ಚಾಲಕ ಈಗ ನಿರ್ಮಾಪಕ



ಚಿತ್ರರಂಗದಲ್ಲಿ ಯಾರು, ಏನು ಬೇಕಾದರೂ ಆಗಬಹುದು, ಅಸಿಸ್ಟೆಂಟ್ ಡೈರೆಕ್ಟರ್ ನಿರ್ದೇಶಕನಾಗಬಹುದು, ಮೇಕಪ್‌ಮ್ಯಾನ್ ನಾಯಕನಾದ ಉದಾಹರಣೆಯೂ ಇದೆ. ಇದಕ್ಕಿಂತ ಮತ್ತೊಂದು ಅಚ್ಚರಿಯ ವಿಷಯ ಎಂದರೆ ಕಳೆದ 9 ವರ್ಷಗಳಿಂದ ಕ್ಯಾರಾವ್ಯಾನ್ ಚಾಲಕನಾಗಿ ಕೆಲಸ ಮಾಡುತ್ತಿರುವ ಸ್ಮೈಲ್‌ಮಂಜು ಈಗ 'ಲಕ್' ಎನ್ನುವ ಚಿತ್ರದ ಮೂಲಕ ನಾಯಕನಾಗುತ್ತಿದ್ದಾರೆ. ಜೊತೆಗೆ ನಿರ್ಮಾಣ ಸಹ ಮಾಡಿದ್ದಾರೆ. ಜೀವನದಲ್ಲಿ ಯಾರಿಗೆ, ಯಾವಾಗ ಲಕ್ ಅನ್ನೋದು ಬರುತ್ತೆ ಅಂತ ಹೇಳಲು ಸಾಧ್ಯವಿಲ್ಲ. ಅಂಥಾ ಅದೃಷ್ಟದ ಮೇಲೆ ನಡೆಯುವ ಕಥೆಯಿದು. ಹರೀಶ್ ನಿರ್ದೇಶನ ಮಾಡಿರುವ ಈ ಚಿತ್ರದ ಲಿರಿಕಲ್ ಹಾಡೊಂದು ಇತ್ತೀಚೆಗೆ ಬಿಡುಗಡೆಯಾಯಿತು. ನವೀನ್ ಸಜ್ಜು ಕಂಠವಿರುವ ಈ ಹಾಡಿಗೆ ವಿಜಯ್ ಹರಿತ್ಸ ಸಂಗೀತ ಸಂಯೋಜನೆ ಮಾಡಿದ್ದಾರೆ.

ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ನಿರ್ದೇಶಕ ಹರೀಶ್, ಈ ಚಿತ್ರಕ್ಕೆ ಮೊದಲು ನಿರ್ದೇಶಕ, ನಾಯಕ ಬೇರೆನೇ ಇದ್ದರು. ಅನಿವಾರ್ಯ ಕಾರಣದಿಂದ ಅವರಿಬ್ಬರೂ ಚಿತ್ರದಿಂದ ದೂರವಾದಾಗ ಈ ಚಿತ್ರಕ್ಕೆ ನಾನೇ ನಿರ್ದೇಶಕನಾದೆ. ಮಂಜು ನಾಯಕನಾದರು. ನನ್ನ ಜೀವನದಲ್ಲಿ ನಡೆದಂಥ ಘಟನೆಯೊಂದನ್ನು ಇಟ್ಟುಕೊಂಡು ಈ ಸಿನಿಮಾ ಮಾಡಿದ್ದೇನೆ. ಡಾಲಿ ಧನಂಜಯ್ ಅವರು ಚಿತ್ರದಲ್ಲಿ ಅತಿಥಿ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಅವರ ಭಾಗದ ಚಿತ್ರೀಕರಣ ಮಾತ್ರವೇ ಬಾಕಿಯಿದೆ. ಒಂದೇ ದಿನದಲ್ಲಿ, ಅದರಲ್ಲೂ ಕೆಲವೇ ಗಂಟೆಗಳಲ್ಲಿ ನಡೆಯುವ ಕಥೆಯಾಗಿದ್ದು, ಹಿರಿಯ ನಟಿ ಪದ್ಮಜಾರಾವ್, ಕಡ್ಡಿಪುಡಿ ಚಂದ್ರು ಮುಂತಾದವರು ಪ್ರಮುಖ ತಾರಾಬಳಗದಲ್ಲಿದ್ದಾರೆ ಎಂದು ಮಾಹಿತಿ ನೀಡಿದರು.

ನಾಯಕ ಹಾಗೂ ನಿರ್ಮಾಪಕ ಕ್ಯಾರಾವ್ಯಾನ್ ಸ್ಟಾರ್ ಸ್ಮೈಲ್ ಮಂಜು ಮಾತನಾಡುತ್ತಾ, ಗೋಲ್ಡನ್‌ಸ್ಟಾರ್ ಗಣೇಶ್, ಡಾಲಿ ಧನಂಜಯ, ಸೇರಿದಂತೆ ಹಲವು ಸ್ಟಾರ್‌ಗಳ ಕ್ಯಾರಾವ್ಯಾನ್‌ಗೆ ನಾನೇ ಚಾಲಕ. ಮೊದಲಿಂದಲೂ ನನಗೆ ಸಿನಿಮಾ ನಿರ್ಮಾಣ ಮಾಡುವ ಆಸೆಯಿತ್ತು. ದುಡಿದ ಹಣ ಹಾಗೂ ಜಮೀನು ಮಾರಿ ಬಂದ ಹಣದಿಂದ ಈ ಚಿತ್ರವನ್ನು ನಿರ್ಮಾಣ ಮಾಡಿದ್ದೇನೆ. ಜೊತೆಗೆ ಚಿತ್ರದಲ್ಲಿ ನಾಯಕನಾಗೂ ಅಭಿನಯಿಸಿದ್ದೇನೆ. ನನ್ನ ಮೇಲೆ ಪ್ರೀತಿಯಿಟ್ಟು ಶಿವರಾಜಕುಮಾರ್ ಅವರು ಸೇರಿದಂತೆ ಚಿತ್ರರಂಗದ ಅನೇಕ ನಾಯಕರು ಪೋಸ್ಟರನ್ನು ಬಿಡುಗಡೆ ಮಾಡಿ ಶುಭ ಕೋರಿದ್ದಾರೆ ಎಂದು ಹೇಳಿದರು. ನಂತರ ಪ್ರಮುಖ ಪಾತ್ರದಲ್ಲಿ ನಟಿಸಿರುವ ರೇಣು, ಸಾಹಿತಿ ಅಪ್ಪಿ ಹಾಗೂ ಸಂಗೀತ ನಿರ್ದೇಶಕ ವಿಜಯ್ ಹರಿತ್ಸ ಅವರು ಚಿತ್ರ ಕುರಿತಂತೆ ಮಾತನಾಡಿದರು.



'ಸೈಂಧವ್' ನಾಯಕಿಯಾಗಿ ಶ್ರದ್ಧಾ ಶ್ರೀನಾಥ್

'ಯೂ ಟರ್ನ್' ಚಿತ್ರದ ಮೂಲಕ ಕನ್ನಡ ಸಿನಿ ಪ್ರೇಕ್ಷಕರನ್ನು ರಂಜಿಸಿದ್ದ ಮೂಗುತಿ ಸುಂದರಿ ಶ್ರದ್ಧಾ ಶ್ರೀನಾಥ್ ಅವರೀಗ ಸದ್ಯ ಬಹುಭಾಷಾ ನಟಿಯಾಗಿ ಮಿಂಚುತ್ತಿದ್ದಾರೆ. ಕನ್ನಡದ ಜೊತೆಗೆ ತಮಿಳು, ತೆಲುಗು, ಮಲಯಾಳಂ ಹಾಗೂ ಹಿಂದಿ ಭಾಷೆಯಲ್ಲಿಯೂ ಸಕ್ರಿಯರಾಗಿರುವ ಶ್ರದ್ಧಾ ಶ್ರೀನಾಥ್ ಅವರಿಗೀಗ ಕೈತುಂಬಾ ಅವಕಾಶಗಳಿವೆ. ಇದೀಗ ಅವರು ಪ್ಯಾನ್ ಇಂಡಿಯಾ ಸಿನಿಮಾ ವೊಂದಕ್ಕೆ ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ. ಟಾಲಿವುಡ್‌ನ ವಿಕ್ಟರಿ ವೆಂಕಟೇಶ್ ನಟನೆಯ ಪ್ಯಾನ್ ಇಂಡಿಯಾ ಸಿನಿಮಾ 'ಸೈಂಧವ್' ದೊಡ್ಡ ಮಟ್ಟದಲ್ಲಿ ನಿರೀಕ್ಷೆಗಳನ್ನು ಹುಟ್ಟು ಹಾಕಿದ ಚಿತ್ರ. ಶೈಲೇಶ್ ಕೋಲನು ಅವರ ನಿರ್ದೇಶನವಿರುವ ಈ ಚಿತ್ರದ ಮೊದಲ ಹಂತದ ಚಿತ್ರೀಕರಣ ಈಗಾಗಲೇ ಮುಗಿದಿದ್ದು, ಸದ್ಯ ವೈಜಾಗ್‌ನಲ್ಲಿ ಎರಡನೇ ಹಂತದ ಶೂಟಿಂಗ್ ನಡೆಯುತ್ತಿದೆ. ನಿಹಾರಿಕಾ ಎಂಟರ್‌ಟೈನ್ಮೆಂಟ್ ಅಡಿಯಲ್ಲಿ ವೆಂಕಟ್ ಬೋಯನಪಲ್ಲಿ ಅವರು ನಿರ್ಮಿಸುತ್ತಿರುವ ಸೈಂಧವ್ ಚಿತ್ರಕ್ಕೆ ಕನ್ನಡತಿ ಶ್ರದ್ಧಾ ಶ್ರೀನಾಥ್ ಅವರು ನಾಯಕಿಯಾಗಿ ಎಂಟ್ರಿ ಕೊಟ್ಟಿದ್ದಾರೆ. ವಿಕ್ಟರಿ ವೆಂಕಟೇಶ್ ಜೋಡಿಯಾಗಿ ನಟಿಸುತ್ತಿರುವ ಮೂಗುತಿ ಸುಂದರಿಯ ಫಸ್ಟ್‌ಲುಕ್ ಇದೀಗ ಅನಾವರಣವಾಗಿದೆ. 'ಸೈಂಧವ್' ಸಿನಿಮಾದಲ್ಲಿ ಶ್ರದ್ಧಾ ಶ್ರೀನಾಥ್ ಅವರು ಮನೋಜ್ಞಾ ಎಂಬ ಪಾತ್ರದಲ್ಲಿ ನಟಿಸಿದ್ದು, ಅವರ ಫಸ್ಟ್‌ಲುಕ್ ನೋಡುಗರ ಗಮನ ಸೆಳೆಯುತ್ತಿದೆ. ಸೀರೆಯುಟ್ಟು ಹೋಮ್ಲಿ ಲುಕ್‌ನಲ್ಲಿ ಕಾಣಿಸಿಕೊಂಡಿರುವ ಶ್ರದ್ಧಾ ಶ್ರೀನಾಥ್ ಕೈಯ್ಯಲ್ಲಿ ಟಿಫಿನ್ ಬಾಕ್ಸ್ ಹಿಡಿದುಕೊಂಡು ಗಂಭೀರವಾದ ಆಲೋಚನೆಯಲ್ಲಿ ತೊಡಗಿದ್ದಾರೆ.

ಬಾಲಿವುಡ್‌ನ ನವಾಜುದ್ದೀನ್ ಸಿದ್ದಿಕಿ ಅವರು ಈ ಚಿತ್ರದ ಮೂಲಕ ಸೌತ್ ಸಿನಿರಂಗ ಪ್ರವೇಶಿಸಿದ್ದಾರೆ. ತಾಂತ್ರಿಕವಾಗಿಯೂ ಶ್ರೀಮಂತಿಕೆಯಿಂದ ಕೂಡಿರುವ ಸೈಂಧವ್ ಸಿನಿಮಾಗೆ ಸಂತೋಷ್ ನಾರಾಯಣನ್ ಅವರು ಸಂಗೀತ ನಿರ್ದೇಶನವಿದ್ದು, ಎಸ್. ಮಣಿಕಂದನ್ ಅವರ ಛಾಯಾಗ್ರಹಣವಿದೆ, ಕಿಶೋರ್ ತಲ್ಲೂರ ಸಹ ನಿರ್ಮಾಣದ ಜವಾಬ್ದಾರಿ ಹೊತ್ತುಕೊಂಡಿದ್ದಾರೆ.

'ಟೆರರ್' ಟೀಸರ್ ಬಿಡುಗಡೆ



ಇತ್ತೀಚೆಗೆ ನಟ ಆದಿತ್ಯ ಅಭಿನಯದ 'ಟೆರರ್' ಚಿತ್ರದ ಟೀಸರನ್ನು ನಿರ್ದೇಶಕ ಆರ್. ಚಂದ್ರು ಬಿಡುಗಡೆಗೊಳಿಸಿದರು. ಸಿನಿಮಾದ ಹೆಸರಿನಲ್ಲೇ ಒಂದು ಫೈಯರ್ ಇದೆ. ಟೀಸರಿನಲ್ಲಿ ಕಾಣುವ ಪ್ರತಿಯೊಂದು ಸನ್ನಿವೇಶಗಳು ಗಮನ ಸೆಳೆಯುತ್ತವೆ. ಟೀಸರ್‌ನಲ್ಲಿಯೇ ಇದೊಂದು ದೊಡ್ಡ ಹಿಟ್ ಆಗುವ ಲಕ್ಷಣಗಳು ಕಾಣುತ್ತಿದೆ ಎಂದು ಆರ್.ಚಂದ್ರು ಹಾರೈಸಿದರು. ಭಾ.ಮ.ಹರೀಶ್, ದೇವೇಂದ್ರ ರೆಡ್ಡಿ, ರಮೇಶ್ ರೆಡ್ಡಿ, ಪ್ರಕಾಶ್, ಶ್ರೀನಗರ ಕಿಟ್ಟಿ ಮುಂತಾದವರು ಸಮಾರಂಭದಲ್ಲಿ ಹಾಜರಿದ್ದು ಶುಭ ಕೋರಿದರು.

ಕಥೆ ಕೇಳಿದ ಕೂಡಲೇ ನಿರ್ಮಾಪಕ ಸಿಲ್ಕ್‌ಮಂಜು ಅವರು ಸಿನಿಮಾ ಮಾಡಲು ಒಪ್ಪಿದರು. ಆದಿತ್ಯ ನಾಯಕರಾಗಿ ನಟಿಸಿರುವ ಈ ಚಿತ್ರದಲ್ಲಿ ಶ್ರೀನಗರ ಕಿಟ್ಟಿ ಕೂಡ ಪಾತ್ರವೊಂದರಲ್ಲಿ ಅಭಿನಯಿಸುತ್ತಿದ್ದಾರೆ. ಈಗಾಗಲೇ ಬೆಂಗಳೂರು ಸುತ್ತಮುತ್ತ ಸಿನಿಮಾದ ಬಹುತೇಕ ಚಿತ್ರೀಕರಣ ನಡೆಸಲಾಗಿದ್ದು, ಶೇ.30ರಷ್ಟು ಚಿತ್ರೀಕರಣ ಪೂರ್ಣವಾಗಿದೆ ಎಂದು ನಿರ್ದೇಶಕ ರಂಜನ್ ಶಿವರಾಮ್‌ಗೌಡ ಹೇಳಿದರು.

ನಾಯಕ ಆದಿತ್ಯ ಮಾತನಾಡಿ, ಕನ್ನಡಕ್ಕೆ 'ಎ' ಎಂಬ ಉತ್ತಮ ಚಿತ್ರಕೊಟ್ಟ ಸಿಲ್ಕ್‌ಮಂಜು ಅವರು ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ರಂಜನ್ ಹೇಳಿದ ಕಥೆ ಇಷ್ಟವಾಯಿತು. ನನ್ನ ಹುಟ್ಟುಹಬ್ಬಕ್ಕಾಗಿ ಈ ಟೀಸರ್ ಮಾಡಿರುವ ಚಿತ್ರ ತಂಡಕ್ಕೆ ಧನ್ಯವಾದ ಎಂದರು. ನಿರ್ಮಾಪಕ ಸಿಲ್ಕ್ ಮಂಜು ಮಾತನಾಡಿ 'ಎ' ಸಿನಿಮಾ ಬಿಡುಗಡೆಯಾಗಿ 25 ವರ್ಷವಾದ ನಂತರ ಮತ್ತೊಂದು ನಿರೀಕ್ಷಿತ ಸಿನಿಮಾ ಮಾಡುತ್ತಿದ್ದೇವೆ. ನಿಮ್ಮೆಲ್ಲರ ಪ್ರೋತ್ಸಾಹವಿರಲಿ ಎಂದರು.

ಪಿಆರ್‌ಓ. ವೆಂಕಟೇಶ್ ಮಗಳ ಮದುವೆಗೆ ತಾರಾಮೇಳ

ಇತ್ತೀಚೆಗೆ ನಡೆದ ಸಿನಿಮಾ ಪ್ರಚಾರಕರ್ತ ಸುಧೀಂದ್ರ ವೆಂಕಟೇಶ್ ಪುತ್ರಿ ಚಂದನಾ ಮತ್ತು ಪ್ರಸನ್ನ ಭಾಸ್ಕರ್ ಅವರ ವಿವಾಹ ಸಮಾರಂಭಕ್ಕೆ ನಟರಾದ ರವಿಚಂದ್ರನ್, ರಮೇಶ್ ಅರವಿಂದ್, ಉಪೇಂದ್ರ, ಧ್ರುವ ಸರ್ಜಾ, ಅಜೇಯ್‌ರಾವ್, ವಿನೋದ್ ಪ್ರಭಾಕರ್, ಹಂಸಲೇಖ, ಸುಧಾರಾಣಿ, ರಾಗಿಣಿ, ಚಾಂದಿನಿ, ಅಮೂಲ್ಯ, ಸೋನುಗೌಡ, ಪ್ರಗತಿ ರಿಷಬ್‌ಶೆಟ್ಟಿ, ಶ್ರೀನಿವಾಸಮೂರ್ತಿ, ರಮೇಶ್‌ಭಟ್, ತಬಲನಾಣಿ, ಶ್ರೀನಾಥ್, ಧರ್ಮ ಕೀರ್ತಿರಾಜ್, ಗುರುದತ್, ರವಿಚೇತನ್ ನಿರ್ಮಾಪಕರಾದ ಸಾ.ರಾ. ಗೋವಿಂದು, ಎಸ್.ಎ. ಚಿನ್ನೇಗೌಡ, ಎಸ್.ವಿ. ಬಾಬು, ಎಂ.ಜಿ.ರಾಮಮೂರ್ತಿ, ಸಿದ್ದರಾಜು, ಶೈಲಜಾನಾಗ್, ಫಿಲಂ ಚೇಂಬರ್ ಅಧ್ಯಕ್ಷ ಭಾ.ಮ. ಹರೀಶ್, ನಿರ್ದೇಶಕ ಗಿರೀಶ್ ಕಾಸರವಳ್ಳಿ, ನಾಗಾಭರಣ, ಪಿ.ಶೇಷಾದ್ರಿ, ಆರ್.ಚಂದ್ರು, ಟಿ.ಎನ್.ಸೀತಾರಾಂ, ಬಹದ್ದೂರ್ ಚೇತನ್, ರವಿವರ್ಮ, ಮಂಜುಳಾ ಗುರುರಾಜ್, ಬಿ.ಆರ್. ಛಾಯಾ, ಸಂಗೀತಾ ಕಟ್ಟಿ ಸೇರಿದಂತೆ ಚಿತ್ರರಂಗದ ಹಲವಾರು ಗಣ್ಯರು ಆಗಮಿಸಿದ್ದರು.

ಚುನಾವಣಾ ವಿಶೇಷ ಸಿನಿಪದಬಂಧ-473

ಉಮ್ಮತ್ತೂರು ಇಂದುಶೇಖರ್
ಮೊ.9880820462

1				■	■	2		3		
	■	■		4			■		■	■
5		6		■	■		■	7		8
	■		■	9			■		■	
	■	■	■		■	■	■	■	■	
	■	10				■	11			
12			■		■			■	■	
	■		■	■	13	■		■	14	
■	15			■	16			■	■	
■		■	■	■		■	■	17		
18				■	19			■	■	■

ಹೆಸರು ______

ವಿಳಾಸ ______

______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1.ದೇವರಾಜ್ "ಸಾರ್ವಭೌಮ" 4
2.ದರ್ಶನ್ – ರುಚಿತಾ ಪ್ರಸಾದ್ ಅಭಿನಯದ ಚಿತ್ರ 5
4.ಅನಂತ್ ನಾಗ್ – ಖುಷ್ಬೂ ಕಂಡ ಆಗಸ 3
5.ಇಲ್ಲೇ ಎಡದಿಂದ ಬಲಕ್ಕೆ 9 ರಲ್ಲಿರುವ ನಾಯಕಿ 4
7.ಕನ್ನಡದ ಕಾದಂಬರಿ ಸಾರ್ವಭೌಮ ಇಲ್ಲಿ ತಿರುಗಿದ್ದಾನೆ 3
9.ಸಂಗಾತಿ ಇದ್ದರೂ ಕ್ರೇಜಿ ಸ್ಟಾರ್ ಒಬ್ಬಂಟಿ 3
10.ಸಕ್ಕರೆ ನಾಡಿನ ಸಂಸದೆ ಅಂಬಿಯ ತಾರಾಪತ್ನಿಯು ಹೌದು 4
11. ಅರಿಷಡ್ವರ್ಗಗಳಲ್ಲಿ ಒಂದು ಪ್ರೀತಿಯೊಂದಿಗೆ ಬಂದಿದೆ 4
12.ವೀರಣ್ಣ ಚಿತ್ರದ ನಾಯಕಿ 3
14.ಅನಂತ್ ನಾಗ್ ಅಭಿನಯದಲ್ಲಿ ತೋರಿದ "ಕ್ಷಾಮ" 2
15.ಅಮೃತ _ _ _ 3
16.ಅಪ್ಪಣ್ಣ ಊದಿದ ವಾದ್ಯ 3
17.ಮಹೇಶ್ ಸುಖಧರೆಯ "ಸಡಗರ" 3
18.ಅಂಬರೀಶ್ ಶಿಕಾರಿ ಆಡಲು ಎ. ಟಿ.ರಘು ನಿರ್ದೇಶಕ 4
19.ಸವತಿಯೊಂದಿಗಿನ ಛಾಯೆ 3

ಮೇಲಿನಿಂದ ಕೆಳಕ್ಕೆ

1.ಅನಂತ್ ನಾಗ್ – ಪ್ರಭಾಕರ್ ಇಬ್ಬರೂ ಸಮರ್ಥರು 8
2.ವಿಜಯ್ ರಾಘವೇಂದ್ರ – ರಾಧಿಕಾ ಅಭಿನಯದ ಚಿತ್ರ 4
3.ರವಿ ಕೊಳಲ ನುಡಿಯಲು ರೂಪಿಣಿ ನಾಯಕಿ 4
6.ಗಣೇಶ್,ಪೂಜಾಗಾಂಧಿ,ಶರ್ಮಿಳಾ ಮಾಂಡ್ರೆ ಅಭಿನಯದ ಚಿತ್ರ 2
8.ಪ್ರೀತಿಯು ಶಾಶ್ವತವಾಗಿ ಸಿಹಿಯಾಗಿದೆ 8
9.ದ್ರೋಣಾಚಾರ್ಯರ ಶಿಷ್ಯ ಬಿಲ್ಲು ಹಿಡಿಯಲು ಅಂಬಿ ನಾಯಕ 4
10.ಪ್ರೇಮವೇ ಬಾಳಿನ ಬೆಳಕು ಚಿತ್ರ ವೀರಪ್ಪ ಮೊಯ್ಲಿ ಅವರ ಕಾದಂಬರಿ ಆಧರಿಸಿದೆ. 4
11.ವಿಜಯ್ ರಾಘವೇಂದ್ರ ಪ್ರೀತಿಗಾಗಿ ಸೆರೆಯಾಗಿದ್ದಾನೆ 4
13.ಅಳಿಯನ ನವ ಗೃಹ 4
15.ಸಂಸಾರದಲ್ಲಿ ಎದ್ದ ಗದ್ದಲ 3

ವಿಜೇತರು: ಜೆ.ಮಾದೇಶ್ S/O ಜಯರಾಮನಾಯ್ಕ, #ಸಿ641-1, ನಾಯಕರ ಬೀದಿ, ತೆರಕಣಾಂಬಿ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ

ಸಿನಿ ಪದಬಂಧ 472ರ ಸರಿ ಉತ್ತರ

ಎ	ಲೆ	ಕ್ಷ	ನ್	■	■	ಪ್ರ	ಜಾ	ಪ್ರ	ಭು	ತ್ವ
ಲ್ಲಿಂ	■	■	■	ತಿ	ಗೃ	ಜಾ	■	ಜಾ	■	■
ದ	ಳ	ಪ	ತಿ	■	■	ಶ	■	ರಾ	ಕ್ಷ	ಸ
ಲೋ	■	ಕ್ಷ	■	ಜ	ನೋ	ಕ್ತಿ	■	ಜ್ಯ	■	ಹೋ
ಬಂ	■	■	■	ಯ	■	■	■	■	■	ದ
ದ	■	ರ	ಣ	ಭೇ	ರಿ	■	ಮ	ತ	ದಾ	ರ
ವ	ರು	ಣ	■	ರಿ	■	■	ತ	■	■	ರ
ರು	■	ರಂ	■	■	ಘ	■	ದಾ	■	ದಾ	ಸ
■	ಮಾ	ಗ	ಡಿ	■	ಲಿ	ಕ	ನ	■	■	ವಾ
■	ನ	■	■	■	ತಾಂ	■	■	ನಿ	ಖಿ	ಲ್
ಧ್ರು	ವ	ತಾ	ರೆ	■	ಶ	ಪ	ಥ	■	■	■

ಪಿರಿಯಾಪಟ್ಟಣದಲ್ಲೂ ಸಿಡಿಲು, ಮಿಂಚು ಸಹಿತ ಭಾರೀ ಮಳೆ: ಎರಡು ಎತ್ತು ಸಾವು, ಅಪಾರ ಹಾನಿ

ಪಿರಿಯಾಪಟ್ಟಣ, ಮೇ 11 – ಪಟ್ಟಣ ಸೇರಿದಂತೆ ತಾಲೂಕಿನಲ್ಲಿ ಗುರುವಾರ ಮಧ್ಯಾಹ್ನ ಗುಡುಗು ಮಿಂಚು ಸಹಿತ ಮಳೆಯಾಗಿ ಸಿಡಿಲಿಗೆ ಎರಡು ಎತ್ತು ಬಲಿಯಾಗಿ, ಹಲವೆಡೆ ಹಾನಿಯಾಗಿದೆ.

ಕಳೆದ ಕೆಲವು ದಿನಗಳಿಂದ ಬಿಸಿಲಿನ ಬೇಗೆಗೆ ಬೇಸತ್ತಿದ್ದ ತಾಲೂಕಿನ ಜನತೆಗೆ ಮಳೆಯಿಂದಾಗಿ ಕೊಂಚ ತಂಪಾದ ವಾತಾವರಣ ಉಂಟಾಗಿ ರೈತರ ಮೊಗದಲ್ಲಿ ಹರ್ಷ ಉಂಟಾದರೂ ಹಲವೆಡೆ ಸಿಡಿಲು ಮಳೆಯ ಆರ್ಭಟಕ್ಕೆ ರೈತರಿಗೆ ಆಘಾತ ಉಂಟಾಗಿದೆ.

ತಾಲೂಕಿನ ಹಬಟೂರು ಕೊಪ್ಪಲು ಗ್ರಾಮದ ವೃಷಭೇಂದ್ರ ಎಂಬ ರೈತರು ಎಂದಿನಂತೆ ತಮ್ಮ ಜಮೀನಿನಲ್ಲಿ 6 ವರ್ಷದ 1 ಲಕ್ಷ ಬೆಲೆಬಾಳುವ ಹಳಿಕಾರ್ ಎತ್ತುಗಳನ್ನು ಮೇಯಿಸುತ್ತಿದ್ದಾಗ ಮಧ್ಯಾಹ್ನ ಸುರಿದ ಮಳೆಯಿಂದಾಗಿ ಜಮೀನಿನ ಆಲದ ಮರದ ಕೆಳಗೆ ಆಶ್ರಯ ಪಡೆದ ಸಂದರ್ಭ ಬಡಿದ ಸಿಡಿಲಿನಿಂದಾಗಿ ಎರಡು ಎತ್ತುಗಳು ಸ್ಥಳದಲ್ಲೇ ಸಾವನ್ನಪ್ಪಿದ್ದು ರೈತನಿಗೆ ಆಘಾತವಾಗಿ ಪರಿಹಾರಕ್ಕೆ ಮನವಿ ಮಾಡಿದ್ದಾರೆ.

ಈ ಸಂಬಂಧ ರೈತ ವೃಷಭೇಂದ್ರ ಪಟ್ಟಣದ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು ಸ್ಥಳಕ್ಕೆ ಮುತ್ತೂರು ಗ್ರಾಮದ ಪಶು ವೈದ್ಯಾಧಿಕಾರಿ ಡಾ.ಮಧುಸೂದನ್ ಭೇಟಿ ನೀಡಿ, ಪರಿಶೀಲಿಸಿ ವರದಿ ನೀಡಿದ್ದಾರೆ.

ಪಟ್ಟಣದ ಬಿ.ಎಂ. ರಸ್ತೆಗೆ ಹೊಂದಿಕೊಂಡಂತಿರುವ ಚನ್ನಬಸಪ್ಪ ಎಂಬುವರಿಗೆ ಸೇರಿದ ಹಳೆಯ ಮನೆಯ ಮುಂಭಾಗ ವಿದ್ದ ತೆಂಗಿನಮರ ಬಿರುಗಾಳಿಗೆ ಉರುಳಿದ ಪರಿಣಾಮ ಬಲಬದಿಯ ಹೋಟೆಲ್ ಕಟ್ಟಡದ ಕಿಟಕಿ ಗಾಜು ಒಡೆದು ಕಟ್ಟಡಕ್ಕೆ ಹಾನಿ ಉಂಟಾಗಿದೆ. ಮಧ್ಯಾಹ್ನ ಆರಂಭವಾದ ಮಳೆ ಸಂಜೆಯಾದರೂ ನಿಲ್ಲದೆ ಗುಡುಗು ಮಿಂಚು ಸಹಿತ ಆರ್ಭಟ ಮುಂದುವರೆಸಿತ್ತು.



ಟಿ.ನರಸೀಪುರ ತಾಲೂಕಲ್ಲಿ ಭಾರೀ ಬಿರುಗಾಳಿ ಮಳೆ

ಧರೆಗುರುಳಿದ ಮರಗಳು, ವಿದ್ಯುತ್ ಕಂಬಗಳು, ಅಪಾರ ಬಾಳೆ ಬೆಳೆ ನಷ್ಟ







ಟಿ.ನರಸೀಪುರ, ಮೇ 11– ಟಿ.ನರಸೀಪುರ ತಾಲೂಕಿನಲ್ಲಿ ನಿನ್ನೆ ರಾತ್ರಿ ಮತ್ತು ಇಂದು ಸುರಿದ ಭಾರೀ ಮಳೆ– ಗಾಳಿಗೆ ನೂರಾರು ಮರಗಳು, ವಿದ್ಯುತ್ ಕಂಬಗಳು ಧರೆಗುರುಳಿದ್ದು, ಭಾರೀ ಪ್ರಮಾಣದ ಬೆಳೆ ನಾಶವಾಗಿದೆ. ಇದರಿಂದ ಜನಜೀವನ ಅಸ್ತವ್ಯಸ್ತಗೊಂಡು ಪರದಾಡುವಂತಾಯಿತು.

ನಿನ್ನೆ ರಾತ್ರಿ ಸುರಿದ ಭಾರೀ ಮಳೆಗೆ ತಾಲೂಕು ಕುಪ್ಯಾ ಗ್ರಾಮದಲ್ಲಿ ರೈತ ಪುಟ್ಟಮಾದು ಅವರಿಗೆ ಸೇರಿದ ಸುಮಾರು ಎರಡೂವರೆ ಎಕರೆ ಪ್ರದೇಶದಲ್ಲಿ ಬೆಳೆದಿದ್ದ ಬಾಳೆ ಬೆಳೆ ಸಂಪೂರ್ಣ ನಾಶವಾಗಿದೆ. ಈ ಬೆಳೆಗಾಗಿ ಸುಮಾರು 4 ಲಕ್ಷ ರೂಪಾಯಿ ಸಾಲ ಮಾಡಿ ಬೆಳೆದಿದ್ದರು ಎನ್ನಲಾಗಿದ್ದು, ಫಸಲು ಕೈ ಸೇರುವ ಮುನ್ನ ಮಣ್ಣು ಪಾಲಾದ ಬೆಳೆಯಿಂದ ಕಂಗಲಾಗಿರುವ ರೈತ ಪುಟ್ಟಮಾದು ಸೂಕ್ತ ಪರಿಹಾರ ನೀಡುವಂತೆ ಒತ್ತಾಯಿಸಿದ್ದಾರೆ.

ಇಂದು ಸಂಜೆ ತಾಲೂಕಿನಾದ್ಯಂತ ಬಿರುಗಾಳಿ ಸಹಿತ ಬಾರಿ ಮಳೆ ಬಿದ್ದ ಪರಿಣಾಮ ತಾಲೂಕಿನ ಸಿ.ಬಿ.ಹುಂಡಿ ಗ್ರಾಮ ಸೇರಿದಂತೆ ವಿವಿಧೆಡೆ ರಸ್ತೆ ಬದಿಯ ಮರಗಳು ನೆಲಕ್ಕುರುಳಿ ಬಿದ್ದ ಪರಿಣಾಮ ರಸ್ತೆ ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಯಿತು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿನ ಮರ ಉರುಳಿ ಬಿದ್ದು ಕಾಂಪೌಂಡ್ ಜಖಂಗೊಂಡರೆ, ವಿದ್ಯೋದಯ ಕಾಲೇಜು ವೃತ್ತದಲ್ಲಿ ಪುರಸಭೆ ವತಿಯಿಂದ ಅಳವಡಿಸಲಾಗಿದ್ದ ಬೃಹತ್ ಗಾತ್ರದ ಎಲ್ಇಡಿ ಸ್ಕ್ರೀನ್ ನೆಲಕ್ಕುರುಳಿ ಬಿದ್ದು ನುಚ್ಚುನೂರಾಗಿದೆ. ಬಿರುಗಾಳಿ ಸಹಿತ ಬಿದ್ದ ಭಾರೀ ಮಳೆಯಿಂದ ಪಟ್ಟಣದಾದ್ಯಂತ ವಿದ್ಯುತ್ ಸ್ಥಗಿತಗೊಳಿಸಲಾಗಿತ್ತು.

ಚುನಾವಣೆ ಆಯ್ತು, ಈಗ ಗೆಲುವಿನ ಲೆಕ್ಕಾಚಾರ...

ಬೆಂಬಲಿಗರೊಂದಿಗೆ ಚರ್ಚಿಸುತ್ತಿರುವ ಹರ್ಷವರ್ಧನ್, ದರ್ಶನ್ ಧ್ರುವನಾರಾಯಣ್

ನಂಜನಗೂಡು, ಮೇ 11– ನಂಜನಗೂಡು ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣೆಯ ಭರಾಟೆ ಮುಗಿದು ಗುರುವಾರ ಬಿಜೆಪಿ ಅಭ್ಯರ್ಥಿ ಬಿ.ಹರ್ಷವರ್ಧನ್ ಮತ್ತು ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ್ ಅವರು ಕಾರ್ಯಕರ್ತರೊಡನೆ ಸೋಲು–ಗೆಲುವಿನ ಲೆಕ್ಕಾಚಾರದಲ್ಲಿ ಮಗ್ನರಾದರು.

ಬಿಜೆಪಿ ಅಭ್ಯರ್ಥಿ ಹಾಲಿ ಶಾಸಕ ಬಿ.ಹರ್ಷವರ್ಧನ್‌ರವರು ತಮ್ಮ ಮೈಸೂರಿನ ನಿವಾಸದಲ್ಲಿ ಕಾರ್ಯಕರ್ತರನ್ನು ಭೇಟಿಯಾಗಿ ಪ್ರತಿ ಮತಗಟ್ಟೆಯಲ್ಲಿ ನಡೆದಿರುವ ಶೇಕಡಾವಾರು ಮತಗಳನ್ನು ಪರಿಶೀಲಿಸಿ ಪ್ರತಿ





ಹರ್ಷವರ್ಧನ್ ದರ್ಶನ್

ಮತಗಟ್ಟೆಯಲ್ಲಿ ಇಂತಿಷ್ಟು ಮತಗಳು ನಮಗೆ ಸಿಗಬಹುದು ಎಂಬ ಲೆಕ್ಕಾಚಾರದ ಚರ್ಚೆಯಲ್ಲಿ ತೊಡಗಿದ್ದರು.

'ಮೈಸೂರು ಮಿತ್ರ' ನೊಂದಿಗೆ ಮಾತನಾಡಿದ ಹರ್ಷವರ್ಧನ್, ಈ ಬಾರಿ ನಾನು ನನ್ನ ಅಭಿವೃದ್ಧಿಯ ವಿಚಾರವನ್ನು ಮುಂದಿಟ್ಟುಕೊಂಡು ಚುನಾವಣೆ ಎದುರಿಸಲಾಗಿತ್ತು. ಕ್ಷೇತ್ರದಲ್ಲಿ 823 ಕೋಟಿಗೂ ಹೆಚ್ಚಿನ ಅಭಿವೃದ್ಧಿ ಕೆಲಸಗಳನ್ನು ಮಾಡಿರುವ ಕಾರಣದಿಂದಾಗಿ ಮತದಾರರಿಗೆ ಮನವರಿಕೆ ಮಾಡಿ ಮರು ಆಯ್ಕೆ ಮಾಡುವಂತೆ ಮನವೊಲಿಸಲಾಗಿತ್ತು. ಕ್ಷೇತ್ರದಲ್ಲಿ ಎಲ್ಲೆಡೆ ಅನುಕಂಪವನ್ನು ಮೀರಿ ಅಭಿವೃದ್ಧಿಯಿಂದಾಗಿ ಬಿಜೆಪಿ ಪಕ್ಷಕ್ಕೆ ಹೆಚ್ಚಿನ ಮತಗಳನ್ನು ಪಡೆಯಲು ಯಶಸ್ವಿಯಾಗಿರ್ದೇವೆ ಆದ್ದರಿಂದ ನನ್ನ ಅಂದಾಜಿನ ಪ್ರಕಾರ ಈ ಬಾರಿ ಸುಮಾರು 10 ಸಾವಿರ ಮತಗಳ ಅಂತರದಿಂದ ಗೆಲುವು ಸಾಧಿಸಬಹುದು ಎಂಬ ವಿಶ್ವಾಸವಿದೆ ಎಂದರು.

ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ್ ಮಾತನಾಡಿ, ಕ್ಷೇತ್ರದಲ್ಲಿ ನನ್ನ ತಂದೆ 2 ಬಾರಿ ಸಂಸದರಾಗಿ ಮಾಡಲಾಗಿದ್ದ ಅಭಿವೃದ್ಧಿ ಕಾರ್ಯಗಳಿಂದ ಮತ್ತು ನನ್ನ ತಂದೆಯು ಬಿಟ್ಟು ಹೋಗಿದ್ದ ಅಪಾರ ಅಭಿಮಾನಿಗಳು, ತಾಯಂದಿರು ನನ್ನನ್ನು ಕೈ ಹಿಡಿದಿದ್ದಾರೆ. ಎಲ್ಲಾ ವರ್ಗದ ಜನರೂ ಕೂಡ ಪಕ್ಷಾತೀತವಾಗಿ ನನಗೆ ಬೆಂಬಲ ನೀಡಿ ಹೆಚ್ಚಿನ ಮತ ನೀಡಿರುವ ಕಾರಣ ಈ ಬಾರಿ ನನ್ನ ಗೆಲುವು ಶತಸಿದ್ಧ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕ್ಷೇತ್ರದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳ ನಡುವೆ ನೇರ ಹಣಾಹಣಿ ಏರ್ಪಟ್ಟಿದ್ದ ಕಾರಣದಿಂದಾಗಿ ಎರಡೂ ಪಕ್ಷಗಳ ಕಾರ್ಯಕರ್ತರ ನಡುವೆ ಭರ್ಜರಿ ಬೆಟ್ಟಿಂಗ್ ನಡೆದಿರುವ ಬಗ್ಗೆ ವರದಿಯಾಗಿದೆ. ನಗರದ ಟೀ ಕ್ಯಾಂಟೀನ್, ಬೇಕರಿಗಳಲ್ಲಿ ಮಾತುಕತೆಯ ಚರ್ಚೆಯಲ್ಲಿ ತೊಡಗಿಕೊಂಡಿದ್ದು ಕಾರ್ಯಕರ್ತರು ಲಕ್ಷಾಂತರ ಹಣ, ಜಮೀನುಗಳನ್ನು ಬಾಜಿಯಲ್ಲಿ ಇಟ್ಟಿರುವ ಬಗ್ಗೆ ಮಾಹಿತಿ ಒದಗಿಬಂದಿದೆ ತೀವ್ರಚರ್ಚೆಗೆ ಒಳಗಾಗಿರುವ ನಂಜನಗೂಡು ಕ್ಷೇತ್ರದಲ್ಲಿ ಅನುಕಂಪ ಕೈ ಹಿಡಿದು ದರ್ಶನ್‌ಧ್ರುವರವರಿಗೆ ವಿಜಯಲಕ್ಷ್ಮಿ ಕೈ ಹಿಡಿಯುವಳೋ? ಅಥವಾ ಹರ್ಷವರ್ಧನ್ ಅವರ ಅಭಿವೃದ್ಧಿಗೆ ಜಯ ದೊರಕುವುದೋ ವಿಜಯಲಕ್ಷ್ಮಿ ಯಾರಿಗೆ ಒಲಿಯುವಳು ಎಂಬುದನ್ನು ಕಾದು ನೋಡಬೇಕಿದೆ.

ಪದ್ಮ ಚಿತ್ರಮಂದಿರ	**(ದೂ: 2521923)**
ಚಾಂದಿನಿ ಬಾರ್ (ಕ) 2 ಪ್ರದರ್ಶನಗಳು, ವಿರೂಪಾಕ್ಷ (ತೆ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ರಾಘವೇಂದ್ರ ಸ್ಟೋರ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	**(ದೂ: 2520009)**
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಛತ್ರಪತಿ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ವಿರೂಪಾಕ್ಷ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಕಸ್ಟಡಿ (ತೆ)	4 ಪ್ರದರ್ಶನಗಳು
ರಾಜ್‌ಕಮಲ್	
ಕೇರಳ ಸ್ಟೋರಿ (ಹಿ)	4 ಪ್ರದರ್ಶನಗಳು
ಸಂಗಂ	
ರಾಮಬಾಣಂ (ತೆ)	4 ಪ್ರದರ್ಶನಗಳು
ಲಿಡೋ	
ಪಿಎಸ್–2 (ತ)	4 ಪ್ರದರ್ಶನಗಳು
ತಿಬ್ಬಾದೇವಿ	
ವಿರೂಪಾಕ್ಷ (ತೆ)	4 ಪ್ರದರ್ಶನಗಳು
ಪ್ರಭಾ	
ಹೊಯ್ಸಳ(ಕ)	4 ಪ್ರದರ್ಶನಗಳು

ಭಾರೀ ಮಳೆಗೆ ಮನೆ ಗೋಡೆ ಕುಸಿತ



ಹಿರೀಕ್ಯಾತನಹಳ್ಳಿ, ಮೇ 11– ಭಾರೀ ಮಳೆಗೆ ಮನೆ ಗೋಡೆ ಕುಸಿದಿರುವ ಘಟನೆ ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಮದಲ್ಲಿ ಸೋಮವಾರ ರಾತ್ರಿ ನಡೆದಿದೆ.

ಗ್ರಾಮದ ನಿವಾಸಿ ರಾಜಮ್ಮ ಚೆಲುವಯ್ಯ ದಂಪತಿಗೆ ಸೇರಿದ ಮನೆ ಕುಸಿದಿರುವುದು. ಭಾರೀ ಮಳೆಗೆ ಮನೆ ಗೋಡೆ ಕುಸಿದಿದ್ದು, ದವಸ ಧಾನ್ಯ, ಪಾತ್ರೆಗಳು ಸೇರಿದಂತೆ ದಿನಬಳಕೆಯ ವಸ್ತುಗಳು ನಾಶವಾಗಿ ಅಪಾರ ನಷ್ಟ ಸಂಭವಿಸಿದೆ. ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸೂಕ್ತ ಪರಿಹಾರ ದೊರಕಿಸಿಕೊಡುವಂತೆ ಸಂತ್ರಸ್ತರಾದ ರಾಜಮ್ಮ ಚೆಲುವಯ್ಯ ಮನವಿ ಮಾಡಿದ್ದಾರೆ.

ಚುನಾವಣೆ ಮುಗಿಸಿ ಜಮೀನಿನತ್ತ ಮುಖ ಮಾಡಿದ ರೈತಾಪಿವರ್ಗ

ಪಿರಿಯಾಪಟ್ಟಣ, ಮೇ 11– ತಾಲೂಕಿನ ಬೆಟ್ಟದಪುರ ವ್ಯಾಪ್ತಿಯಲ್ಲಿ ಭಾರೀ ಮಳೆಗೆ ಬೆಟ್ಟದಪುರ, ಭುವನಹಳ್ಳಿ, ಬೆಕ್ಕರೆ, ಕೂರಗಲ್ಲು, ಈಚೂರು ಬಾರಸೆ, ಜೋಗನಹಳ್ಳಿ, ಕೊಣಸೂರು, ಆಯ್ತನಹಳ್ಳಿ ಸಿಗೂರ ಸೇರಿದಂತೆ ತಾಲೂಕಿನ ಬಹುತೇಕ ಭಾಗಗಳ ರೈತರಿಗೆ ಹರ್ಷ ತಂದಿದ್ದು, ಜಮೀನಿನಲ್ಲಿ ವ್ಯವಸಾಯ ಮಾಡಲು ಮುಂದಾಗಿದ್ದಾರೆ.

ಚುನಾವಣೆ ಕಾವು ಮುಗಿದು ಇದೀಗ ರೈತರು ತಮ್ಮ ವ್ಯವಸಾಯದತ್ತ ಗಮನ ಹರಿಸಲು ಮುಂದಾಗಿರುವ ವೇಳೆ ಸುರಿದ ಮಳೆ ಭಾರೀ ಅನುಕೂಲ ಮಾಡಿದೆ. ನಿನ್ನೆ ಚುನಾವಣೆ ಇದ್ದರೂ ಸಹ ಮಳೆ ಬಾರದೆ



ಇರುವುದರಿಂದ ಹೆಚ್ಚು ಮತದಾನವಾಗಲು ಅವಕಾಶ ಮಾಡಿಕೊಟ್ಟಿತ್ತು ಇಂದು ಸುರಿದ ಮಳೆಯಿಂದಾಗಿ ರೈತರು ತಮ್ಮ ಜಮೀನುಗಳಲ್ಲಿ ತಂಬಾಕು ನಾಟಿ ಮಾಡಲು ಅನುಕೂಲವಾಯಿತು.

ಬೆಟ್ಟದಪುರ ಸಮೀಪದ ಕೂರುಗಲ್ಲು ಗ್ರಾಮದಲ್ಲಿ ಭಾರೀ ಮಳೆಗೆ ಮನೆಗೆ ನುಗ್ಗಿದ ನೀರಿನಿಂದ ಕುಟುಂಬಸ್ಥರು ಆತಂಕಕ್ಕೆ ಈಡಾಗಿದ್ದರು. ಸ್ಥಳೀಯರು ಮನೆಯ ನೀರನ್ನು ಹೊರಚೆಲ್ಲಿ ರೈತ ಕುಟುಂಬವನ್ನು ರಕ್ಷಿಸಿದರು. ಅಲ್ಲದೆ ಈ ಬಾರಿ ತಂಬಾಕು ನಾಟಿ ಶೇ.80 ರಷ್ಟು ಭಾಗ ಮುಗಿದಿದ್ದು, ಇನ್ನೆರಡು ದಿನದಲ್ಲಿ ರೈತರು ತಂಬಾಕು ನಾಟಿಯನ್ನು ಮುಗಿಸಲಿದ್ದಾರೆ.

ಕಾಂಗ್ರೆಸ್‌ಗೆ ಬಹುಮತ ಖಚಿತ

ತಿ.ನರಸೀಪುರ, ಮೇ 11– ರಾಜ್ಯದಲ್ಲಿ ಕಾಂಗ್ರೆಸ್ ಪರವಾದ ಅಲೆಯಿರುವುದರಿಂದ ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ಸ್ಪಷ್ಟ ಬಹುಮತದೊಂದಿಗೆ ನಮ್ಮದೇ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದು ಕಾಂಗ್ರೆಸ್ ಅಭ್ಯರ್ಥಿ, ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹೇಳಿದರು.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಆಡಳಿತರೂಢ ಬಿಜೆಪಿಗೆ ವಿರೋಧಿ ಅಲೆಯಿದ್ದು, ಈ ಬಾರಿಯ ಜನಾದೇಶ ನಮ್ಮ ಪರವಾಗಿಯೇ ಇರುವುದರಿಂದ ಕಾಂಗ್ರೆಸ್ ಸ್ವಂತ ಬಲದ ಮೇಲೆ ಸರ್ಕಾರವನ್ನು ರಚಿಸಲಿದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು.

ಶಿಕ್ಷಣದಿಂದ ಮಾತ್ರ ಸಮಾಜದ ಮುನ್ನೆಲೆಗೆ ಬರಲು ಸಾಧ್ಯ

ನಂಜನಗೂಡು, ಮೇ 11– ಉಪ್ಪಾರ ಸಮಾಜ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಅತ್ಯಂತ ಹಿಂದುಳಿದ ಸಮಾಜವಾಗಿದ್ದು ಸಮಾಜದ ಪ್ರತಿಯೊಬ್ಬರೂ ಸಹ ಸಂಘಟಿತರಾಗಿ, ನಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿದಾಗ ಮಾತ್ರ ಸಮಾಜದ ಮುನ್ನೆಲೆಗೆ ಬರಲು ಸಾಧ್ಯ ಎಂದು ಮುಖಂಡ ಬಾಲಚಂದ್ರು ಹೇಳಿದರು.

ನಗರದ ಉಪ್ಪಾರ ಸಮುದಾಯ ಭವನದಲ್ಲಿ ಶ್ರೀ ಭಗೀರಥ ಮಹರ್ಷಿಯವರ ಜಯಂತಿಯ ಅಂಗವಾಗಿ ತಾಲೂಕು ಉಪ್ಪಾರ ಸಂಘದ ವತಿಯಿಂದ ಆಯೋಜಿಸಿದ್ದ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಭಗೀರಥ ಮಹರ್ಷಿಯವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು. ಎಲ್ಲಾ ರಾಜಕೀಯ ಪಕ್ಷಗಳೂ ಸಹ ನಮ್ಮ ಸಮಾಜವನ್ನು ಬಳಕೆ ಮಾಡಿಕೊಂಡು ಸ್ಥಾನಮಾನಗಳನ್ನು ನೀಡದೆ ವಂಚಿಸುತ್ತಿವೆ. ಆದ್ದರಿಂದ ಸಮಾಜದ ಎಲ್ಲಾ ಮುಖಂಡರೂ ಸಹ ಸಂಘಟಿತರಾದಾಗ ಮಾತ್ರ ನಮ್ಮ ಹಕ್ಕುಗಳನ್ನು ಪಡೆಯಲು ಸಾಧ್ಯ. ಶೋಷಿತ ಸಮಾಜ ಮುಖ್ಯವಾಹಿನಿಗೆ ಬರಲು ಶಿಕ್ಷಣವೊಂದೇ ಪ್ರಮುಖ ಅಸ್ತ್ರ. ಆದ್ದರಿಂದ ಎಲ್ಲರೂ ಕಡ್ಡಾಯವಾಗಿ ಮಕ್ಕಳಿಗೆ ಶಿಕ್ಷಣ ಒದಗಿಸಬೇಕು. ಸಮಾಜದಲ್ಲಿನ ಬಾಲ್ಯವಿವಾಹ ತಡೆಗಟ್ಟಬೇಕು ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಎಂ.ನಾಗರಾಜು, ಮುದ್ದುಮಾದಶೆಟ್ಟಿ, ಕನಕನಗರಮಹದೇವ್ರ, ಕರಳಾಪುರ ನಾಗರಾಜು, ಕಲ್ಲಂಗಡಿಮಹದೇವಸ್ವಾಮಿ, ಶ್ರೀನಿವಾಸ್, ಸಿದ್ದಶೆಟ್ಟಿ, ಎಂ.ರಾಜು, ಹೆಮ್ಮರಗಾಲ ನಾಗರಾಜು, ಮಹದೇವು, ಎಪಿಎಂಸಿ ಮಾಜಿ ಅಧ್ಯಕ್ಷ ಮುದ್ದುಮಾದಶೆಟ್ಟಿ, ನಗರಸಭಾ ಉಪಾಧ್ಯಕ್ಷೆ ನಾಗಮಣಿಶಂಕರಪ್ಪ, ಸದಸ್ಯೆ ಮಹದೇವಮ್ಮ, ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಪಿರಿಯಾಪಟ್ಟಣದಲ್ಲಿ ಜೆಡಿಎಸ್, ಕಾಂಗ್ರೆಸ್ ನಡುವೆ ಪೈಪೋಟಿ: ಭಾರೀ ಬೆಟ್ಟಿಂಗ್ ಭರಾಟೆ

ಪಿರಿಯಾಪಟ್ಟಣ, ಮೇ 11– ಪಿರಿಯಾಪಟ್ಟಣದಲ್ಲಿ ಜೆಡಿಎಸ್ ಅಭ್ಯರ್ಥಿ ಕೆ.ಮಹದೇವ್ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಕೆ.ವೆಂಕಟೇಶ್ ಅವರ ಪರವಾಗಿ ಕಾರ್ಯಕರ್ತರು ಜಮೀನು ಹಾಗೂ ಹಣದ ರೂಪದಲ್ಲಿ ಬೆಟ್ಟಿಂಗ್ ಕಟ್ಟುತ್ತಿದ್ದಾರೆ. ಬೆಟ್ಟದಪುರ ಸಮೀಪದ ಹಾರನಹಳ್ಳಿ ಗ್ರಾಮದ ಯೋಗೇಶ್ ಗೌಡ ತನ್ನ ಒಂದು ಎಕರೆ 37 ಕುಂಟೆ ಜಮೀನನ್ನು ಕೆ.ವೆಂಕಟೇಶ್ ಗೆಲುವು ಸಾಧಿಸುತ್ತಾರೆ ಎಂದು ಬೆಟ್ಟಿಂಗ್ ಕಟ್ಟಲು ತೀರ್ಮಾನಿಸಿದ್ದಾರೆ. ಹಾಗೆಯೇ ಬೆಟ್ಟದಪುರ ಸಮೀಪದ ಬೆಟ್ಟದತುಂಗಾ ಮೇಘಲು ಕೊಪ್ಪಲು ಗ್ರಾಮದ ಚಿಕ್ಕೇಗೌಡ ಎಂಬ ಕಾರ್ಯಕರ್ತ ತನ್ನ ಎರಡು ಎಕರೆ ಜಮೀನನ್ನು ವೆಂಕಟೇಶ ಪರವಾಗಿ ಕಟ್ಟಲು ಸಿದ್ಧವಾಗಿದ್ದಾರೆ. ಹಾಗೆಯೇ ಕೆ.ಮಹಾದೇವ ಪರ ಬೆಟ್ಟದಪುರದಲ್ಲಿ 30 ಲಕ್ಷಕ್ಕೂ ಹೆಚ್ಚು ಬೆಟ್ಟಿಂಗ್ ಕಟ್ಟಿರುವ ಕಾರ್ಯಕರ್ತರು ಇನ್ನೂ ಹೆಚ್ಚಿನ ರೀತಿಯಲ್ಲಿ ಬೆಟ್ಟಿಂಗ್ ಭರಾಟೆ ನಡೆಯುವ ಮುನ್ಸೂಚನೆ ಕಾಣುತ್ತಿದೆ.

ಮೂಗೂರಿನಲ್ಲಿ ಬಸವ ಜಯಂತಿ ಆಚರಣೆ

ಮೂಗೂರು, ಮೇ 11– ಬಸವ ಜಯಂತಿ ಆಚರಣೆಯ ಅಂಗವಾಗಿ ಮೂಗೂರಿನಲ್ಲಿ ಬಸವ ಬಳಗ ಹಾಗೂ ಗ್ರಾಮಸ್ಥರಿಂದ ಭಾನುವಾರ ರಾತ್ರಿ ಹೂವಿನಿಂದ ಅಲಂಕರಿಸಿದ ಬಸವಣ್ಣನವರ ಭಾವಚಿತ್ರದೊಂದಿಗೆ ಎತ್ತಿನಗಾಡಿಯಲ್ಲಿ ಮೆರವಣಿಗೆ ನಡೆಯಿತು.

ಗ್ರಾಮದ ಶ್ರೀ ಗುರುಮಲ್ಲೇಶ್ವರ ಬಿಕ್ಷದ ಮಠದ ಬಳಿ ಸಂಘಟಿತರಾದ ಮುಖಂಡರು ಬಸವ ಬಳಗದ ಕಾರ್ಯಕರ್ತರು, ಮೆರವಣಿಗೆಗೆ ಚಾಲನೆ ನೀಡಿದರು.

ಮಠದ ಬಳಿಯಿಂದ ಆರಂಭಗೊಂಡ ಮೆರವಣಿಗೆಯಲ್ಲಿ ಸ್ಥಳೀಯ ನಿವಾಸಿಗಳಿಂದ ಪೂಜಾ ಕಾರ್ಯ ನಡೆಯಿತು. ರಥಬೀದಿ, ಗೌಡರ ಬೀದಿ, ಬಂಡಿ ಮಂಟಪದ ಮೂಲಕ ಹೊರಟು ಶ್ರೀ ಗುರುಮಲ್ಲೇಶ್ವರ ಬಿಕ್ಷದ ಮಠದಲ್ಲಿ ಅಂತ್ಯಗೊಂಡಿತು. ಈ ಸಂದರ್ಭದಲ್ಲಿ ಎಂ ಪಿ ನಾಗರಾಜು, ಮಹೇಶ್, ಎಂ.ಬಿ. ಕುಮಾರ್, ಮಹೇಂದ್ರ ಕುಮಾರ್, ಮಹಾದೇವ ಸ್ವಾಮಿ, ಶರತ್ ಕುಮಾರ್ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಶ್ರೀ ಶಿವಯೋಗೀಶ್ವರ ವಿದ್ಯಾಸಂಸ್ಥೆಗೆ ಶೇ.100 ಫಲಿತಾಂಶ

ಹಿರೀಕ್ಯಾತನಹಳ್ಳಿ, ಮೇ 11– ಹುಣಸೂರು ತಾಲೂಕಿನ ಗಾವಡಗೆರೆಯ ಶ್ರೀ ಗುರುಲಿಂಗ ಜಂಗಮ ಮಠದ ಶ್ರೀ ಶಿವಯೋಗೀಶ್ವರ ವಿದ್ಯಾಸಂಸ್ಥೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಬಂದಿದೆ.

ಉನ್ನತ ದರ್ಜೆಯಲ್ಲಿ 6, ಪ್ರಥಮ ದರ್ಜೆಯಲ್ಲಿ 39, ದ್ವಿತೀಯ ದರ್ಜೆಯಲ್ಲಿ 12 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಭಾರೀ ಮಳೆ

ನೆಲಕ್ಕುರುಳಿದ ವಿದ್ಯುತ್ ಕಂಬಗಳು, ಮರಗಳು









ಹೆಚ್.ಡಿ. ಕೋಟೆ, ಮೇ 11– ತಾಲೂಕಿನಲ್ಲಿ ಗುರುವಾರ ರಾತ್ರಿ ಭಾರೀ ಮಳೆ ಸುರಿದಿದ್ದು, ಭಾರೀ ಗಾತ್ರದ ಮರಗಳು ವಿದ್ಯುತ್ ಕಂಬಗಳು ಧರೆಗುರುಳಿವೆ.

ತಾಲೂಕಿನ ಭೀಮನಹಳ್ಳಿ, ಮುಸ್ಕೆರೆ, ರಾಜೇಗೌಡನಹುಂಡಿ, ಕೈಲಾಸಪುರ, ಪಡುಕೋಟೆ, ನಂಜನಾಯಕನಹಳ್ಳಿ ಸೇರಿದಂತೆ ಇನ್ನೂ ಹಲವಾರು ಗ್ರಾಮಗಳಲ್ಲಿ ಗುರುವಾರ ಸುರಿದ ಭಾರೀ ಗಾಳಿ–ಮಳೆಗೆ ವಿದ್ಯುತ್ ಕಂಬಗಳು ಮುರಿದು ಬಿದ್ದಿದ್ದು, ಪ್ರಮುಖ ಮುಖ್ಯ ರಸ್ತೆಗಳಲ್ಲಿ ಭಾರೀ ಗಾತ್ರದ ಮರಗಳು ಉರುಳಿ ಬಿದ್ದಿವೆ.

ಅಂತರಸಂತೆ ಗ್ರಾಮದ ನಿವಾಸಿ ಸುಬ್ರಹ್ಮಣ್ಯ ಅವರ ಜಮೀನಿನಲ್ಲಿ ಇರುವ ಮನೆಯ ಮೇಲ್ಛಾವಣಿ ಗಾಳಿ ರಭಸಕ್ಕೆ ಹಾರು ಹೋಗಿವೆ. ಮನೆಯಲ್ಲಿದ್ದ ದಿನಸಿ ಪದಾರ್ಥಗಳು, ಗೊಬ್ಬರ ಮಳೆ ನೀರಿಗೆ ಹಾನಿಯಾಗಿದೆ ಎನ್ನಲಾಗಿದೆ.

ಹಲವಾರು ಗ್ರಾಮಗಳಲ್ಲಿ ತೆಂಗಿನ ಮರ ಗಾಳಿ ರಬಸಕ್ಕೆ ನೆಲಕ್ಕೆ ಉರುಳಿವೆ. ಕೆಲವು ಗ್ರಾಮಗಳಲ್ಲಿ ರಸ್ತೆ ಬದಿಯಲ್ಲಿ ಬಾರಿ ಗಾತ್ರದ ಮರಗಳು ಉರುಳಿದ್ದು ರಸ್ತೆ ಸಂಚಾರಕ್ಕೆ ಅಡ್ಡಿಯಾಗಿವೆ. ವಿಚಾರ ತಿಳಿಯುತ್ತಿದ್ದಂತೆ ಚೆಸ್ಕಾಂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಮರಗಳನ್ನು ತೆರವುಗೊಳಿಸಿ ರಸ್ತೆ ಸಂಚಾರ ಅನುವು ಮಾಡಿಕೊಟ್ಟಿದ್ದಾರೆ. ಹಣ್ಣೂರು ಹಾಗೂ ಅಕ್ಕ ಪಕ್ಕದ ಗ್ರಾಮಗಳಿಗೆ ಸಂಪೂರ್ಣ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

11 ಕೆವಿ ತಂತಿಗಳು ಹಾಗೂ ಎಲ್‌ಟಿ ಕಂಬಗಳು ನೆಲಕ್ಕೆ ಉರುಳಿದ ಸಂದರ್ಭದಲ್ಲಿ ಯಾರಿಗೂ ಯಾವುದೇ ರೀತಿ ಅನಾಹುತಗಳು ಆಗಿಲ್ಲ ಎಂದು ತಿಳಿಸಿದ್ದಾರೆ.

ಬೆಟ್ಟದಪುರ ಪ್ರೌಢಶಾಲೆಗೆ ಉತ್ತಮ ಫಲಿತಾಂಶ

ಬೆಟ್ಟದಪುರ, ಮೇ 11– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಪ್ರೌಢಶಾಲೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಉತ್ತಮ ಫಲಿತಾಂಶ ಬಂದಿದೆ. ಶಾಲೆಯ 118 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಅವರಲ್ಲಿ ಚೇತನ್ 603 ಅಂಕ ಪಡೆದಿದ್ದಾನೆ.

ಪರೀಕ್ಷೆ ಬರೆದಿದ್ದ 118 ವಿದ್ಯಾರ್ಥಿಗಳಲ್ಲಿ 26 ವಿದ್ಯಾರ್ಥಿಗಳು ಅತ್ಯುನ್ನತ, 92 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ, ಇಬ್ಬರು ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಪಾಸಾಗಿದ್ದಾರೆ.

ಡಿಟಿಎಂಎನ್ ಶಾಲೆಗೆ ಉತ್ತಮ ಫಲಿತಾಂಶ

ಬೆಟ್ಟದಪುರ, ಮೇ 11– ಬೆಟ್ಟದಪುರದ ಡಿಟಿಎಂಎನ್ ಶಾಲೆಗೆ ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ 87 ವಿದ್ಯಾರ್ಥಿಗಳಲ್ಲಿ 64 ವಿದ್ಯಾರ್ಥಿಗಳು ಅತ್ಯುತ್ತಮ, ಪ್ರಥಮ ದರ್ಜೆ 23 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಎಲ್.ಪಿ. ಧನ್ಯ ಮತ್ತು ಕೆ.ಎಸ್. ವೇಣುಗೋಪಾಲ್ 625 ಅಂಕಕ್ಕೆ 612 ಅಂಕ ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಚಂದ್ರಕಲಾ .ಡಿ ಮತ್ತು ಸಿಂಚನ .ಜೆ 625ಕ್ಕೆ 611 ಅಂಕ ಪಡೆದು ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ. ಸೌಜನ್ಯಗೌಡ 625ಕ್ಕೆ 610 ಅಂಕ ಪಡೆದು ಮೂರನೇ ಸ್ಥಾನ ಪಡೆದಿದ್ದಾರೆ.

ಸಿ.ಟಿ.ರವಿ ಆಸ್ಪತ್ರೆಗೆ ದಾಖಲು



ಚಿಕ್ಕಮಗಳೂರು, ಮೇ 11– ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಅಭ್ಯರ್ಥಿ ಸಿ.ಟಿ ರವಿ ತಡರಾತ್ರಿ ಕಿಡ್ನಿ ಸಮಸ್ಯೆಯಿಂದ ನಗರದ ಆಶ್ರಯ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಅವರಿಗೆ ಇತ್ತೀಚೆಗೆ ಕಿಡ್ನಿ ಸಮಸ್ಯೆ ಎದುರಾಗಿದ್ದು, ಶಸ್ತ್ರಕ್ರಿಯೆ ಕೂಡಾ ನಡೆದಿತ್ತು. ಇದೀಗ ಬುಧವಾರ ರಾತ್ರಿ ಆರೋಗ್ಯದಲ್ಲಿ ದಿಢೀರ್ ವ್ಯತ್ಯಾಸವಾಗಿದ್ದರಿಂದ ಅವರನ್ನು ಕೂಡಲೇ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಚಿಕ್ಕಮಗಳೂರು ನಗರದ ಆಶ್ರಯ ಆಸ್ಪತ್ರೆಯಲ್ಲಿ ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ವಿಧಾನಸಭಾ ಚುನಾವಣೆಯಲ್ಲಿ ಸ್ಟಾರ್ ಪ್ರಚಾರಕರಾಗಿ ನೇಮಕಗೊಂಡಿದ್ದ ಸಿ.ಟಿ.ರವಿ, ಚಿಕ್ಕಮಗಳೂರು ಕ್ಷೇತ್ರ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಪ್ರಚಾರ ಮಾಡಿದ್ದರು. ನಿನ್ನೆ ಕುಟುಂಬ ಸಮೇತ ಚಿಕ್ಕಮಗಳೂರಿನಲ್ಲಿ ಮತದಾನ ಮಾಡಿದ್ದರು.

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು